ಮೈಸೂರು:
ಕಾವ್ಯಾಲಯ
೧೯೪೩

ಕನ್ನಡ ಕಾವ್ಯಮಾಲೆ—೧೬

ಹಳ್ಳಿಯ ಬಾಳು

ಗೊರೂರು ರಾಮಸ್ವಾಮಿ ಐಯಂಗಾರ್

ಮೈಸೂರು:

ಕಾವ್ಯಾಲಯ

೧೯೪೩

[ಬೆಲೆ, ರೂ. ೧—೦—೦

ಮೊದಲನೆಯ ಮುದ್ರಣ : ೧೯೪೩

ಅರಿಕೆ

ಈ ಚಿಕ್ಕ ಪ್ರಬಂಧ ಸಿದ್ಧವಾಗಿ ಅಚ್ಚಾಗುತ್ತಿರುವಾಗ ನಾನು ಸೆರೆ ಮನೆಯಲ್ಲಿ ಇರುವುದರಿಂದ ಇದರ ಪ್ರೂಫನ್ನು ನಾನು ತಿದ್ದಲು ಅವಕಾಶ ವಾಗಿಲ್ಲ. ಆದರೆ ವಾಚಕರಿಗೆ ಇದರಿಂದ ಲಾಭವೇ ಆಗಿದೆ. ಏಕೆಂದರೆ ನನ್ನ ಮಾನ್ಯ ಮಿತ್ರರಾದ ಶ್ರೀಮಾನ್ ತೀ. ನಂ. ಶ್ರೀಕಂಠಯ್ಯ ಮತ್ತು ಶ್ರೀಮಾನ್ ಕೂಡಲಿ ಚಿದಂಬರಂ ಇವರು ಪ್ರೂಫುಗಳನ್ನು ತಿದ್ದಿದ್ದಾರೆ. ನಾನು ಮಾಡುವುದಕ್ಕಿಂತ ಹೆಚ್ಚು ಸಮರ್ಪಕವಾಗಿ ಈ ಕೆಲಸ ಮಾಡಿದ್ದಾರೆ. ಅವರಲ್ಲಿ ನನಗೆ ಪೂರ್ಣವಾಗಿರುವ ಕೃತಜ್ಞತಾಭಾವವನ್ನು ಇಲ್ಲಿ ಪ್ರಕಟಿಸಿದರೆ, ಮಿತ್ರತ್ವಕ್ಕೆ ಎಲ್ಲಿ ಕೃತಕತೆಯ ರೂಪ ಬರುವುದೋ ಎಂದು ಅವರನ್ನು ಕುರಿತು ಹೆಚ್ಚಾಗಿ ಹೇಳಲು ಹಿಂಜರಿಯುತ್ತೇನೆ.

ಈ ಉಪನ್ಯಾಸ ನಾನು ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿಯೂ, ಇಂಟರ್ಮಿಡಿಯೆಟ್ ಕಾಲೇಜಿನ ಯೂನಿಯನ್ನಿನ ಆಶ್ರಯದಲ್ಲಿಯೂ ಕೊಟ್ಟ ವ್ಯಾಖ್ಯಾನಗಳ ಸಾರಾಂಶ ವಾಗಿದೆ. ತಮ್ಮ ಸಂಸ್ಥೆಗಳ ಆಶ್ರಯದಲ್ಲಿ ಈ ಉಪನ್ಯಾಸಗಳನ್ನು ಮಾಡಲು ಆಹ್ವಾನಿಸಿದುದಕ್ಕಾಗಿ ಆ ಸಂಸ್ಥೆಗಳ ವ್ಯವಸ್ಥಾಪಕರಿಗೆ ಕೃತಜ್ಞನಾಗಿದ್ದೇನೆ.

ಮುದ್ರಣ ಕಾಗದ ದೊರೆಯುವುದು ಇಷ್ಟು ಕಷ್ಟವಾಗಿರುವ ಕಾಲದಲ್ಲಿ, ಕಾವ್ಯಾಲಯದ ವ್ಯವಸ್ಥಾಪಕರು ಇದನ್ನು ಪ್ರಕಟಿಸುವ ಸಾಹಸ ಮಾಡಿದುದಕ್ಕಾಗಿ ಅವರನ್ನು ವಂದಿಸುತ್ತೇನೆ.

ಚಿತ್ರಭಾನು ಸಂವತ್ಸರ
ಪುಷ್ಯ ಬಹುಳ,
ಶಿವಮೊಗ್ಗ ಸಬ್‌ಜೈಲು.

ಗೊರೂರು ರಾಮಸ್ವಾಮಿ ಐಯಂಗಾರ್.

ಕೃತಜ್ಞತೆ

ಶ್ರೀಮಾನ್ ಗೊರೂರು ರಾಮಸ್ವಾಮಿ ಐಯಂಗಾರರು ತಮ್ಮ 'ಹಳ್ಳಿಯ ಬಾಳ'ನ್ನು ಕಾವ್ಯಮಾಲೆಯಲ್ಲಿ ಸೇರಿಸಲು ಒಪ್ಪಿಗೆಯಿತ್ತುದಕ್ಕೆ ನಾನು ಅವರಿಗೆ ಕೃತಜ್ಞನಾಗಿದೇನೆ. ಹಸ್ತಪ್ರತಿ ಮುದ್ರಣಾಲಯವನ್ನು ಸೇರುತ್ತಲೆ ಪ್ರಕಾಶಕರ ದುರ್ದೈವದಿಂದ—ಶ್ರೀಮಾನ್ ರಾಮಸ್ವಾಮಿ ಐಯಂಗಾರರು ಸೆರೆಮನೆಯನ್ನು ಸೇರಿದರು. ಅದರಿಂದ ಹಸ್ತಪ್ರತಿಯನ್ನು ತಿದ್ದುವುದಕ್ಕೂ ಕರಡು ಪ್ರತಿಗಳನ್ನು ನೋಡುವುದಕ್ಕೂ ಅವರಿಗೆ ಅವಕಾಶವಿಲ್ಲವಾಯಿತು. ಮಿತ್ರರಾದ ಶ್ರೀಮಾನ್ ತೀ. ನಂ. ಶ್ರೀಕಂಠಯ್ಯನವರು ಈ ಸಂದರ್ಭದಲ್ಲಿ ಹಸ್ತಪ್ರತಿಯನ್ನು ಓದಿ ನೋಡಿ ಹಲವು ಸಲಹೆಗಳನ್ನೂ ತಿದ್ದುಪಡಿಗಳನ್ನೂ ಸೂಚಿಸಿ ಸಹಾಯ ಮಾಡಿರುತ್ತಾರೆ. ಅವರಿಗೆ ನನ್ನ ಮತ್ತು ಗ್ರಂಥಕರ್ತರ ವಂದನೆಗಳು.

ಕರಡು ಪ್ರತಿಯನ್ನು ತಿದ್ದುವಾಗ ಹಲವೆಡೆ ಸಂದೇಹ ತೋರಿ ನನಗೆ ತಿಳಿದಂತೆ ಅವುಗಳನ್ನು ತಿದ್ದಿದ್ದೇನೆ. ಇನ್ನು ಒಂದೆರಡೆಡೆ ಬದಲಾವಣೆ ತೋಚದೆ ಹಾಗೆಯೆ ಬಿಟ್ಟಿದೇನೆ. ಒಟ್ಟಿನಲ್ಲಿ ಇದರಿಂದ ಗ್ರಂಥಕರ್ತರಿಗೂ ಓದುಗರಿಗೂ ಆಗಿರುವ ಅನ್ಯಾಯವನ್ನು ಅವರು ಮನ್ನಿಸುವರೆಂದು ನಂಬಿದೇನೆ.

ಗ್ರಂಥದ ಮುದ್ರಣ ಅನೇಕ ಕಾರಣಗಳಿಂದ ವಿಳಂಬವಾಯಿತು. ವಿಳಂಬವನ್ನು ಸಹಿಸಿಕೊಂಡು ಪುಸ್ತಕವನ್ನು ಅಂದವಾಗಿ ಮುದ್ರಿಸಿ ಕೊಟ್ಟಿರುವ ವೆಸ್ಲಿ ಪ್ರೆಸ್ಸಿನವರಿಗೆ ನಾನು ಕೃತಜ್ಞನಾಗಿದೇನೆ.

ಮೈಸೂರು,
೨೫-೧-೪೩.

ಕೂಡಲಿ ಚಿದಂಬರಂ.

ವಿವರ

ಹಳ್ಳಿಯ ಬಾಳು

೧. ಮೊದಲ ಮಾತು

ನಮ್ಮ ದೇಶದ ರೈತ ನಮ್ಮ ದೇಶದ ಬೆನ್ನುಮೂಳೆ. ಅವನೇ ನಮ್ಮ ಜನತೆಯ ಜೀವಾಳ. ಅವನಲ್ಲಿ ಅಡಗಿರುವ ಸಂಸ್ಕೃತಿಯೇ ನಮ್ಮ ಪ್ರಾಣ ವಾಯು. ಪರದೇಶದ ನಾಗರಿಕತೆಯ ಪ್ರಭಾವಕ್ಕೆ ಒಳಗಾದ ನಾವು ನಮ್ಮದೆನ್ನುವುದನ್ನೆಲ್ಲಾ ಕಳೆದುಕೊಂಡಿದ್ದೇವೆ. ಆಧುನಿಕ ಪ್ರಪಂಚದಲ್ಲಿ, ನಮಗೆ ಜೀವವನ್ನೂ ಚೈತನ್ಯವನ್ನೂ ಕೊಡುವ ಭಾಗಗಳನ್ನು ಬಿಟ್ಟು, ಶುಷ್ಕವಾದ ಪ್ರವಾಹ ಮಾತ್ರದಲ್ಲಿ ತೇಲಿಕೊಂಡು ಹೋಗುತ್ತಿರುವ ನಮಗೆ ನಮ್ಮಲ್ಲಿಯ ಕಾಳು ಜಳ್ಳು ಎರಡೂ ಬೇಡವಾಗಿವೆ. ಹರ ದಯಾಳ್ ನಾಗ್ ಅವರು ಹೇಳಿದ ಈ ಮಾತುಗಳು ನಮಗೆ ಚೆನ್ನಾಗಿ ಅನ್ವಯಿಸುತ್ತವೆ: "ಜುಟ್ಟು ಯಾತಕ್ಕೆ? ಜನಿವಾರ ಯಾತಕ್ಕೆ? ಇವೆಲ್ಲಾ ಅನಾಗರಿಕತೆಯ ಯಾವುದೋ ಅವಶಿಷ್ಟಗಳು—ಎನ್ನುವಿರಿ. ಆದರೆ ನೀವು ಜುಟ್ಟು ತೆಗೆಸಿ ಕ್ರಾಪು ಬಿಡುವುದರಿಂದ ಪರಸಂಸ್ಕೃತಿಯ ದಾಸರಾಗುತ್ತೀ ರೆಂಬುದನ್ನು ಮರೆಯಬೇಡಿ. ಜನಿವಾರವನ್ನು ನೀವು ತಿರಸ್ಕರಿಸುವಂತೆ ನಿಮ್ಮನ್ನು ಪ್ರೇರಿಸುವುದು ಆ ಪರಸಂಸ್ಕೃತಿ. ಆದುದರಿಂದ ಇಂಗ್ಲಿಷು ಭಾಷೆ ನಿಮ್ಮ ಸಂಸ್ಕೃತಿ ಸಮಾಜಗಳಿಗೆ ಹಿಂದೆ ಯಾವುದೂ ಕೊಡದಿದ್ದಂತಹ ಬಲವಾದ ಏಟು ಕೊಟ್ಟಿದೆ. ಅದರ ಹೊಳಪಿಗೆ ಮೊದಲು ಬಲಿಯಾಗುವವರು ವಿದ್ಯಾವಂತರೆನ್ನಿಸಿಕೊಂಡ ನಾವೇ. ಇಂಗ್ಲಿಷ್ ಪ್ರವೇಶಿಸಿದ ಕಡೆ ನಮ್ಮ ಸ್ವಾಭಿಮಾನವೂ ನಮ್ಮದರಲ್ಲಿ ನಮ್ಮ ಭಕ್ತಿಯೂ ಪಲಾಯನವಾಗುವುದು. ಅದೇ ಇಂಗ್ಲಿಷಿನವನನ್ನು ನೋಡಿ. ನಿಮ್ಮನ್ನು ಹೊಗಳುತ್ತಲೇ ಇರುತ್ತಾನೆ. ನಿಮ್ಮ ಕಲೆ, ನಿಮ್ಮ ಎಲ್ಲೋರ, ಅಜಂತ, ತಾಜ್‌ಮಹಲ್ ಇವುಗಳನ್ನು ಪ್ರಶಂಸಿಸುತ್ತಲೇ ಇರುತ್ತಾನೆ. ನಿಮ್ಮ ಕಾಳಿದಾಸ ಠಾಕೂರರನ್ನು ಮೆಚ್ಚುತ್ತಲೇ ಇರುತ್ತಾನೆ. ಆದರೆ ತನ್ನ ಯಾವುದಾದರೂ ಅಭ್ಯಾಸವನ್ನು

ಬದಲಾಯಿಸಿದ್ದಾನೆಯೇ? ನಡೆ, ನುಡಿ, ಉಡುಪು ಯಾವುದರಲ್ಲಾದರೂ ಅವನು ನಿಮ್ಮನ್ನು ಅನುಕರಿಸುತ್ತಿದ್ದಾನೆಯೇ? ಇಲ್ಲ. ಯಾಕೆ? ಅವನಿಗೆ ಸ್ವಾಭಿಮಾನ ಹೆಚ್ಚು. ಅವನು ಅಭಿಮಾನ ಶೂನ್ಯನಾಗಿಲ್ಲ. ಜಗತ್ತು ನಿಮ್ಮನ್ನು ನೋಡಿ ನಗುವುದೂ ಸಹ ನಿಮಗೆ ತಿಳಿಯುವುದಿಲ್ಲ." ಹರ ದಯಾಳ್ ನಾಗ್ ಅವರು ಹೇಳಿರುವ ಮಾತುಗಳು ಅಖಿಲ ಭಾರತಕ್ಕೇ ಅನ್ವಯಿಸುತ್ತವೆ. ನಮ್ಮ ಕರ್ನಾಟಕಕ್ಕೂ ಅನ್ವಯಿಸುತ್ತವೆ.

ಪಾಶ್ಚಾತ್ಯ ನಾಗರಿಕತೆಗೆ ವಿದ್ಯಾವಂತರೆನ್ನಿಸಿಕೊಂಡವರು ಬಲಿಯಾಗಿರು ವಷ್ಟು ಅವಿದ್ಯಾವಂತರಾದ ಹಳ್ಳಿಯವರು ಒಳಗಾಗಿಲ್ಲವೆಂಬುದು ನಿಜ. ಹೈಸ್ಕೂಲುಗಳಲ್ಲಿ ಈಗ ಇಂಗ್ಲಿಷ್ ವಿದ್ಯಾಭ್ಯಾಸಮಾಡುತ್ತಿರುವ ವಿದ್ಯಾರ್ಥಿ ಗಳಿಗೆ ಸಹ ರಾಮಾಯಣ ಭಾರತಗಳ ಕತೆಗಳು ಸರಿಯಾಗಿ ಗೊತ್ತಿಲ್ಲ ವೆಂಬುದು ಅನೇಕ ಉಪಾಧ್ಯಾಯರು ತಿಳಿದ ವಿಷಯ. ಕಾಲೇಜು ವಿದ್ಯಾರ್ಥಿ ಗಳಿಗೆ ರಾಷ್ಟ್ರೀಯವಾದ ಉತ್ಸಾಹವಿದ್ದರೂ ವಿಚಾರಗಳು ತಿಳಿದಿರುವುದಿಲ್ಲ. ಕಾಲೇಜು ಉಪಾಧ್ಯಾಯರುಗಳಿಗೆ ಷೇಕ್ಸ್‌ಪಿಯರ್, ಮಿಲ್ಟನ್ ಗೊತ್ತಿರು ವಂತೆ ರಾಮಾಯಣ, ಭಾರತ, ಭಾಸ ತಿಳಿದಿರುವುದಿಲ್ಲ. ಕನ್ನಡ ಅಧ್ಯಾಪ ಕರು ಸಹ ಸಾರ್ವಜನಿಕ ಭಾಷಣಗಳಲ್ಲಿ ಇಂಗ್ಲಿಷಿನಿಂದಲೇ ಉದಾಹರಣೆ ಗಳನ್ನು ತೆಗೆದುಕೊಳ್ಳುತ್ತಾರೆ. ನಮ್ಮ ದೇಶದ ಅತ್ಯುತ್ಕೃಷ್ಟರಾದ ಕವಿಗಳನ್ನು ಪರದೇಶದ ಮೂರನೆಯ ನಾಲ್ಕನೆಯ ದರ್ಜೆಯ ಕವಿಗಳೊಂದಿಗೆ ಹೋಲಿಸದಿದ್ದರೆ ಇವರಿಗೆ ತೃಪ್ತಿಯಿಲ್ಲ. ಭಾಸನ ನಾಟಕಗಳ ಸನ್ನಿವೇಶ ಗಳನ್ನು 'ಜೂಲಿಯಸ್ ಸೀಸರ್', 'ಕಿಂಗ್ ಲಿಯರ್'ಗಳೊಂದಿಗೆ ಹೋಲಿ ಸುತ್ತಾರೆ. ಆ ಪರೀಕ್ಷೆಗಳಲ್ಲಿ ನಮ್ಮ ದೇಶದ ಈ ದುರದೃಷ್ಟ ಕವಿಗಳು ಉತ್ತೀರ್ಣರಾಗಬೇಕು. ಇಲ್ಲದಿದ್ದರೆ ಇವರ ಸ್ಥಾನಕ್ಕೆ ಚ್ಯುತಿ ಬರುತ್ತದೆ. ರನ್ನನನ್ನು ಮಿಲ್ಟನ್‌ಗೆ ಹೋಲಿಸಬೇಕು. ಹರಿಹರನನ್ನು ಛಾಸರ್‌ಗೆ ಹೋಲಿಸಬೇಕು. ಈ ಸನ್ನಿ ನಮ್ಮ ಆಧುನಿಕ ನಾಗರಿಕತೆಯಲ್ಲಿ ಹಾಸು ಹೊಕ್ಕಾಗಿ ನೆಯಿದುಕೊಂಡಿದೆ. ಒಂದು ಕಡೆ ಹಿಂದಿನ ಕನ್ನಡ ಸಂಸ್ಕೃತ ಪಂಡಿತರು ಹಿಂದಿನದೆ ಸರಿ ಎಂದು ಮೊಂಡುಬಿದ್ದರೆ, ಮತ್ತೊಂದು ಕಡೆ ಈ ಪಾಶ್ಚಾತ್ಯ ಪಂಡಿತರು ಅವರಷ್ಟೆ ಸಂಕುಚಿತ ಭಾವದಿಂದ ಪಾಶ್ಚಾತ್ಯ

ವಾದದ್ದೆ ಸರಿ, ಇಂಗ್ಲಿಷೆ ಸರಿ ಎಂದು ಹಠ ಹಿಡಿಯುತ್ತಾರೆ. ಈ ಇಬ್ಬರು ಮತಾಂಧರ ಸಾರವನ್ನೂ ಹೀರಿಕೊಂಡು ಕನ್ನಡ ನಾಗರಿಕತೆ ಬೆಳೆಯ ಬೇಕಾಗಿದೆ.

ಆದರೆ ಈ ತಿಕ್ಕಾಟ ತನ್ನ ತೀವ್ರತೆಯಲ್ಲಿ ಹಳ್ಳಿಗಳನ್ನು ಇನ್ನೂ ತನ್ನ ಸೆಳವಿಗೆ ಎಳೆದುಕೊಂಡಿಲ್ಲ. ಇದಕ್ಕೆ ಮುಖ್ಯಕಾರಣ, ಇಂಗ್ಲಿಷರ ರಾಜ್ಯ ಇಲ್ಲಿ ಇನ್ನೂರು ವರುಷಗಳಿಂದ ನಡೆದರೂ ಹಳ್ಳಿಗಳಿಗೆ ಆ ನಾಗರಿಕತೆಯ ಪ್ರಭಾವ ಹೆಚ್ಚಾಗಿ ಸೋಕಿಲ್ಲದಿರುವುದು. ನಮ್ಮ ಜನ ಯಾವುದನ್ನು ಸ್ವೀಕರಿಸುವುದೂ ನಿಧಾನ. ಹಳೆಯದನ್ನು ಬಿಡುವುದೂ ನಿಧಾನ. ಆದುದ ರಿಂದ ಯಾವುದು ನಮ್ಮ ಹಳ್ಳಿಗಳಲ್ಲಿ ಇನ್ನೂ ಉಳಿದಿದೆಯೋ ಅದೇ ನಮ್ಮ ಜೀವನದ ಜೀವಾಳ. ನಾಗರಿಕತೆಗಳ ಹೋರಾಟದಲ್ಲಿ ತಲೆಯೆತ್ತಿಕೊಂಡು ನಿಂತು ನಮ್ಮ ವೈಶಿಷ್ಟ್ಯವನ್ನು ಕಾಪಾಡಿಕೊಂಡಿರುವುದೇ ನಮ್ಮ ಹಳ್ಳಿಗಳ ಸಂಸ್ಕೃತಿ. ರವೀಂದ್ರನಾಥ ಠಾಕೂರರು ಹೇಳಿರುವಂತೆ "ಭಾರತದ ಧರ್ಮ ಅರಣ್ಯಗಳಲ್ಲಿ ಬೆಳೆದ ಧರ್ಮ. ಭಾರತದ ನಾಗರಿಕತೆ ಹಳ್ಳಿಗಳ ನಾಗರಿಕತೆ." ನಮ್ಮ ದೇಶದ ರೈತ ಇಂದಿನವನಲ್ಲ. ಅನೇಕ ಶತಮಾನ ಗಳಿಂದ ಬೆಳೆದುಬಂದು ನಿತ್ಯನಾದವನು. ಅವನ ರಕ್ತದಲ್ಲಿ ನಮ್ಮ ಸಂಸ್ಕೃತಿ ಸೇರಿಕೊಂಡಿದೆ. ಅನೇಕ ಪರಸಂಸ್ಕೃತಿಗಳು ಬಂದು ಅಪ್ಪಳಿಸಿದುದನ್ನು ಅವನು ಜೈಸಿಕೊಂಡು ನಿಂತಿದ್ದಾನೆ. ಬಾಳನ್ನು ಬಾಳುವುದರಲ್ಲಿಯೂ, ಕಷ್ಟಗಳಿಗೆ ಕೆಚ್ಚೆದೆಯನ್ನು ಒಡ್ಡಿ ಸಹಿಸಿ ಜಯಿಸುವುದರಲ್ಲಿಯೂ, ಪ್ರಕೃತಿ ಸೌಂದರ್ಯವನ್ನು ಸವಿಯುವುದರಲ್ಲಿಯೂ, ಕಾವ್ಯವನ್ನು ಸೃಷ್ಟಿಸುವುದ ರಲ್ಲಿಯೂ ಅವನು ಯಾರಿಗೂ ಕಡಿಮೆ ಅಲ್ಲ.

ರೈತನೆಂದು ನಾವು ಹೇಳುವಾಗ ಹಳ್ಳಿಯವರನ್ನೆಲ್ಲಾ ಒಟ್ಟಾಗಿ ಹೇಳು ತ್ತೇವೆ. ಇದರಲ್ಲಿ ಬ್ರಾಹ್ಮಣ, ಒಕ್ಕಲಿಗ, ತುರುಕ, ಹೊಲೆಯ ಎಂಬ ಭೇದ ವಿಲ್ಲ. ಹಳ್ಳಿಯಲ್ಲಿರುವ ಎಲ್ಲಾ ಜನರ ತಿಳಿವಿನ ಮಟ್ಟವೂ ಸ್ವಲ್ಪ ಹೆಚ್ಚು ಕಡಿಮೆ ಒಂದೆ. ಅಜ್ಞಾನ, ದಾರಿದ್ರ್ಯ, ಕುರುಡುನಂಬಿಕೆ, ಅಲಸಿಕೆ ಇವು ಎಲ್ಲರಲ್ಲೂ ಸ್ವಾಭಾವಿಕವಾಗಿ ಮನೆಮಾಡಿಕೊಂಡಿವೆ. ಹೊರಗಿನಿಂದ ನೋಡಿದರೆ, ಇರುವುದಕ್ಕೂ ಬದುಕುವುದಕ್ಕೂ ಯಾವುದೂ ಹಳ್ಳಿಯಲ್ಲಿ

ಅರ್ಹವಾದುದಾಗಿ ತೋರುವುದಿಲ್ಲ. 'ರೈತನ ಜೀವನದಲ್ಲಿ ತಿರುಳಿದೆ. ನಿಲ್ಲತಕ್ಕ ಸಂಸ್ಕೃತಿ ಅವನಲ್ಲಿ ಇದೆ' ಎಂದು ನಮಗೆ ತಿಳಿಯಬೇಕಾದರೆ ಅವನಲ್ಲಿ ಪೂರ್ಣವಾದ ಸಹಾನುಭೂತಿ ಇರಬೇಕು. ಕವಿಯ ಹೃದಯವನ್ನು ಸಹೃದಯನಲ್ಲದಿದ್ದರೆ ಹೇಗೆ ತಿಳಿಯುವುದಕ್ಕೆ ಆಗುವುದಿಲ್ಲವೋ ಹಾಗೆ, ಹಳ್ಳಿಯವನ ಜೀವನದ ಸ್ವಾರಸ್ಯವನ್ನೂ, ನಮ್ಮ ಬಾಳಿನ ಪೂರ್ಣತೆಗೆ ಅವನು ಸಲಿಸುವ ಭಾಗವನ್ನೂ, ಅವನಲ್ಲಿ ಸಹಾನುಭೂತಿ ಇಲ್ಲದಿದ್ದರೆ ತಿಳಿಯುವುದು ಸಾಧ್ಯವಿಲ್ಲ. ಆ ಸಹಾನುಭೂತಿಯಿಂದ ಹಳ್ಳಿಯ ಸಾಹಿತ್ಯವನ್ನೂ ಹಳ್ಳಿಯ ಹಾಡುಗಳನ್ನೂ ಹಳ್ಳಿಯ ಜೀವನವನ್ನೂ ನೋಡಿದರೆ ರೈತನಲ್ಲಿ ನಮಗೆ ಪ್ರೀತಿಯೂ ಗೌರವವೂ ಉಂಟಾಗುವುದರಲ್ಲಿ ಸಂದೇಹವಿಲ್ಲ.

೨. ದೇವರೊಂದಿಗೆ ಗೆಳೆತನ

೧

ರೈತನಿಗೆ ತನ್ನ ಜೀವನದಲ್ಲಿ ಯಾವಾಗಲೂ ಎರಡೇ ಗುರಿಗಳಿರುತ್ತವೆ. ಮೊದಲನೆಯದು, ತನ್ನ ದೇವರಲ್ಲಿ ತಾನು ಸರಿಯಾಗಿರಬೇಕು ಎಂಬುದು. ಎರಡನೆಯದು, ಸಮಾಜದಲ್ಲಿ ತಾನು ಗಣ್ಯವಾಗಿ "ಊರಿಗೆ ಆಳಾಗಿ ಮಸಾಣಕ್ಕೆ ಹೆಣ"ವಾಗಿ ಬಾಳಬೇಕು ಎಂಬುದು. "ಮಾದೇವ, ನಿನ್ನ ಹೊರತು ನಾನು ಯಾರನ್ನೂ ನಂಬಿಲ್ಲ; ನಾನು ಮಾಡುವೆನು ಎಂಬ ಧೈರ್ಯವಿಲ್ಲ. ಮಲ್ಲಯ್ಯ, ನನ್ನ ಸರ್ವವನ್ನೂ ನೀನೇ ನಡೆಸು" ಎಂಬುದು ಅವನ ನಿತ್ಯದ ಪ್ರಾರ್ಥನೆ. ದೇವರು ಅವನಿಗೆ ಮನುಷ್ಯನಂತೆಯೇ ಹತ್ತಿರದವನಾಗಿ ಕಾಣುತ್ತಾನೆ. ದೇವರಿಗೆಲ್ಲಾ ದೇವರಾದ ಮಾದೇವನಂತೂ ಇರಲಿ. ಸಣ್ಣ ಪುಟ್ಟ ದೇವರಲ್ಲಿ ಅವನಿಗೆ ಸರಸವೇ. ಆ ದೇವರುಗಳ ಶಕ್ತಿಯಲ್ಲಿ ಅವನಿಗೆ ಅಪನಂಬಿಕೆ ಬಂದರೆ ತತ್‌ಕ್ಷಣ ದೇವರನ್ನೇ ಬದಲಾಯಿಸುತ್ತಾನೆ. ದೇವರುಗಳ ಶಕ್ತಿಯನ್ನೂ ತ್ರಾಣವನ್ನೂ ಪರೀಕ್ಷೆಮಾಡುತ್ತಾ ರೈತ ಊರಿಂದ ಊರಿಗೆ ಹೊರಟುಬಿಡುವುದುಂಟು. ಒಂದು ಪ್ಲೇಗು ಅಥವಾ ಕಾಲರಾ ಬಂದರೆ ಮೊದಲು ಅವನು ತನ್ನ ಊರಿನ ದೇವರಿಗೆ ಹಣ್ಣು ಕಾಯಿ ಕೋಳಿ "ಮಾಡಿ" ನೋಡುತ್ತಾನೆ. ಅದರಿಂದ ಏನೂ ಗುಣ ಕಾಣದಿದ್ದರೆ ಮತ್ತೆ ಊರು ಒಟ್ಟಿನವರೆಲ್ಲಾ ಚಂದಾಹಾಕಿ ಚೆನ್ನರಾಯಪಟ್ಟಣದ ಕತ್ತರಿಗಟ್ಟದ ದೇವರಿಗೆ ಇನ್ನೂ ಸ್ವಲ್ಪ ಬಲವಾಗಿಯೇ ಪೂಜೆ ಸಲ್ಲಿಸುತ್ತಾರೆ. ಅಲ್ಲೂ ಏನೂ ನಡೆಯದಿದ್ದರೆ ಮನೆಗೆ ಒಂದು ಆಳಿನಂತೆ ಕನ್ನಂಬಾಡಿಗೆ ಹೋಗಿ ಅಲ್ಲಿ ಅಮ್ಮನಿಗೆ ಪೂಜೆ ಮಾಡಿಸುತ್ತಾರೆ. ರೈತನು ಪೂಜಿಸುವ ದೇವರ ಸಂಖ್ಯೆಗೂ ಮಿತಿ ಇಲ್ಲ. ಅವನು ಎಷ್ಟು ದೇವರನ್ನು ಬೇಕಾದರೂ ಸ್ಥಾಪಿಸುತ್ತಾನೆ. ಎಷ್ಟು ದೇವರನ್ನು ಬೇಕಾದರೂ ಕಿತ್ತು ಒಗೆಯುತ್ತಾನೆ. ಹಾಳು ಹೊಲಕ್ಕೆ ಒಂದು ದೇವರು, ಕಲ್ಲುಮಂಟಿಗೆ ಒಂದು ದೇವರು, ಕೆರೆ ತೂಬಿಗೆ ಒಂದು ದೇವರು; ಮನೆಯಲ್ಲಿರುವ ಪ್ರತಿ

ಯೊಬ್ಬರಿಗೂ ಬೇರೆ ಬೇರೆ ದೇವರು. ಇದ್ದಕ್ಕಿದ್ದಂತೆ ಯಾವುದೋ ಬೆಟ್ಟದ ಮೇಲಿನ ಹಾಳು ಗುಡಿಯಲ್ಲಿರುವ ದೇವರು ಮನೆದೇವರೆಂದು ಹೊರಟು ಬಿಡುತ್ತಾನೆ. ಹನುಮಂತರಾಯನ ಒಕ್ಕಲು, ತಿರುಪತಿ ವೆಂಕಟರಮಣನ ಒಕ್ಕಲು, ಭೈರವನ ಒಕ್ಕಲು, ನಂಜುಂಡೇಶ್ವರಸ್ವಾಮಿ ಒಕ್ಕಲು. ಪ್ರತಿಯೊಂದು ದೇವರ ಈ ಒಕ್ಕಲಿಗೂ ಹೆಣ್ಣುದೇವರು ಬೇರೆ ಉಂಟು: ಬಾಚಹಳ್ಳಿ ಅಮ್ಮ, ಕಿಕ್ಕೇರಿ ಅಮ್ಮ, ಹೊನ್ನಾಲದಮ್ಮ, ಸೋಂಕಮ್ಮ. ಕೆಲವು ವೇಳೆಯಂತೂ ಈ ದೇವರುಗಳ ಸಂಖ್ಯೆ ಅಸಾಧ್ಯವಾಗಿಬಿಡುತ್ತದೆ. ತಲೆಗೆ ಕಟ್ಟುವ ದೇವರು, ಎದೆಗೆ ಜಗಿದುಕೊಳ್ಳುವ ದೇವರು, ಸೊಂಟಕ್ಕೆ ಕಟ್ಟಿಕೊಳ್ಳುವ ದೇವರು, ಬೆನ್ನಿಗೆ ಭುಜಕ್ಕೆ ಕಟ್ಟಿಕೊಳ್ಳುವ ದೇವರು. "ಈ ದೇವರುಗಳೆಲ್ಲಾ ನಮ್ಮೂರ ಜೋಯಿಸರ ಕಯ್ಯಲ್ಲಿ ಇವೆ. ಅವರೇ ಅವುಗಳಿಗೆಲ್ಲಾ ಯಜಮಾನರು. ಅವರು ಬೇಕಾದರೆ ಅವುಗಳನ್ನು ಬಿಡುತ್ತಾರೆ, ಇಲ್ಲವಾದರೆ ಕಟ್ಟಿದಲ್ಲಿಯೇ ಜಗಿದಿರುತ್ತಾರೆ" ಎಂಬುದಾಗಿ ನಾವು ಹಾಸ್ಯ ಮಾಡುವುದುಂಟು. ರೈತನಿಗೂ ಇದು ಗೊತ್ತು. ಆಂಜನೇಯ, ವೆಂಕಟರಮಣಸ್ವಾಮಿ ಇವುಗಳಂತೆ ಈ ಚಿಲ್ಲರೆ ದೇವರಿಗೆ ಶಕ್ತಿ ಇಲ್ಲ. ಆದರೆ ಅವು ತಾಲ್ಲೂಕು ಕಛೇರಿಯ ಅಧಿಕಾರಿಗಳಂತೆ ಅವನಿಗೆ ಕಿರುಕುಳವನ್ನು ಕೊಡುತ್ತವೆ. ಅದಕ್ಕಾಗಿ ಅವನು ಆ ದೇವರುಗಳಿಗೆ ಧೂಪಹಾಕಿ ಅವುಗಳನ್ನು ಪ್ರಸನ್ನವಾಗಿ ಇಟ್ಟುಕೊಳ್ಳುತ್ತಾನೆ. ಅವುಗಳ ಕೆಲಸ ಮುಗಿದ ಕೂಡಲೆ ಕಿತ್ತು ಒಗೆಯುತ್ತಾನೆ.

೨

ಕನ್ನಡನಾಡಿಗೆ, ಯಾಕೆ ದ್ರಾವಿಡ ದೇಶಕ್ಕೆಲ್ಲಾ, ಆಂಜನೇಯನೇ ಮೊದಲನೆಯ ದೇವರೆಂದು ತೋರುತ್ತದೆ. ರಾಮ, ಕೃಷ್ಣ ಮುಂತಾದ ದೇವರುಗಳ ಗುಡಿಗಳು ಇಲ್ಲದ ಕಡೆಗಳಲ್ಲೆಲ್ಲಾ ಊರಿಗೊಂದು ಊರ ಮುಂದಿನ ಆಂಜನೇಯ ವಿಗ್ರಹವಿರುತ್ತದೆ. ಈ ಆಂಜನೇಯನೂ ಕೂಡ ಸುಗ್ಗಿಗೆ ಸ್ವಲ್ಪಕಾಲ ಮುಂಚೆ ಮಲಗಿಯೇ ಬಿಟ್ಟಿರುತ್ತಾನೆ. ಸುಗ್ಗಿಗೆ ನಾಲ್ಕು ತಿಂಗಳು ಮುಂಚಿನಿಂದಲೇ ಹಳ್ಳಿಗಳಲ್ಲಿ ಕ್ಷಾಮ ಪ್ರಾರಂಭವಾಗುತ್ತದೆ. ಪೂಜಾರಿ ಹಗ್ಗ ಮೇಯುತ್ತಿರುವಾಗ ದೇವರಿಗೆ ತಳಿಗೆ ಎಲ್ಲಿಂದ ಬರಬೇಕು?

ಆದರೆ ಸುಗ್ಗಿ ಶಿವರಾತ್ರಿವೇಳೆಗೆ ಜಗತ್ತು ನಗಲು ಪ್ರಾರಂಭಿಸುತ್ತದೆ. ಕಣದಲ್ಲಿ ರಾಶಿರಾಶಿಯಾಗಿ ರಾಗಿ, ಭತ್ತ, ಹುರುಳಿ ಇವು ಬಿದ್ದಿರುತ್ತವೆ. ರೈತರು ದಿನಗಲ್ಲಿ ಮುಕ್ಕಾಲುಪಾಲು ಕಾಲವನ್ನೆಲ್ಲಾ ಹೊಲಗಳಲ್ಲಿಯೇ ಕಳೆಯು ತ್ತಾರೆ; ದುಡಿದ ಆಯಾಸವನ್ನು ಸ್ವಲ್ಪಮಟ್ಟಿಗೆ ಕಡಿಮೆಮಾಡಿಕೊಳ್ಳುತ್ತಾರೆ. ಸುಗ್ಗಿಯ ಕುಣಿತಗಳನ್ನು ನೋಡಬೇಕಾದರೂ ಅದೇ ಕಾಲ. ಊರಿನಲ್ಲಿ ದೊಡ್ಡದಾದ ಕಣದಲ್ಲಿ ಮಂಟಪವನ್ನು ಕಟ್ಟಿ ಆಂಜನೇಯನನ್ನು ಪೂಜೆ ಮಾಡುತ್ತಾರೆ. ಹೊಲೆಯರು ರಂಗ ಕುಣಿಯುವ ಸ್ಥಳದಲ್ಲಿ ನಿತ್ಯವೂ ಸೊಪ್ಪು ಸೆದೆ ಹೊತ್ತಿಸಿ ಬೆಳಕುಮಾಡುತ್ತಾರೆ. ಇದಕ್ಕೆ ಕರಕು ಎಂದು ಹೆಸರು. ಕಣದಲ್ಲಿ ರಾಸಿ ಬಿದ್ದಿರುವಾಗ ರೈತನಿಗೆ ನಂಟರು, ಇಷ್ಟರು, ಅಳಿಯಂದಿರು, 'ಭಾವಮೈಕಳು' ಇವರಲ್ಲೆಲ್ಲಾ ಪ್ರೀತಿ ಹೆಚ್ಚಾಗುತ್ತದೆ. ಎಲ್ಲರನ್ನೂ ಕರೆಸಿಕೊಳ್ಳುತ್ತಾನೆ. ಆಗ ವಸಂತದ ಪ್ರಾರಂಭ. ಜಗತ್ತು ನಗುತ್ತ ಇರುತ್ತದೆ. ಮಲ್ಲಿಗೆಗಳು ಅರಳಿರುತ್ತವೆ. ಪ್ರಭಾತ ಮುತ್ತಿನ ನೀರಿನ ಎರಕವನ್ನು ಹುಯ್ದಂತೆ ಇರುತ್ತದೆ. "ಮುತ್ತಿನ ಚಿಬ್ಬಲು ತೆಗೆದುಕೊಳ್ಳಿ. ಬೆಳಗಾಯ್ತು. ಹೂವು ಜಾಜಿಗಳು ಅರಳಿವೆ. ಬೆಳ್ಳಾನೆ ಬೆಳಕಾಗಿದೆ. ಒಳ್ಳೊಳ್ಳೆ ವಿಮಾನು ಗರಿಗೆದರಿವೆ" ಆ ಸುಗ್ಗಿಯಲ್ಲಿ

> ಗದ್ದಿಗೇ ಬಿಟ್ಟು ಎದ್ದಾರೋ ಕೆಂಗಪ್ಪ ಇದ್ದಾರೆ ನಿಮ್ಮ ಶಿವನಾಣೆ
> ಇದ್ದಾರೆ ನಿಮ್ಮ ಶಿವನಾಣೆ ಶಿವರಾತ್ರಿ ಮುಗ್ಗಿ ತಂದಿವ್ನಿ ಮುಡಿಬಾರೊ
> ಮುಗ್ಗಿಲ್ಲವೆಂದು ಮುಗ್ಗಿ ಹೋಗಲುಬೇಡ ಮುಗ್ಗು ಈರಣ್ಣನ ಮನೆದೊ ಜಾಣ
> ಮುಗ್ಗು ಈರಣ್ಣನ ಮನೆಯಲ್ಲಿ ಜಾಜಿಗಳರಳಿ ಘಮಿಸುವುವೊ
> ಹೂವಿಲ್ಲವೆಂದು ನೀ ಹೋಗಬೇಡ ಹೂವರಳಿ ಬಾಯ ಬಿಡುತಾವೊ ಜಾಣ.

ಇಂತಹ ಸುಗ್ಗಿಯಲ್ಲಿ ಮಲಗಿದ್ದ ಪ್ರಕೃತಿ ಎಚ್ಚತ್ತು ನಲಿದು ನಾಟ್ಯ ಮಾಡುವುದು ಸ್ವಾಭಾವಿಕವಾದುದು. ರೈತರು ಹೊಸ ಉಡುಪುಗಳನ್ನು ಧರಿಸಿ ಎಲೆ ಅಡಕೆ ಅಗಿಯುತ್ತಾ ತಮ್ಮನ್ನು ತಾವು ಮರೆತು ಹಾಡಿ ಕುಣಿಯುವರು. ಶಕ್ತಿಯ ಮೂರ್ತಿಯೂ ತೇಜಸ್ಸಿಗೆ ಒಡೆಯನೂ ಆದ, ತಳಿಗೆ ಕಾಣದೆ ಮೂರು ತಿಂಗಳಿಂದ ಮಲಗಿದ್ದ, ಆಂಜನೇಯನನ್ನು ಆನಂದದಿಂದ ಎಚ್ಚರಿಸುವರು. ಕಣದಲ್ಲಿ ಓಕುಳಿಯಾಡುವರು.

ಓಕ್ಲಿಯ ಗುಂಡಿಗೆ ನಾಲ್ಕು ಚಿನ್ನದ ಕಂಭ ನಾಲ್ಕು ಚಿನ್ನದ ಕಂಭ ಏಳೇಳೊ
ಏಳೇಳ್ಹನ್ನೆರಂತ್ರಾಯ ಏಟ್ಹೊತ್ತು ಸುಖನಿದ್ರೆ ಪೂಜಾರಿ ಬಂದು ಒದಗವ್ನೆ
ಪೂಜಾರಿ ಬಂದು ಒದಗವ್ನೆ ಮಲ್ಲಿಗೆ ಮಗ್ಗರಳಿ ಬಾಯ ಬಿಡುತಾವೆ
ರಾಮಾ ರಥವೇರಿ ಲಕ್ಷ್ಮಣ ಕುದುರೇರಿ ತಾಯಿ ಸೀತಮ್ಮ ಮರವೇರಿ
ತಾಯಿ ಸೀತಮ್ಮ ಮರವೇರಿ ನಿಂದವ್ಳೆ ದೂರಾದ ಪರಸೆ ಕವಿದಾವೆ
ರಂಗಕ್ಕೆ ಹರಿ ಬಂದ ರಂಭೇನ ಮಾಡ್ಯಾಳು ಎಂಭತ್ತರದ ಒಡವೇಯ
ಎಂಭತ್ತರದ ಒಡವೇಯನಿಕ್ಕೊಂಡು ರಂಗಾಕಾರತಿ ಬೆಳಗ್ಯಾಳೊ
ಉದ್ದಾನೆ ಹನುಮಯ್ನ ಬುದ್ದೀಲಿ ಸಮನಾರು ಎದ್ದು ಹಾರಿದನು ಗಗನಕ್ಕೆ
ಎದ್ದು ಹಾರಿದನು ಗಗನಕ್ಕೆ ಲಂಕೆಯ ಸುಟ್ಟು ಬಗ್ಗಿ ರಾಮರಿಗೆ ಶರಣೆಂದ
ಅಂಗಂಗಡಿ ಸುಟ್ಟ ಅಂಗಾಡಿ ಮಾಳಿಗೆ ಸುಟ್ಟ ಅಂದಾಕೆ ರಾವಣನ ಎಳೆಮಿಾಸೆ
ಅಂದಾಕೆ ರಾವಣನ ಎಳೆಮಿಾಸೆ ಗಡ್ಡವ ಸುಟ್ಟು ಬಾಗಿ ರಾಮರಿಗೆ ಶರಣೆಂದ
ಹನುಮ ಹಗ್ಗವ ತಂದ ಗರುಡಾಳ ಪಿಲ್ಲಿ ತಂದ ಇಂಬೀವನದಲ್ಲಿ ಸೆರೆಯಿರುವೊ
ಇಂಬೀವನದಲ್ಲಿ ಸೆರೆಯಿರುವ ಸೀತಮ್ಮಗೆ ಉಂಗುರವ ತಂದ ಹನುಮಯ್ಯ.

ಮಗ್ಗಿನ್ಹಚ್ಚಡ ಹೊದ್ದು ಮರಿಕುದುರೆ ಮೇಲೇರಿ
ಲಗ್ಗೆ ಕೋಟಿಂದ ಬರುವೋನೆ—ಹನುಮಯ್ಯ
ಮಗ್ಗು ಬಾಡ್ಯಾವೊ ಬಿಸಲೀಗೆ.

ಇದರ ಜತೆಯಲ್ಲಿ "ಆನೆತೋರ ಕೆಂಡ ಬಂದು ಆತುರಿಸಿಬಿದ್ದು, ಒಂಟೆ ತೋರ ಕೆಂಡ ಬಂದು ಮಂಟಿಕೊಂಡುಬಿದ್ದು, ಕುದುರೆತೋರ ಕೆಂಡ ಬಂದು ಕುಪ್ಪಳಿಸಿಬಿದ್ದು ಉರಿಯುವಾಗ ಲಂಕೆಯನ್ನು ಸುಟ್ಟವರು ಯಾರು? ರಾಮರ ನೆಚ್ಚಿನ ಭಂಟ, ಚುಕ್ಕಿ ಬೆಳಕಲ್ಲಿ ಹೊರಟ ಹನುಮಂತನೆ ಅಲ್ಲವೆ?" ಎಂದು ಆಂಜನೇಯನನ್ನು ಪ್ರಾರ್ಥಿಸುವರು. "ಹೇ ಹನುಮಯ್ಯ ಬಾಗಿಲು ಚೆಗಿದ್ದಂಗೆ ಬಾ. ನಿನ್ನ ಈ ಮಗ ಭಾಗ್ಯವುಳ್ಳವನು. ಬಾಗಿಲಿಗೆ ಮುತ್ತು ಬಿಡಿಸಿದ್ದಾನೆ." ಹೀಗೆ ಸುಗ್ಗಿಯ ದೇವತೆಯಾದ ಆಂಜನೇಯನನ್ನು ಏಳಿಸುವುದೇ, ರೈತನ ಕಟ್ಟಿಕೊಂಡಿದ್ದ ಕೈಕಾಲು ಸಡಿಲವಾಗುವುದರ ಗುರುತು. ರೈತನಲ್ಲಿರುವ ಕಲಾಭಿರುಚಿ ಆಗ ಪೂರ್ಣವಾಗಿ ಪ್ರಕಾಶಕ್ಕೆ ಬರುತ್ತದೆ. ರಂಗಸ್ಥಳದಲ್ಲಿ ಬಗೆಬಗೆಯ ವೇಷಗಳು, ಸಕಲಿಗಳು, ಯಕ್ಷಗಾನ, ಗಾರುಡಿಗನ ಆಟ, ಜೋಗಿಯ ವೇಷ, ಕೊರವಂಜಿ ಸುಡುಗಾಡುಸಿದ್ದ ದಾಸಯ್ಯಗಳ ವೇಷಗಳೆಲ್ಲಾ ಬಂದು ಜನರನ್ನು ವಿನೋದಗೊಳಿಸುತ್ತವೆ.

ಸಂತೋಷವುಂಟಾದಾಗ ಅದರಲ್ಲೇ ಪೂರ್ಣವಾಗಿ ಲೀನವಾಗಿ ಒಂದು ವಿಧವಾದ ಅನಾಸಕ್ತಿಯಿಂದ ಆ ಸಂತೋಷವನ್ನು ಅನುಭವಿಸುವ ಶಕ್ತಿ ರೈತನಲ್ಲಿದೆ. ಇದರಲ್ಲಿ ಆನಂದವನ್ನು ಉಂಟುಮಾಡುವವರು ಕೆಲವರು, ಅನುಭವಿಸುವವರು ಕೆಲವರು ಎಂಬ ತರಹ ಇಲ್ಲ. ಹಳ್ಳಿಯ ರೈತರೆಲ್ಲಾ ಆನಂದವನ್ನು ಉಂಟುಮಾಡುವವರೇ, ಅವರೆಲ್ಲಾ ಆನಂದವನ್ನು ಅನುಭವಿಸುವವರೇ. ಈ ಆನಂದಾನುಭವದಲ್ಲಿ ಮೈಮರೆಯುವುದಕ್ಕೆ ಅವರಿಗೆ ಹೆಚ್ಚಾಗಿ ಬಾಹ್ಯಸೌಕರ್ಯಗಳು ಬೇಕಾಗುವುದಿಲ್ಲ. ಮದ್ದಲೆ ಇಲ್ಲದಿದ್ದರೆ ಮಡಕೆಯ ತಳವನ್ನೇ ಮದ್ದಲೆಯಾಗಿ ಉಪಯೋಗಿಸುತ್ತಾರೆ. ಜತೆಗೆ ಒಂದು ಏಕನಾದವಿದ್ದರೆ ಸಾಕು. ಇಲ್ಲದಿದ್ದರೆ ಅದೂ ಬೇಕಿಲ್ಲ. ಊಟ ಮಾಡುವ ಗಂಗಳದ ಮೇಲೆ ಒಂದು ಕಡ್ಡಿಯನ್ನಿಟ್ಟು ಕೈಯಿಂದ ಸವರಿ ಶ್ರುತಿಹೊರಡಿಸುತ್ತಾರೆ. ಮೂರು ರಾತ್ರಿ ಒಂದೇ ಸಮನಾಗಿ ಹೇಳಿದರೂ ಮುಗಿಯದಷ್ಟು ಹಾಡುಗಳು ಅವರಿಗೆ ಬರುತ್ತವೆ. ಆ ಹಾಡುಗಳ ಸಂಖ್ಯೆ ಸಹ ರಾಮಾಯಣ ಭಾರತಗಳಲ್ಲಿಯ ಶ್ಲೋಕಗಳ ಸಂಖ್ಯೆಗಳಂತೆ ಅಸಂಖ್ಯಾತವಾದುವು.

ಹತ್ತುಸಾವಿರ್ಪದವ ಎತ್ತಿನ್ಮೇಲ್ಹೇರ್ಕೊಂಡು ಮತ್ತೆ ಸಾವಿರವ ಕೈಯಲ್ಲಿ ಹಿಡಿದು
ಆರುಸಾವಿರ್ಪದವ ಹೋರೀ ಮೇಲ್ಹೇರ್ಕೊಂಡು ಬಂದಿವ್ನಿ ಬಾರೋ ಬಸವಣ್ಣ ಸಬ್ಗೆ
ಕೋಲಿನ್ಮೇಲೊಬ್ಬ ಬಸವಣ್ಣ ಕೂತ್ಕೊಂಡು ಲಾಲಿಸಿ ಪದವ ಬರಕೊಂಡ.

ಹೀಗೆ ಹೋರಿಯ ಮೇಲೆ ಹೇರಿಕೊಂಡು ಬಂದ ಪದಗಳಲ್ಲಿ ಎಲ್ಲಾ ದೇವರಿಗೂ ತೃಪ್ತಿಯಾಗುವಷ್ಟು ಪದಗಳು ದೊರೆಯುತ್ತವೆ. "ಗಣನಾಯ್ಕ, ನಮಗೆ ವಿದ್ಯೆಯನ್ನು ಕೊಡು. ನಿನಗೆ ಬೇಕಾದ ಪೂಜೆಯನ್ನು ಸಲ್ಲಿಸುತ್ತೇವೆ. ಇದ್ದಷ್ಟು ಮತಿಕೊಡು, ಎಳ್ಳಷ್ಟು ಮತಿಕೊಡು, ಸ್ವಾಮಿ. ನಮಗೆ ದುರಾಸೆ ಇಲ್ಲ. ಪೂರ್ಣವಾಗಿ ವಿದ್ಯಾವಂತನೂ ಪ್ರಾಜ್ಞನೂ ಆಗಬೇಕೆಂದು ನಾನು ಬಯಸುವುದಿಲ್ಲ."

ಶರಣು ಶರಣುವಯ್ಯ ಗಣನಾಯ್ಕ ನಮ್ಮ ಕರುಣದಿಂದಲಿ ಕಾಯೊ ಗಣನಾಯ್ಕ
ಎಳ್ಳುಂಡೆ ಜೇನ್ತುಪ್ಪ ಗಣನಾಯ್ಕ ನಮಗೆ ವಿದ್ಯೇವ ಕಲಿಸಯ್ಯ ಗಣನಾಯ್ಕ
ನಿಮಗೆ ಕಳಿಯಡ್ಕೆ ಚಿಗುರೆಲೆ ಗಣನಾಯ್ಕ ನಿಮಗೆ ಗೊನೆಮೇಗ್ಲ ಬಾಳೆಹಣ್ಣು
ಗಣನಾಯ್ಕ

ನಿಮಗೆ ಕರ್ಪೂರ ಸಾಮ್ರಾಣಿ ಗಣನಾಯ್ಕ ನಿಮಗೆ ಕೊಂಬೆಮೇಗ್ಲ ನಿಂಬೆಹಣ್ಣು ಗಣನಾಯ್ಕ
ನಿಮಗೆ ಒಡೆದ ತೆಂಗಿನಕಾಯಿ ಗಣನಾಯ್ಕ ನಿಮಗೆ ಒಪ್ಪತ್ತಿನ ಶಿವಪೂಜೆ ಗಣನಾಯ್ಕ
ನಿಮಗೆ ಕರ್ಪೂರ ಸಾಮ್ರಾಣಿ ಗಣನಾಯ್ಕ.

ಉದ್ದೀನ ಹೊಲಾದಲ್ಲಿ ದೊಡ್ಡಹೊಟ್ಟೆ ಬೆನವಣ್ಣ
ಉದ್ದೀನುಂಡಲಿಗೆ ಎರೆದುಪ್ಪಾ—ಕೊಡುವೆವು
ಇದ್ದೋಟು ಮತಿಯ ಕೊಡು ನಮಗೆ.

ಎಳ್ಳಿನ್ಹೊಲಾದಲ್ಲಿ ಉಳ್ಯಾಡೊ ಬೆನವಣ್ಣ
ಎಳ್ಳೀನುಂಡಲಿಗೆ ಎರೆದುಪ್ಪಾ—ಕೊಡುವೆವು
ಎಳ್ಳೋಟು ಮತಿಯ ಕೊಡು ನಮಗೆ.

ಪದಗಳು, ಹಾಡು, ಕಾವ್ಯ ಇವು ಸರಸ್ವತಿಯ ವರದಿಂದ ಮಾತ್ರ ಬರುತ್ತವೆ. ಇಲ್ಲದಿದ್ದರೆ ಬರುವುದಿಲ್ಲ. "ಸರಸ್ವತಿ, ಅರಿಸಿನದ ಸೀರೆ ನೆರಿಯೋಳೆ ಸರುವಕ್ಕೆ ದೊಡ್ಡವಳೆ ಐನೂರು ಸರವ ಹಾಕಿದವಳೆ, ಎಂಟೆಲೆಮಾವಿನ ದಂಟಿನಲ್ಲಿರುವ್ರೋಳೆ ಗಂಟೆಯ ಗತಿಗೆ ನಲಿಯೋಳೆ, ಏಳೆಲೆಮಾವಿನ ತಾಳಿ ನಲ್ಲಿರುವ್ರೋಳೆ ತಾಳಾದ ಗತಿಗೆ ನಲಿಯೋಳೆ, ಹಟ್ಟೀಯ ಮನೆಯೋಳೆ ಪಟ್ಟೀದುಂಗುರದೋಳೆ ಪಟ್ಟೀಯ ಸೀರೆ ನೆರಿಯೋಳೆ, ಗಂಟಲಿಗೆ ಅಕ್ಷರವ ನೆಲಸವ್ವ, ನಾಲಗೆಗೆ ಅಕ್ಷರವ ನೆಲಸವ್ವ, ಗುಟ್ಟಿನಲಿ ಮತಿಯ ನೆಲಸವ್ವ, ಬೋಧಿಸಮ್ಮಯ್ಯ ನಲ್ನುಡಿಯ ದಮ್ಮಯ್ಯ" ಎಂದು ಹಳ್ಳಿಯ ಹೆಣ್ಣು ಬೇಡುತ್ತಾಳೆ.

ತಾಯಿಯ ನೆನೆದರೆ ಬೇಗನೆ ಪದ ಬರಲಿ
ತಾಯವ್ವೆ ಗಂಗೆ ದಡದಲ್ಲಿ—ಸರಸತಿಯು
ಕಾಯ ಕುಂಡ್ಹೋಗಿ ಕರದಲ್ಲಿ.

ಅಕ್ಕಾನ ನೆನೆದರೆ ಗಕ್ಕನೆ ಪದ ಬರಲಿ
ಅಕ್ಕವ್ವೆ ಗಂಗೆ ದಡದಲ್ಲಿ—ಸರಸತಿಯು
ಅಕ್ಕಿ ಹೊದವಳಾ ಕರೆತನ್ನಿ.

ಹಳ್ಳಾ ಕೊಳದಲ್ಲಿ ಮುಳ್ಳಾಜಿ ವನದಲ್ಲಿ
ಒಳ್ಳೋಳೆ ನಿನ್ನ ಅರಸೀದೆ—ಸರಸತಿಯೆ
ಎಲ್ಲಿ ಹೋದ್ಯಮ್ಮ ಪದ ಬರಲಿ.

ಅಟ್ಟಾ ಬೆಟ್ಟಾದಲ್ಲಿ ಪುಟ್ಟಾಜಿ ವನದಲ್ಲಿ
ಸೆಟ್ಟ್ಯೋಳೆ ನಿನ್ನ ಅರಸೀದೆ—ಸರಸತಿಯೆ
ಎತ್ತ ಹೋದ್ಯಮ್ಮ ಪದ ಬರಲಿ.

ತಾಯಿ ಸರಸತಿ ಬಾಗ್ಲಲ್ಲಿ ಯಾಕೆ ನಿಂದೆ
ತೋರೆನು ಬಾರೆ ನಿನಗಿಂಬ—ನವ್ಮಾನೆ
ಸಾಲು ಮಂಚಾವೆ ಒರಗವ್ಮ.

ಅಕ್ಕಾ ಸರಸತಿಯೆ ಹಟ್ಟೀಲ್ಯಾಕೆ ನಿಂತೆ
ಕೊಟ್ಟೇನು ಬಾರೆ ನಿನಗಿಂಬ—ನವ್ಮಾನೆ
ಪಟ್ಟೀ ಮಂಚಾವೆ ಒರಗವ್ಮ.

ಅಗ್ಗಿ ಬುಡದಲ್ಲಿ ಸೊಗಸು ಮಾಡೊ ಹೆಣ್ಣೆ
ಅವಸರದಲ್ಬಂದೆ ನಿನ ಬಳಿಗೆ—ಸರಸತಿಯೆ
ಕೆಲ್ಸ ಬಿಟ್ಹಾಡ ಕಲಿಸಮ್ಮ.

ನಗ್ಗಾಲ ಮರದಡಿ ನಿದ್ರೆಮಾಡೋದ ಬಿಟ್ಟು
ಎಗ್ಗಿಲ್ದೆ ಬಂದೆ ನಿನ ಬಳಿಗೆ—ಸರಸತಿ
ಚೆಂದುಳ್ಳಿ ಹಾಡ ಕಲಿಸವ್ಮ.

ವಿದ್ಯೆಯಿಲ್ಲದ ಜನ್ಮ ವ್ಯರ್ಥ. ಪದ ಕವಿತೆ ಕಾವ್ಯಗಳಿಲ್ಲದ ಜನ್ಮ ವ್ಯರ್ಥ. ಆದುದರಿಂದಲೇ ಹೆಣ್ಣು ಸರಸತಿಯನ್ನು ಪದಗಳಿಗಾಗಿ ಹಾಡುಗಳಿಗಾಗಿ ಬೇಡುತ್ತಾಳೆ. ಪದಗಳನ್ನು ಹೇಳದಿದ್ದರೆ ಮಗು ತೊಟ್ಟಿಲಿನಲ್ಲಿ ಸುಖವಾಗಿ ಮಲಗಿ ನಿದ್ರಿಸುವುದಿಲ್ಲ. ರಚ್ಚೆಮಾಡುತ್ತದೆ. ಆದರೆ ಪದ ಹೇಳತೊಡಗಿದರೆ ಆ ಇಂಪಾದ ದನಿಯನ್ನು ಆಲಿಸುತ್ತಾ ಅಳು ನಿಲ್ಲಿಸುತ್ತದೆ. ನಿದ್ರೆಮಾಡುತ್ತದೆ.

ಜೋಗುಳ ಹಾಡಿದರೆ ಆಗಳೆ ಕೇಳ್ಯಾನು
ಹಾಲ ಹಂಬಲವ ಮರೆತಾನು—ಕಂದಯ್ಗೆ
ಜೋಗುಳದಾಗೆ ಅತಿಮುದ್ದು.

ಮಗುವಿಗೆ ಜೋಗುಳದಲ್ಲಿ ಆಸೆ ಇರುವುದಂತೂ ಇರಲಿ. ಪದಗಳನ್ನು ಹಾಡದಿದ್ದರೆ ರಾಗಿಯೂ ಸರಿಯಾಗಿ ಹಿಟ್ಟಾಗುವುದಿಲ್ಲ.

ಸುಮ್ಮಾನೆ ಬೀಸಿದರೆ ಬೀಳಾದೊ ಈ ಕಲ್ಲು
ನಾಗಸೊರದಂತೆ ದನಿ ಎತ್ತಿ—ಹಾಡಿದರೆ .
ಗವ್ವನೆ ಬೀಳ್ವುದು ಈ ಕಲ್ಲು.

ಪದ ಹೇಳುವುದು ಒಂದು ಶಕ್ತಿ. ಅದು ಇಲ್ಲದವನ ಉಳಿದ ಶಕ್ತಿಗಳು ವ್ಯರ್ಥ.

ಪದ ಬಂದರ್ಹೇಳು ಬಾರದಿರೆ ಶರಣಾಗು
ಪದವುಂಟು ನನ್ನ ಎದೆಯಲ್ಲಿ—ತಾವ್ಮಾರ್ದ
ತಾತ್ಯುಂಟು ನನ್ನ ತೋಳಲ್ಲಿ.

೩

ರೈತನ ದೇವರು ಒರಿಯ ಅಧ್ಯಾತ್ಮದ ತರ್ಕದ ಮುದ್ದೆಯಲ್ಲ. ಅವನು ಕೈಕಾಲುಳ್ಳ ಸ್ವಾಮಿ. ರೈತನಿಗೆ ಅವನೊಂದಿಗೆ ತಾನು ಮಾತನಾಡಬಹುದು ಎಂಬಷ್ಟು ಸಾಮೀಪ್ಯಭಾವವಿರುತ್ತದೆ. ಹಳ್ಳಿಯ ಹುಡುಗಿಗೆ ಸರಸ್ವತಿಯೂ ಹಾಗೆಯೇ. ಅವಳು ಕಣ್ಣಿಗೆ ಕಾಣದ, ಮಂತ್ರಗಳೇ ದೇಹವಾದ, ದೇವಿಯಲ್ಲ; "ಅರಿಸಿನದ ಸೀರೆಯನ್ನು ಹರುಷದಲ್ಲಿ ಉಟ್ಟು ಸೊಗಸುಮಾಡುವ ಹೆಣ್ಣು." ಅವಳ ಈಶ್ವರನು ಧೀರ.

ಹೊಕ್ಕಳಗಂಟೆ ಹುಲಿಯ ಚರ್ಮ ಧರಿಸಿದ್ದಾರನು
ಧೀರ ಧರಿಸಿದ್ದಾರನು
ಹೆಚ್ಚಿದೋರ ಹಲ್ಲು ಮುರ್‍ದು ಪಟ್ಟಿದಟ್ಟ್ಯೋನು
ಪಟ್ಟಿದಟ್ಟಿ ಮುತ್ತಿನ್ಸಾರ ಅಪ್ಪ ಧರಿಸಿದ
ಅವ್ನು ಗೆಜ್ಜೆಕಾಲು ನೀಲಿನಾಮು ಮೈಗೆ ಧರಿಸಿದ
ಅವ್ನು ಎಲ್ವನೂರು ಚೆಲ್ವ ರಾಯಸ್ವಾಮಿ ಸಂಜಿವ
ದೇವ ಸ್ವಾಮಿ ಸಂಜಿವ
ಬಿಳಿಯ ಕುದುರೆ ನೇರಿ ಭೂಪ ಮೆಳೆಯ ಸೇರಿದ
ಧೀರ ಮೆಳೆಯ ಸೇರಿದ
ಅವ್ನು ಸಿಡಿದು ಒಡೆದು ಚಿತ್ರಕಲ್ಲು ದುರ್ಗ ಸೇರಿದ
ಹಗಲಚಿಕ್ಕಿ ದಗಲಕಣ್ಣಿ ಅಗಲ ತೋರಿದ
ಅವ್ನು ಸುಂಡನೂರು ಗೊಂಡಿ ಒಳಗೆ ದಂಡ ನಡ್ಸಿದ
ಮಾತಿನಲ್ಲಿ ಮಾಗುಡಿಸ್ವಾಮಿ ಆನೆ ತರಿಸಿದಾ
ಧೀರ ಒಂದಾನೆ ತರಿಸಿದಾ

ಅವ್ನು ಆನೆಮೇಲೆ ಚಂದ್ರಗಾವಿ ದಾಳ ನೆಡ್ಸಿದಾ
ದಾಳ ನೆಡ್ಸಿದ ಕಂಚಿನ್ಕಹಳೆ ನುಡಿಸಿದ.

ರೈತನ ದೇವರು ಅವನ ಎದುರಿಗೆ ಪ್ರತ್ಯಕ್ಷವಾಗಿರುವುದರಿಂದ, ರೈತ ಸ್ನೇಹಿತರನ್ನು ಸಂಬೋಧಿಸಿದಂತೆ ದೇವರನ್ನು ಮಾತನಾಡಿಸುತ್ತಾನೆ. ಹಳ್ಳಿಯ ಹೆಣ್ಣುಮಗಳಿಗೆ ದೇವರು ಯಾವಾಗಲೂ ಪ್ರತ್ಯಕ್ಷ :

ಹೋಗಾಗ ಬಲಕಾದ ಬರುವಾಗ ಎಡಕಾದ
ಈಗ ನನ್ನ ಕೊಡಕೆ ಎದುರಾದ—ಬಲಭೀಮ
ಕೊಡವೆತ್ತಿ ಕೈಯ ಮುಗಿವೇನು.

ನಮ್ಮ ರೈತರಿಗೆ ತಿರುಪತಿ ತಿಮ್ಮಪ್ಪನಲ್ಲಿ ಭಕ್ತಿ ಬಹಳ. ತಿಮ್ಮಪ್ಪನಾದರೂ ಅವರೊಂದಿಗೆ ಮಾತನ್ನೇ ಆಡುತ್ತಾನೆ. "ಸೂಳೇರಿಗೊಲಿಯೋ ಸುಗುಣಾನೆ ಸೋಲಿಗರ ಸೀಮೆ ಸಿರಿಹರಿ ಸೋಲಿಸಬೇಡ ಗೆಲಿಸಯ್ಯ." "ಅಣ್ಣ ತಿಮ್ಮಪ್ಪನ ಹಣೆಯ ಮೇಲಿನ ನಾಮ ಇಟ್ಟನೂಲೆಸಳು ತೆಗೆದಂತೆ. ತಿಮ್ಮಪ್ಪ ನಾಮ ಧರಿಸೋ ವೇಳೆಗೆ ಬೆಳಗಾಯ್ತು." ನಾಮ ಹನ್ನೆರಡೇ ಇರಬೇಕೆಂಬ ನಿಯಮವಿಲ್ಲ. ಹದಿನೆಂಟು ಬೇಕಾದರೂ ಇರಬಹುದು. "ಮೊದಲಾಗಿ ನೆನೆವೇನು ಮದನ ಗೋವಿಂದನ ಹದಿನೆಂಟು ನಾಮದ ಒಡೆಯನ" ಎನ್ನುತ್ತಾನೆ. ಭಕ್ತನಿಗೆ ತಿರುಪತಿಗೆ ಹೋಗುವುದು ಸ್ವಲ್ಪವೂ ಕಷ್ಟವಾಗಿ ತೋರುವುದಿಲ್ಲ. "ತಿರುಪತಿ ಹಾದೀಲಿ ಕಲ್ಲಿಲ್ಲ ಮುಳ್ಳಿಲ್ಲ." ತಿರುಪತಿ ಬೆಟ್ಟ ಏಳು ಮೈಲಿ ಎತ್ತರವಾಗಿದ್ದರೂ ಅದನ್ನು ಹತ್ತುವಾಗ ಅವನಿಗೆ ಆಯಾಸವಾಗುವುದಿಲ್ಲ. "ಬೆಟ್ಟವನ್ನು ಹತ್ತುತ್ತ ಕಿರುಬೆವರು ಬೆವರುತ್ತ ನಡೆನಡೆಗೆ ಶಂಖ ನುಡಿಸುತ್ತ ಬೆಟ್ಟ ಹತ್ತುವ ಹೊತ್ತಿಗೆ ಬೆಳಗಾಯಿತು." ತಿಮ್ಮಪ್ಪನ ಗಿರಿ ಚಿನ್ನದ ಗಿರಿ. ಅವನಿಗೆ ಕೊಡಬೇಕಾದ ಕಪ್ಪ ಕಾಣಿಕೆಗಳನ್ನು ನಾವು ತಪ್ಪದೆ ಒಪ್ಪಿಸಬೇಕು. ಮೂಡಣ ದೊಡ್ಡನಿಗೆ ದಂಡ ನಡೆಸಬೇಕು. ಆದರೆ ತಿರುಪತಿಯಲ್ಲಿ ತನಗೆ ತಿಳಿದವರು ಯಾರೂ ಇಲ್ಲವಲ್ಲ ಎಂದು ಯೋಚಿಸಬೇಕಾದುದಿಲ್ಲ. "ಶ್ರೀಪತಿ ತಿಮ್ಮಪ್ಪ ನಮ್ಮವ, ಆದರೆ ಇಷ್ಟಾರ್ಥವಿತ್ತು ಸಲಹುವ." ಭಕ್ತನಿಗೆ ಬಿಳಿಗಿರಿರಂಗ ಕಣ್ಣಿಗೇ ಕಾಣುತ್ತಾನೆ. ಅವನು ಬಿಳಿಗಿರಿರಂಗನನ್ನು "ಏಳು ಏಳಯ್ಯ ಹರಿಯೆ

ಏಳು ಚಿನ್ನದ ಗಿರಿಯ ಏಳಯ್ಯ ಬೆಳಗಾದೆ" ಎಂದು ಏಳಿಸುತ್ತಾನೆ. ಅವನ "ಕೈಲಿ ಭಾರಿಸರಪಣಿ, ಬಲಗೈಲಿ ಸಿಂಬೆಕಣ್ಣು, ಓಲಾಡಿ ಶಂಖ ಊದುತ್ತಾನೆ, ಎಣ್ಣೆಮಜ್ಜನದ ಒಡೆಯ." ಈ ಬಿಳಿಗಿರಿರಂಗ ಎಲ್ಲರಂತೆ ಹಲ್ಲುಜ್ಜಿ ಭಕ್ತನ ಮನೆಗೆ ಹರಿಸೇವೆಗೆ ಹೋಗುತ್ತಾನೆ.

ಬಿಳಿಗಿರಿ ರಂಗ ಬಿಳಿಯ ತೇಜಿಯನೇರಿ
ಬೆಳಗಾನ ಬೇಟೆ ಹೊರಟಾರೊ—ಕತ್ತಿಯ
ಹೊಳಪಲ್ಲಿ ಮುಖವ ತೊಳೆದಾರೊ.

ಆ ದೇವರಲ್ಲಿ ಭಕ್ತನ ನೆಚ್ಚು ಬಹಳ; ಅಭಿಮಾನ ಹೆಚ್ಚು. ತನ್ನ ದೇವರ ವೀರ್ಯಪರಾಕ್ರಮ ಮಹಿಮೆಗಳನ್ನು ಕತ್ತಿಯ ಬೆಳಕಲ್ಲಿ ಮುಖ ತೊಳೆದವರೆಂದು ಹೇಳಿ ಹೊಗಳುತ್ತಾನೆ.

ಎತ್ತಲಾರದ ಶಂಖು ಹೆಗಲಲ್ಲಿ ರಾಂಭಾಣ
ಎತ್ತಾಗೆ ಹೊರಟಿರಿ ಹೊರಪಯಣ—ರಂಗಯ್ಯ
ಬಡವರ ಮನೆಯ ಹರಿಸೇವೆ.

ರಂಗಯ್ಯ ದೇವನಾದುದರಿಂದ ಅವನ ಶಂಖು ಬಹಳ ಭಾರ; ಅವನ ಯೋಗ್ಯತೆ ಘನತೆ ವೈಭವಗಳಿಗೆ ತಕ್ಕಂತೆ ಭಾರ. ಅದನ್ನು ಎತ್ತುವುದು ಅವನಿಗೂ ಸುಲಭವಲ್ಲ. ಸ್ವಾಮಿಗೆ ಹರಿಸೇವೆ ಮಾಡಿಸುವವನು ಧನಿಕನೇ ಆಗಬೇಕೆಂಬ ನಿಯಮವಿಲ್ಲ. ಅದೆಲ್ಲಾ ಅಲ್ಪರಾದ ಮನುಷ್ಯರ ಭಾವನೆ. ಬಿಳಿಗಿರಿರಂಗ ಹರಿಸೇವೆಗೆ ಎಲ್ಲರ ಮನೆಗೂ ಹೋಗುತ್ತಾನೆ. ಮುಖ್ಯವಾಗಿ ಬಡವರ ಮನೆಗೆ ಹೋಗಿಯೇ ಹೋಗುತ್ತಾನೆ. ಬಡವರೇ ಅವನ ಪ್ರೀತಿಯ ಮಕ್ಕಳು. ತಾಯಿಗೆ ದುರ್ಬಲನಾದ ಅಥವಾ ಅಂಗಹೀನನಾದ ಮಗುವಿನಲ್ಲಿ ಹೆಚ್ಚು ಪ್ರೀತಿ ಇರುವಂತೆ ಬಿಳಿಗಿರಿ ರಂಗನಿಗೆ ಬಡವರಲ್ಲಿ ಪ್ರೀತಿ ಇದೆ. ಬಡವ ಅವನ ಕರುಣೆಗೆ ಹೊರಗಾದವನಲ್ಲ. ಬಿಳಿಗಿರಿರಂಗನಿಂದ ನಾಡೇ ಪವಿತ್ರವಾಗಿದೆ. ಅವನ ಬೆಟ್ಟದ ಬಿದಿರು ಸಾರ್ಥಕವಾಗಿದೆ.

ಬೆಟ್ಟದ ಬಿದಿರೇ ಹಟ್ಟೀಗೆ ನೆಳಲಾದೆ
ಜಾಣ ರಂಗೈಯ್ಗೆ ಕೊಳಲಾದೆ—ಸಿರಿಬಿದಿರೆ
ಮುತ್ತು ಕೇರೋಕೆ ಮೊರನಾದೆ.

ಬೇರೆ ಕಡೆ ಇರುವ ಬಿದಿರು ಜಿಳಿಗಿರಿರಂಗನ ಬಿದಿರಿಗೆ ಸಾಟಿಯಾಗಬಲ್ಲದೆ ? ರಂಗಯ್ಯ ಬೆಳಗಿನ ಜಾವದಲ್ಲಿ ಪೋಮದ ಅಗ್ನಿಗೆ ಹೊರಡುತ್ತಾರೆ. ಆಗ ಇನ್ನೂ ಯಾರೂ ಎದ್ದಿರುವುದಿಲ್ಲ, ಹೊತ್ತು ಮೂಡಿರುವುದಿಲ್ಲ.

ಹೊತ್ತು ಮೂಡೊ ಮುಂಚೆ ನಿತ್ರೇಳೊ ಮುಂಚೆ
ಮಸ್ತಾವಿನ ಪೆಟ್ಗೆ ಬಲಗೈಲಿ—ಹಿಡಕೊಂಡು
ನಿತ್ರೇರಗ್ನೀಗೆ ಹೊರಟಾರೊ.

ಆದರೆ ಇಂತಹ ಚೆಲುವನನ್ನು ಲಕ್ಷ್ಮೀದೇವಿ ಆರತಿಮಾಡದೆ ಕಳುಹಿಸುತ್ತಾಳೆಯೆ ?

ಅಚ್ಚ ತುಳಸೀದಂಡೆ ನಿಚ್ಚ ನೀಲೀನಾಮ
ಪಕ್ಷೀಯ ಮೇಲೆ ಮೆರೆಯೋರೆ—ರಂಗಯ್ಗೆ
ಲಕ್ಷ್ಮಿ ಆರತಿ ಹಿಡಿದಾಳೊ.

೪

ಪೂರ್ವಘಟ್ಟದಲ್ಲಿ ಏಳುಮಲೆ ಮಾದೇಶ್ವರನ ದೇವಾಲಯವಿದೆ. ರೈತರು ಸಾಧಾರಣವಾಗಿ ಈ ದೇವರಿಗೆ ಹರಕೆಹೊರುತ್ತಾರೆ. ವರುಷಕ್ಕೆ ಒಂದು ಸಲ ಮಾದೇಶ್ವರನ ಜಾತ್ರೆಗೆ ರೈತರು ಲಕ್ಷ ಲಕ್ಷ ಸಂಖ್ಯೆಯಲ್ಲಿ ಸೇರುತ್ತಾರೆ. "ಮಲ್ಲಿಗೆ ಹೂವಿನ ಹಾಗೆ ಚೆಲ್ಲಿವೆ ನಿನ್ನ ಪರಸೆ. ಚೆಲ್ಲಾಟಗಾರ ಮಾದಪ್ಪ. ನಿನ್ನಪರಸೆ ಕಲ್ಲುಹತ್ತಿ ಕಣಿವೆ ಇಳಿದಾವು." ಅವರ ಕಾಲಿನಿಂದ ಹೊರಟ "ಅರಿಸಿನದ ಹುಡಿಯಂತಹ ಕೆಂಧೂಳಿ" ಆಕಾಶವನ್ನು ಮುಟ್ಟುತ್ತದೆ. ಮಾದೇಶ್ವರನ ದೇವಸ್ಥಾನ ಒಳ್ಳೆಯ ಕಾಡಿನಲ್ಲಿದೆ. ಹೋಗುವುದು ಕಷ್ಟ. ಹರಕೆ ಹೊತ್ತವರು ಒಂದೊಂದು ಸಲ ದೂರದಿಂದಲೇ ನಮಸ್ಕಾರ ಮಾಡಿ "ಆಯಿತು" ಎನ್ನಿಸಲು ಪ್ರಯತ್ನಿಸುತ್ತಾರೆ. ಆದರೆ ಮಾದೇವ ಒಪ್ಪುವುದಿಲ್ಲ. ಹೊತ್ತ ಹರಕೆ ಸಲ್ಲಿಸಲೇಬೇಕು.

ಹಣ್ಣುಕಾಯಿ ಪೂಜೆ ಚಿನ್ನಾದ್ದುಲಿಯವನೆ
ಬರಲಾರೆ ನಿಮ್ಮ ಏಳ್ಮಲೆಗೆ—ಮಾದೇವ
ಒಪ್ಪಿಸಿಕೊಳ್ಳಿ ಹರಕೇಯ.

ಹರಕೇಯ ಒಪ್ಪುವಾರೆ ಚಿಕ್ಕವ್ನ ಮಗಳಲ್ಲ
ಬಳಸಿ ಬಾರವ್ನ ಪ್ರಾಕಾರ—ಬರದಿದ್ರೆ
ಮಾದೇವ ನಿನಗೆ ಮುನಿಯಾವ.

ಹೊತ್ತ ಹರಕೆ ಒಪ್ಪಿಸದೆ ಇದ್ದರೆ ಎಂದಿಗೂ ಮನಸ್ಸಿಗೆ ತೃಪ್ತಿಯಿಲ್ಲ. ಆದುದರಿಂದ ಎಷ್ಟೇ ಕಷ್ಟವಾದರೂ, ರೈತರೂ ಅವರ ಹೆಣ್ಣುಮಕ್ಕಳೂ ಏಳುಮಲೆಗೆ ಹೋಗಿಯೇ ಹೋಗುತ್ತಾರೆ. ಮಾದೇಶ್ವರ ಕರುಣಾಮಯ. ಆ ಕಾಡುದಾರಿಯಲ್ಲಿ ಭಕ್ತರಿಗೆ ದಾರಿ ತೋರಿಸುತ್ತಾನೆ.

ಸರ್ಪಾನಾ ದಾರೀಲಿ ಸಂಜೇನು ನಾ ಬಳಸಿ
ನೆಪ್ಪಿಲ್ದ ಮಲೆಗೆ ಬರಬಹುದೆ—ಏಳುಮಲೆ
ನೆಪ್ಪು ತೋರ್‍ಯಾವು ಹುಲಿ ಕರಡಿ.

ಮಾದೇಶ್ವರನಿಗೆ ತುಪ್ಪವನ್ನು ಕಂಡರೆ ಪ್ರೀತಿ ಹೆಚ್ಚು. ಭಕ್ತರು ಆಶ್ತಾಡಿ ಬರುವ ಮಾದೇಶ್ವರನ ಪರಸೆಯನ್ನು "ತುಪ್ಪಾ ಕಾಸಿವ್ನಿ ಕಿತ್ತಲೆಹಣ್ಣು ಎಡೆದಿವ್ನಿ" ಎಂದು ಸ್ವಾಗತಿಸುತ್ತಾರೆ. ಮಾದಯ್ಯ ಒಳ್ಳೆಯ ಚೆಲ್ಲಾಟಗಾರ ದೇವರು. ಅವನು ಹೊರಟರೆ ಜಗತ್ತಿಗೆ ಮಂಗಳ. ಅವನ ಕಾಲಿನ ಸ್ಪರ್ಶದಿಂದ ಪ್ರಕೃತಿ ಸುವಾಸನೆಯಾಗುತ್ತದೆ. ಬಂಜರಿನಲ್ಲಿ ಬೆಳೆಬರುತ್ತದೆ. ಕಾಡು ಉಪವನವಾಗುತ್ತದೆ. ಲೋಕ ಸುಖಿಯಾಗುತ್ತದೆ.

ಮಾದಯ್ಯ ಬರುವಾಗ ಮಾಳೆಲ್ಲ ಘಮ್ಮೆಂದೊ
ಮಾಳದಲಿ ಗರಿಕೆ ಚಿಗರೀವೊ—ಮಾದೇವ
ಮೂಡ್ಲಲ್ಲಿ ಮಳೆಯು ಸುರಿದಾವೊ.

ಕಾಡಿನಲ್ಲಿರುವ ಮಾದಯ್ಯ ಒಳ್ಳೆಯ ಬೇಟೆಗಾರ. ತೇಜಸ್ವಿ. ಸುಂದರನಾದ ಕಟ್ಟಾಳು. ಒಪ್ಪುವ ಚೆನ್ನಾದ ರುಮಾಲನ್ನು ಧರಿಸಿದ್ದಾನೆ. ಆ ರುಮಾಲು ಮಾದಯ್ಯನಿಗೆ ಒಪ್ಪುವಷ್ಟು ಚೆನ್ನಾಗಿ ಇನ್ನಾರಿಗೂ ಒಪ್ಪುವುದಿಲ್ಲ.

ಪಟ್ಟೆ ರುಮಾಲು ಯಾವ ಜಗೀಗೆ ಅಮರೀವೊ
ಬಟ್ಟೋರಿ ಮೇಲೆ ಬರುವೋರು—ಮಾದೇವಗೆ
ಪಟ್ಟೆ ರುಮಾಲು ಅಮರೀವೊ.

ರೈತನಿಗೆ ಯಾವಾಗಲೂ ಬೇಟೆಗಾರ ದೇವರನ್ನು ಕಂಡರೆ ಇಷ್ಟ ಹೆಚ್ಚು. ಮಾದಯ್ಯ ಈ ರೀತಿ ಬೇಟೆಗಾರನಾದುದರಿಂದ ತಾನು ದೇವಸ್ಥಾನವನ್ನು

ಬಿಟ್ಟು ಕಾಡಿಗೆ ಹೋಗುವಾಗ ಅದಕ್ಕೆ ಒಳ್ಳೆಯ ಕಾವಲನ್ನು ನಿಯಮಿಸಿ ಹೋಗುತ್ತಾನೆ.

ಕರಡೀನ ಕಲ್ಮಾಡಿ ಹುಲಿಯ ಹುತ್ತಾ ಮಾಡಿ
ಮಡಗಿದ್ದ ಚಿತ್ತ ಮರೆಮಾಡಿ—ಮಾದೇವ
ಹೊರಟಾನು ಜೇನುಮಲೆಗಾಗಿ.

ಮಾದೇವ ಗಂಡು ಹುಲಿಯ ಮೇಲೆ ಕುಳಿತು ಈದ ಹುಲಿಯ ಬೇಟೆಯಾಡುತ್ತಾನೆ. ಅವನ ತೆಪ್ಪತೇರಿನ ಮೇಲೆ ಎಪ್ಪತ್ತೇಳು ಕೋಟಿ ನವಿಲು ಹಿಂಡು ಕುಳಿತುಕೊಂಡು ಕಳಸಕ್ಕೆ ಕಪ್ಪು ತುಂಬುತ್ತವೆ. ಅವನ ಗುಡಿಯ ಬಾಗಿಲಿನ ಮುಂದೆ ಎಪ್ಪತ್ತೇಳು ಕವಲುಮರ ಹುಟ್ಟಿ ತುಪ್ಪಮಾರುವವರಿಗೆ ನೆಳಲಾಗುತ್ತದೆ. ಮಾದಯ್ಯ ಸಣ್ಣ ತೇರಿನ ಮೇಲೆ ಹನ್ನೆರಡು ಹೆಡೆಯ ಸರ್ಪದ ಜಡೆಯಲ್ಲಿ ಒರಗಿರುತ್ತಾನೆ. ಇಂತಹ ದೇವರಿಗೆ ಭಕ್ತಿ ಸಲ್ಲಿಸದೆ ಇರುವುದೆಂತು ?

ಹೊತ್ತು ಮುಳುಗಿದರೇನು ಕತ್ತಲಾದರೇನು
ಅಪ್ಪ ನಿನ ಗುಡಿಗೆ ಬರುವೇನೊ—ಮಾದಯ್ಯ
ಮುತ್ತೀನ ಬಾಗಿಲು ತೆರೆದೀರೊ.

ಬೇಟೆ ಮಾದೇಶ್ವರನಿಗೆ ಮಾತ್ರ ಮೀಸಲಾದುದಲ್ಲ. ಕಾಡುಗಳಲ್ಲೂ ಬೆಟ್ಟಗಳಲ್ಲೂ ಇರುವ ಎಲ್ಲಾ ದೇವರುಗಳೂ ಬೇಟೆಗಾರರೇ. ಬಿಳಿಗಿರಿರಂಗನೂ ಬೇಟೆಯಲ್ಲಿ ನಿಪುಣನಾದ ದೇವರೆ. "ರಂಗನ ತೇಜಿಗೆ ಹೊಂಬಾಳೆ ಪಲ್ಯಾಣ, ದುಂಡುಮಲ್ಲಿಗೆ ಮೊಕರಂಬ. ಇಂಬಿ ಕಿತ್ತಲೆ ಕಿರುನೆಲ್ಲಿ ವನದಲ್ಲಿ ಅವನು ಹೆಬ್ಬುಲಿಗೆ ಗುರಿಯಿಡುತ್ತಾನೆ." ರಂಗ ಬೇಟೆಗೆ ಹೊರಡುವ ರಭಸ ಬಹು ಜೋರು. "ರಂಗ ಬರುವುದ ಕಂಡೆ, ಅಂಬುಬಾಣವ ಕಂಡೆ ; ತೆಂಗಿನ ಮರವ ಮರೆಗೊಂಡೆ, ಬೇಟ್ಗಾರ ರಂಗಪ್ಪ ಬರುವ ರಭಸೀಗೆ.' ಭಕ್ತರು ರಂಗನನ್ನು ನೋಡಬೇಕಾದರೆ ಯಾವ ಕಪ್ಪ ಕಾಣಿಕೆಯನ್ನೂ ತರುವ ಆವಶ್ಯಕವಿಲ್ಲ. ಬರಿಯ ಕೈಯಲ್ಲಿ ಭಕ್ತಿಯಿಂದ ನೋಡಬಹುದು.

ರಂಗನ್ನ ನೋಡೋಕೆ ರೇಕುಮಾಣಿಕವೇಕೆ
ಅಂಗಯ್ಯ ತುಂಬ ಹಣವೇಕೆ—ಬೇಟ್ಗಾರ
ಸಿಂಗರದ ರಂಗ್ನ ನೋಡೋಕೆ.

ಆದರೆ ಮಂಗಳ ದ್ರವ್ಯಗಳಾದ ರಂಗೋಲೆ ಮತ್ತು ಮಂಗಳಾರತಿಗಳು ಬೇಕೇ ಬೇಕು.

ರಂಗ ಬರ್ತ್ತಾನೆಂದು ರಂಗೋಲೆ ನಾನೊಯ್ದೆ
ರಂಗನ ಹಿಂದೆ ರಮಣೀರು—ಬರ್ತ್ತಾರೆಂದು
ಮಂಗಳಾರತಿ ನಾ ತಂದೆ.

೫

ನಮ್ಮ ಜನಕ್ಕೆ ತೇರು ಬಹಳ ಮುಖ್ಯವಾದುದು. ಇದನ್ನು ರಥೋತ್ಸವ, ಜಾತ್ರೆ ಎನ್ನುತ್ತಾರೆ. ಸುಗ್ಗಿ ಆಗ ತಾನೆ ಮುಗಿದು, ಮನೆಯಲ್ಲಿ ಧಾನ್ಯ ತುಂಬಿರುವುದರಿಂದ ತೇರಿನಲ್ಲಿ ಉತ್ಸಾಹದಿಂದ ಓಡಾಡಲು ರೈತನಿಗೆ ಮನ ಶ್ಯಾಂತಿ ಇರುತ್ತದೆ. ಜತೆಗೆ ಬಿಡುವೂ ಇರುತ್ತದೆ. ಎಂತಹ ದೊಡ್ಡ ತೇರನ್ನೂ ರೈತ ಸುಲಭವಾಗಿ ಹರಿಯಿಸುತ್ತಾನೆ.

ಉದ್ದಾನೆ ಗಿಡ ಮುರಿದು ಗುದ್ದಲಿ ಕಾವಾದೊ ತಿದ್ದಿದೊವು ಏಳು ಹಲಗ್ಯಾದೊ
ಕಡಲೆಯ ಗಿಡ ಮುರಿದು ಕೊಡಲಿಯ ಕಾವಾದೊ ಕಡದಾವು ಏಳು ಹಲಗ್ಯಾದೊ
ರಂಗಯ್ನ ಗುಡಿಯ ಬಾಗಿಲಿಗೆ ನಿಲವಾದೊ ರಂಗಯ್ನ ಗುಡಿಯ ಬಾಗಿಲಿಗೆ
ಕದವಾದೊ.

ತೇರನ್ನು ಕಟ್ಟುವುದಕ್ಕೆ ಎಲ್ಲಾ ಕಡೆಯ ಉತ್ತಮರಾದ ಕೆಲಸಗಾರರೂ ಬೇಕು. ಅದೇ ಅವರ ವಿದ್ಯೆಗೆ ಸಾರ್ಥಕ್ಯ.

ಬಾಗೂರ ಬಡಗಿಯ ಬೇಗನೆ ಬರಹೇಳಿ
ಭಾರಿಗುಳವಾಚಿ ಸಹಿವಾಗಿ—ರಂಗಯ್ನ
ಭಾರಿಯ ತೇರಾ ಕಡೆದಾರು.

ತಿಟ್ಟೂರ ಬಡಗೀಯ ತಟ್ಟನೆ ಬರಹೇಳಿ
ಕಟ್ಟೇ ಉಳವಾಚಿ ಸಹಿವಾಗಿ—ರಂಗಯ್ನ
ಭಾರಿಯ ತೇರ ಕಡೆದಾರು.

ಕಲ್ಲಾನೆ ಕುಟಕೋರು ಚೇಣೂರು ಪಾಂಚಾಲ್ರು
ಚಿನ್ನಾದ ಉಳಿಯ ಮಸಕೊಂಡು—ರಂಗಯ್ನ
ಕಲ್ಲು ಮಾಳಿಗೆ ಕಡೆದಾರೊ.

ದಾಳಾದ ಬಾನ ಏಳು ಚೂರಿಪಾನ
ದಾಳಾಕಿಂತ ಮುಂದೆ ಬರುವೋನೆ—ರಂಗಯ್ಗೆ
ಛತ್ರಿ ಹಿಡಿದವು ಹುಲಿಕರಡಿ.

ಮುರುಡಾದ ನಡೀಸೋನೆ ಜೋಡು ಸಂಕಿನೋನೆ
ರಾಜ್ಯಾವನೆಲ್ಲಾ ಸಲವೋನೆ—ರಂಗಯ್ಗೆ
ದೂರಾದ ಪರಸೆ ಕವಿದಾವೊ.

ಸ್ವಾಮಿ ರಂಗಯ್ಯ ತೇರುಮೇಲ್ಕೆ ಹೋಗುವಾಗ ಎಪ್ಪತ್ತು ಪಂಜು ಹಿಡಿ ಕುದುರೆ
ಸ್ವಾಮಿ ರಂಗಯ್ಯ ತೆಪ್ಪದ್ಕೊಳಕ್ಕೋಗುವಾಗ ಇಪ್ಪತ್ತು ಪಂಜು ಹಿಡಿದಾರೊ.

ರೈತನಿಗೆ ತೇರಿಗಿಂತ ದೊಡ್ಡ ಹಬ್ಬ ಯಾವುದೂ ಇಲ್ಲ. ತೇರಿನ ಮೇಲೆ ಏರಿದ ಭಗವಂತನನ್ನು ಸೇವಿಸುವುದಕ್ಕಿಂತ ಹೆಚ್ಚಾದ ಆನಂದವೂ ಯಾವುದೂ ಇಲ್ಲ.

ಮುಂಗೋಳಿ ಕೂಗ್ಯಾವು ಮೂಡು ಕೆಂಪೇರ್ಯಾವು
ನಾರಾಯಣಸ್ವಾಮಿ ರಥವೇರಿ—ಬರುವಾಗ
ನಾವೆದ್ದು ಕೈಯ ಮುಗಿದೇವು.

ನಾಲ್ಕು ಮೂಲೆಗೆ ನಾಲ್ಕು ಚಿನ್ನದ ಕಂಬ
ಬೆಳ್ಳಿಯ ಗಂಟೆ ಸರಪಣಿ—ಲೋಕಾವು
ಕಲ್ಲಣಿಸೆ ತೇರು ಹರಿದಾವು.

ರೈತ ಪೆಂಡತಿಯೊಂದಿಗೆ ಜಾತ್ರೆಗೆ ಬಂದೇ ಬರುತ್ತಾನೆ.

ಜಾತ್ರೆಗೆ ಹೊಯ್ತೀನಿ ಜವನಾವ ತತ್ತೀನಿ
ಹೂವ ತತ್ತೀನಿ ತುರುಬಿಗೆ—ಅತ್ತೆಮಗಳೆ
ಬಂದಿ ತತ್ತೀನಿ ಬಲಗೈಗೆ.

ಇಂತಹ ತೇರಿಗೆ ಪ್ರಾರ್ಥನೆ ಮಾಡಿಕೊಂಡರೆ ಯಾವ ಇಷ್ಟಾರ್ಥವೂ ನೆರವೇರುತ್ತದೆ. ಅದರಲ್ಲೂ ಮಕ್ಕಳಿಲ್ಲದವರಿಗೆ ಮುಖ್ಯವಾದ ಆಸೆಯಾದ ಮಕ್ಕಳು ಲಭಿಸುತ್ತವೆ. ಆದುದರಿಂದಲೇ ತಾಯಿ ಮಗಳಿಗೆ ಹೀಗೆ ಹೇಳುತ್ತಾಳೆ.

ತೇರು ಹರಿದಾವು ತಾನಕ್ಕೆ ನಿಂತಾವು
ತಾರೊ ಚೆನ್ನಯ್ಯ ಜವನವ—ಬಾಳೆಹಣ್ಣು
ಬೇಡಿಕೊಳ್ಳೆ ಮಗಳೆ ಸೆರಗೊಡ್ಡಿ.

ಈ ದೇವರು ಭಕ್ತರ ಸಂತೋಷಕ್ಕಾಗಿ ಮನುಷ್ಯನಿಗಿಂತ ಮನುಷ್ಯನಾಗಿ ಬಗೆಬಗೆಯ ಲೀಲೆಗಳನ್ನು ತೋರಿಸುತ್ತಾನೆ. ನಂಜುಂಡನು ಏಳಬೇಕಾದರೆ ಪಗಡೆಯಾಟಕ್ಕೆ ಸೂಳೆ ಬರಬೇಕಂತೆ; ಇಲ್ಲದಿದ್ದರೆ ಮಲಗಿಯೇ ಇರುತ್ತಾನಂತೆ.

ಏಳಿರಿ ನಂಜುಂಡ ಏಟ್ಹೊತ್ತು ಸುಖನಿದ್ರೆ
ಆನೆ ಬಂದಿದೆ ಅರಮನೆಗೆ—ನಂಜುಂಡ
ಸೂಳೆ ಬಂದವಳೆ ಪಗಡೇಗೆ.

ಅಷ್ಟೇ ಅಲ್ಲ. ನಂಜುಂಡ ಬರಿಯ ಸೂಳೆಯೊಂದಿಗೆ ಪಗಡೆಯಾಡಿದರೆ, ಬಿಳಿಗಿರಿ ರಂಗ ಗಿಡ್ಡಿ ಎಂಬ ಭಕ್ತಳನ್ನು ಪ್ರೀತಿಸಿ ಅವಳಿಗೆ ಒಡವೆಗಳನ್ನೆಲ್ಲಾ ತೆಗೆದು ಕೊಡುತ್ತಾನಂತೆ. "ಒಡವೆಗಳು ಬಂದಿವೆ ತೆಗೆದುಕೊ:"

ಮೂಡಲು ತಿಮ್ಮಪ್ಪ ಮುತ್ತ ವಾರುತ ಬಂದ
ಬೇಲೂರ ಚೆನ್ನ ಬೆಲೆಮಾಡೊ—ಕೊಟ್ಟಾರೆ
ಬೇಡವೆ ಗಿಡ್ಡಿ ಕೊರಳೀಗೆ.

ದೇವರು ಮನುಷ್ಯನಂತೆ ಸೂಳೆಮನೆಗೆ ಕದ್ದು ಹೋಗುವುದು ರೈತನಿಗೆ ಕಾಣುತ್ತದೆ.

ಅಲ್ಲಾಣೆ ಇಲ್ಲಾಣೆ ಕಲ್ಯಾಣಿ ಕೊಳದಾಣೆ
ದೊಡ್ಡ ಸಂಪೀಗೆ ಮರದಾಣೆ—ರಂಗಯ್ಯ
ಕದ್ಹೋದ ಸೂಳೇರರಮನೆಗೆ.

ಅರಮನೆಗಳಿರುವುದು ಇಬ್ಬರಿಗೆಯೆ—ರಾಜರಿಗೆ, ಸೂಳೆಯರಿಗೆ.

೬

ಮದುವೆ ಮಾಡಿಕೊಳ್ಳಬೇಕಾದರೆ ದೇವರುಗಳೂ ನಮ್ಮಷ್ಟೇ ಸಾಹಸಪಡಬೇಕು. ನಮ್ಮಷ್ಟೇ ತಿರುಗಬೇಕು. ನಮ್ಮಂತೆಯೇ ತೆರ ಕಟ್ಟಬೇಕು. ಅವರೂ ಕೂಡ ಚೆಂದುಳ್ಳ ಹೆಣ್ಣು ಎಂದರೆ ಬಾಯಿ ಬಾಯಿ ಬಿಡುತ್ತಾರೆ. ಎಷ್ಟು ಬೇಕಾದರೂ ಹಣ ತೆರುತ್ತಾರೆ.

ಗಿರಿಜೆಯ ಕೇಳೊಕೆ ಗಿರಿಯಿಂದ ಮಲ್ಲಯ್ಯ ಬಂದ
ಗಿರಿಯುದ್ದ ಹೊನ್ನ ಅಳಕೊಂಡು—ಬಂದವ್ರೆ
ಗಿರಿಯು ದೂರೆಂದು ಗಿರಿಜೇಯ ಕೊಡರಂತೆ.

ಹಾಲು ಅನ್ನ ಉಣ್ಣು ಸರಮುತ್ತ ನೀ ಕಟ್ಟು
ಸಾಲುಮಾಳಿಗೆಯಲ್ಲಿ ಇರುವಂಥ—ಗಿರಿಜೆ
ಮೂಡ್ಲ ರಾಯ್ರೊಗ್ಳಿಗೆ ನಿನ್ನ ಕೊಡಬೇಕು.

ಹಾಲು ಅನ್ನ ಒಲ್ಲೆ ಸರಮುತ್ತ ಕಟ್ಟೊಲ್ಲೆ
ಸಾಲು ಮಾಳಿಗೆಯಲ್ಲಿ ಇರವೊಲ್ಲೆ—ಮೂಡಣ
ರಾಯರು ನಮ್ಮ ಅಣ್ಣಾರು.

ತುಪ್ಪ ಅನ್ನ ಉಣ್ಣು ಗಿರಿಜೆ ಬಟ್ಟಮುತ್ತ ಕಟ್ಟು ಗಿರಿಜೆ
ಪಟ್ಟೆಮಾಳಿಗೆಯಲ್ಲಿ ಇರು ಗಿರಿಜೆ—ಮೂಡಲ
ಶೆಟ್ಟಿಗೊಳ್ಗೆ ನಿನ್ನ ಕೊಡಬೇಕು.

ಆದರೆ ಮಲ್ಲಯ್ಯನ ಕಣ್ಣು ಗಿರಿಜೆಯ ಮೇಲೆ ಬಿತ್ತು. "ಕಡೆಗಣ್ಣ ಭಾವಕ್ಕೆ ಹಿಡಿಹೊನ್ನ ಕೊಟ್ಟೇನು" ಎಂದರು. ಜಪ ಮರೆಯಿತು. ಸಂನ್ಯಾಸಿಯ ಧ್ಯಾನ ಸೆರಗಮೇಲೆ ಆಯಿತು.

ಕಾಡುಗಣ್ಣಿನೋಳ ಕೂಡಿದ್ದುಬ್ಬಿನೋಳ
ಕೋಡೀಲಿ ನೀರ ಮೊಗೆಯೋಳ—ಗಿರಿಜೆಯ ಕಂಡು
ಮಲ್ಲಯ್ಯ ಜಪವ ಮರೆತಾರು.

ಜಪ ಮರೆತ ಮಲ್ಲಯ್ಯ "ನಮ್ಮ ಗಿರಿಗೆ ಬಾ" ಎಂದು ಪಾರ್ವತಿಯನ್ನು ಕರೆದರು. ಪಾರ್ವತಿ ಹಾಗೆ ಹೋಗುವುದಕ್ಕೆ ಒಪ್ಪುತ್ತಾಳೆಯೆ? ಅಳಿಯನ ದೊಡ್ಡಸ್ತಿಕೆಯಲ್ಲಿ ಸಂಪಿಕೆಯಿಲ್ಲದ ತಂದೆತಾಯಿಗಳು ಅವನಿಗೆ ಹೆಣ್ಣುಕೊಡಲು ಒಪ್ಪುತ್ತಾರೆಯೆ? ಆದುದರಿಂದ ಪಾರ್ವತಿ "ಎತ್ತಿನ್ಮೇಲೆ ಪಟ್ಟೆಸೀರೆ ಹೇರಿಕೊಂಡು ಬನ್ನಿ. ಹೋರಿ ಮೇಲೆ ಶಾಲುಸೀರೆ ಹೇರಿಕೊಂಡು ಬನ್ನಿ. ಅನಂತರ ನಮ್ಮ ತಂದೆಯನ್ನು ಕೇಳಿ" ಎಂದು ಹೇಳಿ ಅರಮನೆಗೆ ಹೊರಟುಹೋದಳು. ಆದರೆ ಅರಮನೆಗೆ ಹೋದರೂ ಕುಟ್ಟುವುದು, ಕೇರುವುದು, ಬೀಸುವುದು ತಪ್ಪಲಿಲ್ಲ. ಕುಟ್ಟುವುದನ್ನೂ ಕೇರುವುದನ್ನೂ ಬೀಸುವುದನ್ನೂ ತಪ್ಪಿಸಿಕೊಂಡ ರೈತ ಯಾರು?

ಹಟ್ಟೀಲಿ ಗಿರಿಜಮ್ಮ ಕುಟ್ಟುತೇನೆಂದಾಳು
ಅಪ್ಪಾಜಿ ನನ್ನ ಕೊಡಬೇಕು—ಬೆಟ್ಟಾದ
ಎಪತೊಂದು ಜಡೆಯ ಶರಣರಿಗೆ.

ಹಾದೀಲಿ ಉಣ್ಣೋರು ಬೀದೀಲಿ ಒರಗೋರು
ತ್ಯಾಗದಲೆ ಹಿಡಿದು ತಿರಿದುಂಬೊ—ಜೋಗಿಯ
ಏನು ಮೆಚ್ಚಿದೆ ಸಿರಿಗಿರಿಜೆ.

ಹಾದ್ಯವ್ರ ಅರಮನೆ ಬೀದಿಯವರ ಪಟ್ಟಸಾಲೆ
ತ್ಯಾಗಾದೆಲೆ ಅವ್ರ ಹರಿವಾಣ—ಅಪ್ಪಾಜಿ
ಹ್ಯಾಗಿದ್ರು ಕೊಡಬೇಕು ಶಿವನಿಗೆ.

ಹಾದಿಯ ಅರುಬೇಯ ಜೋಡಿಸಿ ಆಯೋರು
ಆಯದಲಿ ಕಂತೆ ಹಿಡಿಯೋರು—ಗೊರವನ
ಏನು ಮೆಚ್ಚಿದೆ ಸಿರಿಗಿರಿಜೆ.

ಆಕಾಶೆಂಬೊದು ಇಲ್ಲಿಗೆ ಕಾಣೋದಿಲ್ಲ
ನರರಿಲ್ಲ ನರರ ಸುಳಿವಿಲ್ಲ—ಆ ಕೋಟ್ಗೆ
ಮಗಳೆ ಸಿರಿಗೌರಿ ಮನಸಾದೆ.

ಆಕಾಶ ಎಂಬೊದು ಇಲ್ಲಿಗೂ ಕಾಣತೈತೆ
ನರರುಂಟು ನರರ ಸುಳಿವುಂಟು—ತಾಯವ್ವ
ಹ್ಯಾಗಿದ್ರು ನಮ್ಮ ಕೊಡಬೇಕು.

ಮಲ್ಲಯ್ಯ ಕೈಲಾಸದಲ್ಲಿ ಸಿರಿಗಿರಿಜೆಯನ್ನೇ ಧ್ಯಾನಿಸುತ್ತ ಕುಳಿತಿದ್ದ. "ಗಿರಿಜೆಯನ್ನು ನಿಮಗೆ ಮದುವೆ ಮಾಡಿಕೊಡುತ್ತೇನೆ" ಎಂದು ಓಲೆ ಬಂದರೂ, ಅದು ಯಾವುದೋ ಓಲೆಯೆಂದು ಅದನ್ನು ಕೂಡ ಬಿಚ್ಚಿ ನೋಡುವ ಆಸೆಯಿಲ್ಲ ಅವನಿಗೆ.

ಹತ್ತಂಕ್ಣದರಮನೆ ಮೇಲೆ ಜೋದಿಗೆ ಸಾಲು
ಮಾಡಿಯ ಮೇಲೆ ಮಲಗಿರ್‍ವೊ—ಮಲ್ಲಯ್ಯ
ಓಲೆ ಬಂದಾವೆ ಓದೇಳೊ.

ಓಲೆ ಬಂದಿದ್ರೆ ನಾಳೆ ಓದಿಕೊಂಡೇನು
ಅತ್ತೆಮಗಳು ಸಿರಿಗಿರಿಜೆ—ಕೈಲಿರುವ
ಮುತ್ತಿನುಂಗರವ ಗೆಲಬೇಕು.

ಈಶ್ವರನಿಗೆ ಸಹ ಹತ್ತು ಅಂಕಣಕ್ಕಿಂತ ದೊಡ್ಡ ಮನೆಯನ್ನು ರೈತ ಕೊಡಲಾರ. ಮಲ್ಲಯ್ಯ ಗಿರಿಜೆಯ ಮನೆಗೆ ಹೊರಟರು. ದೇವರಾದರೂ ಅವರಿಗೆ ದಾರಿ ತಿಳಿಯಲಿಲ್ಲ. ವಿಚಾರಿಸಿಕೊಂಡರು. ಮಲ್ಲಯ್ಯನ ಮಾತೇ ಮುತ್ತು :

ಹಾದೀಲಿ ಮೇವೊ ಜಾಣ ಸಾರಗ ಹಿಂಡೆ
ಗ್ಯಾನೀಸಿ ಮೇವೊ ನವಿಲ್ಹಿಂಡೆ—ಸಾರಗದ್ಹಿಂಡೆ
ಜಾಣ ಗಿರಿಜೆಯ ಮಠವೆಲ್ಲಿ.

ಹಟ್ಟೀಲಿ ಮೇವೊ ಪುಟ್ಟ ಸಾರಗ ಹಿಂಡೆ
ದಿಟ್ಟೀಸಿ ಮೇವೊ ನವಿಲ್ಹಿಂಡೆ—ಸಾರಗನ್ಹಿಂಡೆ
ಪುಟ್ಟ ಗಿರಿಜೆಯ ಮಠವೆಲ್ಲಿ.

ಮಲ್ಲಯ್ಯ ಹಾಗೂ ಹೀಗೂ ಅಲೆಯುತ್ತಾ "ಹವಳದ ಹೊರಗೋಡೆ ಮುತ್ತೀನ ಮುಂಭಾಗ, ಸಣ್ಣರುದ್ರಾಕ್ಷಿ ಮೇಲು ಹೊದಿಕೆಯ" ಗಿರಿಜೆಯ ಮಠಕ್ಕೆ ತಲಪಿದರು. ಮಲ್ಲಯ್ಯನನ್ನು ಕಂಡು ಯಾರಿಗೂ ಸಂತೋಷ ವಾಗಲಿಲ್ಲ. "ಹಟ್ಟೀಲಿ ಮಲಗೋರು, ಕೋಟೇಲಿ ಒರಗೋರು, ಬೀದೀಲಿ ತಿರುಗೋರು, ಎತ್ತು ಹಿಡಿದವರು," ಇವರಿಗೆ ಹೆಣ್ಣುಕೊಡಲು ಗಿರಿಜೆಯ ತಂದೆ ಒಪ್ಪಲಿಲ್ಲ. ಪಾರ್ವತಿ ನೂರೊಂದು ಜಡೆಯ ಶರಣರನ್ನೇ ಮದುವೆ ಯಾಗುತ್ತೇನೆಂದು ಹಠಹಿಡಿದಳು. ತಂದೆಗೆ ಕೋಪ ಬಂತು:

ಬಾಯ್ಕಟ್ಟ ಗಿರಿಜೆಯ ಬಾಯ್ಮೇಲೆ ಹೊಯ್ಯೀರಿ
ಓಲೆ ಬಂಗಾರ ಅಳಕೊಳ್ಳಿ—ಗಿರಿಜೆಯ
ಬಾಗ್ಲಿಂದಾಚೆಗೆ ತಳ್ಳೀರಿ.

ಭಂಗಾರ ಅಳದೀರ ಬಾಯ್ಮೇಲೆ ಹೊಯ್ದೀರ
ಬಾಗ್ಲಿಂದಾಚೆಗೆ ತೆಗಳೀರ—ಅಪ್ಪಾಜಿ
ಹುಟ್ಟಿದಾ ಮನೆ ತಿರುವೀರಾ.

ನೀತ್ಗಟ್ಟ ಗಿರಿಜೆಯ ಕೆನ್ನೆ ಮೇಲ್ಹೊಯ್ಯೀರಿ
ಕೊಪ್ಪು ಭಂಗಾರ ಅಳಕೊಳ್ಳಿ—ಗಿರಿಜೆಯ
ಹಟ್ಟಿಯಿಂದಾಚೆಗೆ ತಳ್ಳೀರಿ.

ಎಂದು ಗಿರಿಜೆಯ ತಂದೆ ಗರ್ಜಿಸಿದನು. ಕೊನೆಗೆ ಗಿರಿಜೆಯ ತಾಯಿ ತಂದೆಗಳು ಮಲ್ಲಯ್ಯನಿಗೆ ಗಿರಿಜೆಯನ್ನು ಕೊಡಲು ಒಪ್ಪಿದರು.

ಕಪ್ಪು ಮಲ್ಲಯ್ಯಗು ಒಪ್ಪು ಗಿರಿಜಮ್ಮನಿಗೂ
ಇಪ್ಪತ್ತು ದೀವಟಿಗೆ ಬೆಳಕಲ್ಲಿ—ಗಿರಿಜಮ್ಮಗೆ
ವಾಲೆಗೆ ವಜ್ರ ಬಿಗಿದಾರು.

ಸ್ವಾಮಿ ಮಲ್ಲಯ್ಯಗು ಬಾಲೆ ಗಿರಿಜಮ್ಮಗೂ
ಸಾಲಾ ದೀವಿಗೆ ಬೆಳಕಲ್ಲಿ—ಮಲ್ಲಯ್ಯಗೆ
ಒಂಟಿಧೋತರ ಧರಿಸ್ಯಾರೊ.

ತಾನೆ ಮಲ್ಲಯ್ಯ ತಾನೆ ಸಿಂಗಾರ್‍ವಾದ
ಜಲತಾರರಂಗಿ ಜೋಮಾಲೆ—ಕಂಠೀಸರ
ರಾತ್ರಿಗ್ಮಲ್ಲಯ್ಯ ಮದಲಿಂಗ.

ಮೂಡಲ ಸೀಮಿಂದ ಮುತ್ತಿನ್ಯೆರಣೆ ಬಂದೊ
ಕೆತ್ತಿದ ಬಾಸಿಂಗ ಸಹಿವಾಗಿ—ಮದಲಿಂಗ
ಸ್ವಾಮಿ ಮಲ್ಲಯ್ಯನ ಮದುವೆಗೆ.

ಮೂಡಲ ಸೀಮಿಂದ ಮೂರ್ಮಣ ಹೂವು ಬಂದೊ
ಸ್ವಾಮಿ ಮಲ್ಲಯ್ಯನ ಮದುವೆಗೆ
ಸ್ವಾಮಿ ಮಲ್ಲಯ್ಯ ಮದಲಿಂಗಾನೆಂದು
ಹನ್ನೆರಡುಮಣ ಹೂವು ಬಂದೊ.

ಸ್ವಾಮಿ ಮಲ್ಲಯ್ಯಗೂ ಬಾಲೆ ಗಿರಿಜಮ್ಮನಿಗೂ
ಹಾಲಾ ಕೊಳದಲ್ಲಿ ಕೈದಾರೆ
ಸ್ವಾಮಿ ಮಲ್ಲಯ್ಯಗೂ ಬಾಲೆ ಗಿರಿಜಮ್ಮನಿಗೂ
ತುಪ್ಪದ ಕೊಳದಲ್ಲಿ ಕೈದಾರೆ.

ಮಲ್ಲಿಗೆ ಹೂಕೊಯ್ದು ದುಂಡುಮಾಲೆಯ ಕಟ್ಟಿ
ಮೈಸೂರ ದೊರೆಗಳು ಕಳಿಸವ್ರೆ—ಏನೆಂದು
ಭೋಗಿ ಮಲ್ಲಯ್ಯನ ಮದುವೆಗೆ.

ನಿಲ್ಲೆ ಗಿರಿಜಮ್ಮ ನಿಲ್ವಾ ನೋಡಾರಂತೆ
ಅಂಗಾಲ ಪದುಮ ಸುಳಿಸುದ್ದ—ನೋಡಾರಂತೆ
ನಿಲ್ಲೆ ಮಲ್ಲಯ್ನ ಇದಿರೀಲಿ.

ಬೆಟ್ಟದ್ಮಲ್ಲಯ್ಯಾಗೆ ಬಿಟ್ಟೀಯ ಸೂಳೇರು
ಪಟ್ಟೆ ಸೀರೆಯ ಬಿಗಿದುಟ್ಟು—ಮಲ್ಲಯ್ಯಾಗೆ
ತಟ್ಟೀಲಾರತಿ ಬೆಳಗ್ಯಾರು.

ಕಂಬದ್ಮಲ್ಲಯ್ಯಾಗೆ ಸಂಬಳದ ಸೂಳೇರು
ಕಾವಿಸೀರೆಯ ಬಿಗಿದುಟ್ಟು—ಕಾಸೆಹಾಕಿ
ತಟ್ಟೀಲಾರತಿ ಬೆಳಗ್ಯಾರು.

೭

ಸಂಸಾರಕ್ಕೆ ದೇವತೆಗಳನ್ನು ಎಳೆದು ಅವರೂ ನಮ್ಮಂತೆ ಪೇಚಾಟಕ್ಕೆ ಒಳಗಾದರೆಂದು ತೋರಿಸುವುದರಲ್ಲಿ ಅವರಿಗೂ ನಮಗೂ ಇರುವ ಅಂತರ ಕಡಿಮೆಯಾಗುತ್ತದೆ. ನಮಗೆ ಯಾವುದು ಸಂತೋಷವೋ ಅದೇ ದೇವರುಗಳಿಗೂ ಸಂತೋಷ. ನಂಜುಂಡ ಚಾಮುಂಡಿಯ ಅರಮನೆಗೆ ಹೋಗುತ್ತಾನೆ. ಅದರಿಂದ ದೇವಿ (ಪಾರ್ವತಿ)ಗೆ ಕೋಪಬರುತ್ತದೆ. ಅವನನ್ನು ಒಳಕ್ಕೆ ಬರಗೊಡದೆ ಬಾಗಿಲಿನಲ್ಲಿ ನರಳಿಸುತ್ತಾಳೆ. ದೇವಿಯರಿಗೂ ದೇವರಿಗೂ ಅಸೂಯೆ ತಪ್ಪಿದ್ದಲ್ಲ.

ಚಾಮುಂಡಿ ಎಂಬೋಳು ಸೀಮೆಗೆ ದೊಡ್ಡೋಳು
ಮಾಯಾದ ಬೂದಿ ಸೆರಗಲ್ಲಿ—ಕಟ್ಕೊಂಡು
ನ್ಯಾಯಕೆ ಮುಂದಾಗಿ ಹೊರಟಾಳು.

ಬೆಟ್ಟದ ಮೇಲವ್ಳೆ ಬಿಡುಮುಡಿ ಚಾಮುಂಡಿ
ತೊಟ್ಟವ್ಳೆ ಹುಲಿಯ ಚರುಮಾವ—ಚಾಮುಂಡಿ
ಮೆಟ್ಟಿ ನಿಂದವ್ಳೆ ರಣದಲ್ಲಿ.

ಬೇಟೆಗಾಗಿ ಬಂದ ನಂಜುಂಡಸ್ವಾಮಿಗೆ ದಾರಿ ತಪ್ಪಿತು. ಕತ್ತಲೆಯಲ್ಲಿ ಕಣ್ಣು ಮಂಕಾಯಿತು. ಯಾವುದಾದರೂ ಆಶ್ರಯ ದೊರಕೀತೇ ಎಂದು ಹುಡುಕಿದರು.

ಪಟ್ಟಣಕ್ಮುಂಚಾಗಿ ಹುಟ್ಟಿತು ಮೈಸೂರು
ಬೆಟ್ಟಾದ ಚಾಮುಂಡಿ ದಯದಿಂದ—ದೊರೆಗೊಳು
ಪಟ್ಟಣವಾಳ್ಯಾರು ಅನುಗಾಲ.

ನೆಟ್ಟಗೆ ಚಾಮುಂಡಿ ಬೆಟ್ಟಕ್ಕೆ ಬಂದರು.

ಎತ್ತು ತರೋಕ್ಹೋಗಿ ಹತ್ತುರಾಜ್ಯವ ತಿರುಗಿ
ವ್ಯಾಳ್ಯಾವು ತಪ್ಪೀತು ಎಲೆ ಬಾಲೆ—ಚಾಮುಂಡಿ
ತಾವು ಕೊಟ್ಬಾರೆ ತಳಗೇವು.

ರೈತನಿಗೆ ಎತ್ತು ತರುವುದಕ್ಕೆ ತಿರುಗಿ ಅಭ್ಯಾಸ. ಪಾಪ, ಅವನ ದೇವರು ತಳುಗುವುದಕ್ಕೆ ತಾವಿಲ್ಲದೆ ತಿರುಗುತ್ತಾನೆ:

ಹೋರಿ ತರೋಕ್ಹೋಗಿ ಆರು ರಾಜ್ಯವ ತಿರುಗಿ
ವ್ಯಾಳ್ಯಾವು ತಪ್ಪೀತು ಎಲೆ ಬಾಲೆ—ಚಾಮುಂಡಿ
ತಾವು ಕೊಟ್ಟಾರೆ ತಳಗೇವು.

ಆದರೆ ಈ ಹೊಸಬಸಿಗೆ ಚಾಮುಂಡಿ ಹೇಗೆ ತಾವು ಕೊಟ್ಟಾಳು:

ತಾವು ಕೊಡೋಕೆ ನಾವ್ಯಾರು ನೀವ್ಯಾರು
ಇರುವಾ ಪಟ್ಟಣದ ಹೆಸರ್ಹೇಳಿ—ಜಂಗಮರೆ
ಚಾಮುಂಡಿ ಕದವಾ ತೆಗೆವೇನು.

ಆಗ ನಂಜುಂಡ ದೇವರಾದರೂ, ತನ್ನ ಮಹಿಮೆಯನ್ನು ತಾನೇ ಹೇಳಿ ಕೊಳ್ಳಬೇಕಾಯಿತು:

ನಂಜನ್ಗೂಡಿನೋರು ತೆಂಗಿಂತೋಪಿನೋರು
ಗೊಂಬೆ ತೇರಲ್ಲಿ ಮೆರೆವೋರು—ಚಾಮುಂಡಿ
ನಂಜುಂಡ ಕಾಣೆ ಕದ ತೆಗೆಯೆ.

ಆಗ ಚಾಮುಂಡಿಗೆ ಆಶ್ಚರ್ಯವಾಯಿತು. "ಇದೇನು ನನ್ನ ಸ್ವಾಮಿ, ಇದೇನು ನನ್ನ ಗುರುವೆ? ನಿನ್ನ ಮಾಯೆ ನನಗೆ ತಿಳಿಯದು, ನಿಮ್ಮ ಕೈಲಿ ಮಂಕುಬೂದಿ ಇದೆ!" ಎಂದಳು. ಸ್ವಾಮಿ "ಮಂಕುಬೂದಿಯೂ ಇಲ್ಲ, ಮಾಯವೂ ಇಲ್ಲ. ನೀನೆ ಮಾಯ್ಕಾತಿ. ಮಂಕುಬೂದಿ ಇರುವುದು ನಿನ್ನ ಕೈಲೇ. ವಜ್ಜರದ ಅಗಣಿಯನ್ನು ತೆಗೆ" ಎಂದರು. ಆದರೂ ಚಾಮುಂಡಿಗೆ ನಂಬಿಕೆ ಬರಲಿಲ್ಲ. ಹೊದ್ದ ದೇವಾಂಗ ಅಳಿದಿಡಿ ಎಂದಳು. ನಂಜುಂಡನಿಗೆ ಹೇಗಾದರೂ ಒಳಕ್ಕೆ ಹೋದರೆ ಸಾಕು ಎನ್ನಿಸಿತ್ತು. "ಶಿವದಾರ್ಕಡ್ಕೆ ಕೊ ಬೆಳ್ಳಿ ಉಡ್ದಾರ ಕೊ ಈವಾಗ್ಲೆ ಕದವ ತೆಗೆ ಹೆಣ್ಣೆ" ಎಂದನು.

ಚಿನ್ನದ ಕಿರೀಟ ಕೊಳ್ಳಿ ಪಾದಾವ್ಗೆಜ್ಜೆ ಕೊಳ್ಳಿ
ಏರಾಕೆ ಕುದುರೆ ಕಳುವೇನು—ಎಲೆ ಬಾಲೆ
ಮಾಯ್ಕಾತಿ ಹುಡುಗಿ ಕದ ತೆಗೆಯೆ.

ಸ್ವಾಮಿ "ಕದ್ವಾ ತೆಗೆ ಹೆಣ್ಣೆ ಭಂಗಾರ ಕೊಟ್ಟೇನು, ಕೊಟ್ಟೇನು ಕೊರಳ ಪದಕವ" ಎಂದು ಆಸೆ ತೋರಿಸಿದರು. ಭಂಗಾರದ ಆಸೆಯನ್ನು

ಜೈಸಿದ ಹೆಣ್ಣು ಎಲ್ಲುಂಟು? "ಕದ್ವಾ ತೆಗೆದಾಳು ಕೈ ಎತ್ತಿ ಮುಗಿದಾಳು ದೇವನ ಸೆರಗ ಹಿಡಿದಾಳು."

ಸೆರಗುಬಿಡು ಸಾವಂತಿಗೆ ಉದರಾವು
ಅಚ್ಚಮಲ್ಲಿಗೆ ವನರಾಜ—ಉದರಾವು
ಮೆಚ್ಚಿ ಬಂದ್ದೆಣ್ಣೆ ಬಿಡು ಸೆರಗ.

ಹೋದ ಗಳಿಗೇಲಿ ಹಾಕ್ಯಾಳು ಮಂಚಾವ
ಬೇಕಾದ ಹೂವ ಮುಡಿಸ್ಯಾಳು—ಚಾಮುಂಡಿ
ಮುನ್ನಿಕೊಂಡಾಳು ಅರಗಳಿಗೆ.

ಸ್ವಾಮಿ ನಂಜುಂಡಾಗು ಬಾಲೆ ಚಾಮುಂಡಿಗು
ಸಣ್ಣ ಮಂಚದಲಿ ಪಗಡೇಯ—ಆಡ್ವಾಗ
ಸ್ವಾಮಿ ನಂಜುಂಡ ಸೋತಾನು.

ಸ್ವಾಮಿ ನಂಜುಂಡ ಸೋತಾರು ಅನ್ನುತ
ಶಿವದಾರ್ಕಡ್ಕೆ ಅಳಿದಾಳು—ಚಾಮುಂಡಿ
ಸಾಲುಮಂಚದಲಿ ಮಲಗ್ಯಾರು.

ಆದರೆ ಇತ್ತಲಾಗಿ ನಂಜನಗೂಡಿನ ಅರಮನೆಯಲ್ಲಿ ದೇವಿಯರು ಬಾಗಿಲ ಬಸವಣ್ಣ, ಭಂಗಾರದ ಈರಣ್ಣ ಇವರನ್ನೆಲ್ಲಾ ತರಾಟೆಗೆ ತೆಗೆದುಕೊಂಡರು. ಸ್ವಾಮಿಯನ್ನು ಎಲ್ಲಿಗೆ ಕಳುಹಿಸಿದಿರಿ ಎಂದು ಗದರಿಸಿದರು. ಪರಿವಾರ ದವರು ಹೆದರಿ ನಡುಗಿ ಕಾಲುಕಾಲಿಗೆ ಬಿದ್ದರು.

ಮಲ್ಲಿಗೆ ವನಕ್ಹೋಗಿ ಮಲ್ಹೂವ ಕುಯ್ಕೊಂಡು
ಮೆಲ್ಲಾಗೆ ನಂಜುಂಡ ಬರುತಾರೆ—ದೇವಿರಿ
ಚಿಂತಿಸಬೇಡ ಮನದಲ್ಲಿ.

ಆದರೆ ದೇವಿಯರಿಗೆ ನಂಬಿಕೆ ಬರಲಿಲ್ಲ. ಕೈಲಾಸದಲ್ಲಿ ಹೂವಿಗೆ ಏನು ಕಡಿಮೆ? ಹೂವಿಗಾಗಿ ಹೊರಗಡೆ ಹೋಗಬೇಕೆ?

ಮಳೆಗಾಲ್ದ ಮಲ್ಲಿಗೆ ಬೇಸಿಗೆ ಸಂಪಿಗೆ
ಬಿತ್ತಾದೆ ಬೆಳಿಯೋ ಬಿಳಿದುಂಬೆ—ಪುಷ್ಪಾವು
ಬಿದ್ದಾವೆ ನಮ್ಮ ಅರಮನೆಲಿ.

ಆದರೆ ಬಸವಣ್ಣ ದೇವಿಯರನ್ನು ಸಮಾಧಾನ ಮಾಡಿದ:

ಸಂಪಿಗ್ವನಾಕ್ಹೋಗಿ ಸಂಪ್ಗೇಯ ಕುಯ್ಕೊಂಡು
ತಂಪ್ನಲ್ಲಿ ನಂಜುಂಡ ಬರುತಾರೆ—ದೇವಿರಿ
ಚಿಂತಿಸಬೇಡ ಮನದಲ್ಲಿ.

ಬಸವಯ್ಯನಿಗೆ ದೇವಿಯರು ತನ್ನನ್ನು ಏನುಮಾಡುವರೋ ಎಂದು ಭಯವಾಯಿತು. ಆದುದರಿಂದ ಆತನು ಒಂದುಸಲ ಗರ್ಜಿಸಿದನು. "ಬಸ್ವಣ್ಣ ಕೂಗಿದ್ದು ಬೆಟ್ಟಾಕೆ ಎರಗಾವು ; ನಂಜುಂಡ ಬೆಚ್ಚಿಬಿದ್ರು. ಹೋ! ದೇವಿಯರಿಗೆ ಕೋಪಬಂದಿದೆ. ಇನ್ನು ಸಾಪಕಾಶ ಮಾಡಿದರೆ ಅಪಚಾರವಾದೀತು" ಎಂದುಕೊಂಡು ಎದ್ದರು. ಅದರಿಂದ ಚಾಮುಂಡಿಗೆ ಮುನಿಸು ಬಂತು.

"ಮುನ್ಸೀಗೆ ತಕ್ಕಾದ ಮುತ್ತಾನೆ ಚೆಲ್ಲೇವು
ಏಟ್ಹೊತ್ತು ಚಾಮುಂಡಿ ಕಣ್ಣೀರು."

"ಕಣ್ಣೀರು ನಮಗಿಲ್ಲ ಕಡುದುಃಖ ನಮಗಿಲ್ಲ
ಎಂದೀನ ಮನಸು ನಿಮಗಿಲ್ಲ."

ನಂಜುಂಡ ತಾವು ಚಾಮುಂಡಿಯ ಅರಮನೆಯಲ್ಲಿ ಬೆಚ್ಚಿದಂತೆ ನಟಿಸಿ ಎದ್ದರು. "ಬೆಚ್ಚಿದೆ. ಬೇಗ ತೆಗೆ ವಜ್ಜರದ ಅಗಣಿ, ಸ್ವಪ್ನಕ್ಕೆ ದೇವಿ ಬಂದಿದ್ದಳು" ಎಂದರು. ಚಾಮುಂಡಿ "ಯಾಕೆ ಕದ್ದು ಹೋಗುತೀರಿ? ಭಯವೇನು, ಇರಿ" ಎಂದು ಬೇಡಿದಳು. ನಂಜುಂಡ ಒಪ್ಪಲಿಲ್ಲ.

ಇದ್ದೂ ಹೋಗುವುದು ತರವೇನೆ ಚಾಮುಂಡಿ
ಚಿನ್ನಾದ ಕಿರೀಟ ಕಳವೇನು—ಚಾಮುಂಡಿ
ನೀನ್ಹಿಡಿದ ಸೆರಗಾ ಬಿಡು ಹೆಣ್ಣೆ.

ಹೀಗೆ ನಂಜುಂಡ ಉಪಾಯಮಾಡಿ "ಚಿನ್ನಾದ ಹಲ್ರಾವು, ಬೆಳ್ಳಿಯ ಕೊಳಗಾವು, ಏರಾಕೆ ಕುದುರೆ, ಪಾದಾಕೆ ಗೆಜ್ಜೆ, ತೊಡ್ವಾಕೆ ನಿಲ್ವಂಗಿ, ಚಿನ್ನದ್ಕಿರೀಟ" ಕಳುವೇನು ಎಂದು ಹೇಳಿ ಸೆರಗನ್ನು ಬಿಡಿಸಿಕೊಂಡು ಹೊರಟರು. ಮನೆಯಲ್ಲಿ ದೇವಿಯರು "ಎಲ್ಲಿಗೆ ಹೋಗಿದ್ದಿರಿ" ಎಂದು ಕೇಳಿದುದಕ್ಕೆ ನಂಜುಂಡ ನಿಸ್ಸಂಕೋಚದಿಂದ "ಕಾವೇರಿ ಹೊಳೆಯಲ್ಲಿ

ಜಂಗಮರು ಹಾಲು ಭೋಜನದ ಪರುವಿಗೆ ಕರೆದಿದ್ದರು. ಹೋಗಿದ್ದೆ. ಕಂದನ್ನ ನಾಣೆ" ಎಂದರು. ಆದರೆ ದೇವಿಯರು ಒಪ್ಪಲಿಲ್ಲ.

ಹಂದಿಯ ತಿನ್ನೊ ದೊಂಬಾತಿ ಮನೆಗ್ಹೋಗಿ ಕಂದನ್ನ ನಾಣೆ ಇಡಬಹುದೆ
ಕೋಳಿಯ ತಿನ್ನೊ ಕೊರ್ಮಾತಿ ಮನೆಗ್ಹೋಗಿ ಕಂದನ್ನನಾಣೆ ಇಡಬಹುದೆ?

ಎಂದು ಆಕ್ಷೇಪಿಸಿದರು.

ಅಂತೂ ಇಂತೂ ದೇವಿಯರಿಗೂ ನಂಜುಂಡನಿಗೂ ರಾಜಿಯಾಯಿತು. ಆದರೆ ತಪ್ಪು ನಡೆದ ಮೇಲೆ ಯಾರಿಗಾದರೂ ಶಿಕ್ಷೆ ಆಗಲೇಬೇಕಷ್ಟೆ. "ನಂಜುಂಡ ಚಾಮುಂಡಿಗೆ ಹೋದುದನ್ನು ದೇವಿಯರಿಗೆ ಹೇಳಿದವರು ಯಾರು"? ಎಂದು ಪ್ರಶ್ನೆ ಹೊರಟಿತು. ಕೊನೆಯಲ್ಲಿ, ಮಲ್ಲನ್ಮೂಲೆಯ ಬಸವ ಚಾಡಿಕೋರ ಎಂದು ಗೊತ್ತಾಯಿತು. ನಂಜುಂಡನಿಗೆ ಕೋಪ ಬಂತು.

ಮೂಡಲ್ಸೀಮೆಯಿಂದ ನೂರು ಜಂಗಮರ ಕರಸಿ
ಉಕ್ಕಡ ಮೂಗ್ದಾರ ಹಾಕ್ಸೇನು—ಹಗ್ಗ ಕೊಟ್ಟು
ಕಳ್ಳ ಬಸವನ ಕಟ್ಟಿಸ್ಯೇನು.

ಆದರೆ ಬಸವ ಎಲ್ಲೂ ಕಣ್ಣಿಗೆ ಬೀಳಲಿಲ್ಲ. ಅವನ ಮೇಲೆ ಕಳ್ಳನೆಂಬ ಆಪಾದನೆ ಸಹ ಬಂದಿತು.

ಕದ್ದೂ ಕಡಲೆ ತಿಂದು ಇಬ್ಬಾಣ ಹುಲ್ತಿಂದು
ಕದ್ದೂ ಹೋಗವ್ನೆ ಬಸವಯ್ಯ—ಮಲ್ಲನ್ಮೂಲೆ
ಎದ್ದೂ ಬೋರೇಲಿ ಮಲಗವ್ನೆ.

ಬಸ್ವನ್ನ ಕರಸಿ ಬಾಗ್ಲಲ್ಲಿ ನಿಲ್ಸೀರಿ
ಕದ್ದೂ ಹೋಗವ್ನೆ ಬಸವಯ್ಯ—ಮಲ್ಲನ್ಮೂಲೆ
ಎದ್ದೂ ಬೋರೇಲಿ ತಳಗವ್ನೆ.

ಬಸ್ವನ್ನ ಕರಸಿ ಬಾಗ್ಲಲ್ಲಿ ನಿಲಿಸೀರಿ
ಕದ್ದೂ ಹೋಗವ್ನೆ ಬಸವಯ್ಯ—
ಕದ್ದೂ ಹೋಗಿರ್ವ ಬಸವಯ್ಗೆ ನಂಜುಂಡ
ಉಕ್ಕುಡ ಮೂಗ್ದಾರ ಹಾಕ್ಸಾರು.

ಕೊಂಡ್ಕಾರ ಚೆನ್ನಾ ಬಸವಾನಾಡಿದಾ್ಮತ್ಗೆ
ಉತ್ತಾ ಹೊಲವಾನೆ ತುಳಿಸೀರೊ
ಮುಂದಲ ಮೂರ್ಹಲ್ಲ ಮುರಿಸೀರೊ
ಒಣ ರಾಗಿ ಕಡ್ಡಿ ಕಡಿಸೀರೊ
ಕಡೆಯಾ ಬಾಕಲ್ಲಿ ಕಟ್ಟೀರೊ
ಮಡ್ಕೆ ಮುಸಿನೀರ ಕುಡಿಸೀರೊ.

ಬಸವನಿಗೆ ಕೊಟ್ಟ ಶಿಕ್ಷೆ ಕೇಳಿ ಪಾರ್ವತಿಗೆ ಮನಸ್ಸಿನಲ್ಲಿ ಕನಿಕರವುಂಟಾಯಿತು. ತನ್ನಿಂದ ಆತನಿಗೆ ಶಿಕ್ಷೆಯಾದುದರಿಂದ, ತಾನೆ ಅವನ ರಕ್ಷಣೆಗೆ ಬಂದಳು. "ಬಸವನ ಹಿಂಡು ಹೆಚ್ಚಲಿ, ಬಸವನ ಸಮೃದ್ಧಿ ಐಶ್ವರ್ಯದ ಕುರುಹಾಗಲಿ" ಎಂದು ಹರಸಿದಳು.

ದೇವರ ಸಂಸಾರವೂ ರೈತನ ಸಂಸಾರದಂತೆ.

೩. ಬೆವರಿನ ಆಳು

೧

ಬೆವರಿನ ಆಳಾಗಿ, ಯಾವಾಗಲೂ ದುಡಿಯುವ ರೈತನಿಗೆ ನೆಲವೇ ಸರ್ವಸ್ವ, ಭೂಮಿಯೇ ದೇವರು. ಭೂಮಿಗಿಂತ ದೊಡ್ಡ ದೇವರು ಇಲ್ಲ. ರೈತನ ಮೊದಲನೆಯ ಪ್ರಾರ್ಥನೆ ಭೂಮಿತಾಯಿಯನ್ನು ಕುರಿತು.

ಏಳುತಾಲೆ ಎದ್ದು ಯಾರ್ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಳ—ಭೂಮಿ ತಾಯ
ಎದ್ದೊಂದು ಗಳಿಗೆ ನೆನೆವೇನು.

ಆದರೆ ಭೂಮಿಗೆ ಮಳೆಬಿದ್ದ ಹೊರತು ಲೋಕಕ್ಕೆ ಕ್ಷೇಮವಿಲ್ಲ. ಭೂಮಿಗೆ ಮಳೆ ಹೊಯ್ಯುವುದು ರೈತನಿಗೆ ಸುವರ್ಣವೃಷ್ಟಿ, ಅಮೃತಧಾರೆ. ಮಳೆ ಬಾರದಿದ್ದರೆ ರೈತನ ಪಥ ಕಟ್ಟಿತು ; ಲೋಕದ ವ್ಯಾಪಾರ ನಿಂತಿತು. ಆಕಾಶ ನೋಡಿ ನೋಡಿ ಅವನ ಕಣ್ಣು ಪೋಟೆ ಬಿದ್ದು ಹೋಗುತ್ತದೆ. ಆದರೂ ಅವನಿಗೆ ಮಳೆದೇವರ ಮೇಲೆ ಕೋಪ ಬರುವುದಿಲ್ಲ. ತನ್ನಲ್ಲಿ ಮಳೆ ಇಲ್ಲದುದ ರಿಂದ ಮಳೆಯನ್ನು ತರಲು ಮಳೆದೇವರೇ ಬೇರೆ ಕಡೆ ಹೋಗಿರುವನೆಂದು ಅವನು ಭಾವಿಸುತ್ತಾನೆ.

ಮಳೆ ಹೋಯ್ತು ಎಂತ ಮಳೆರಾಯ್ನ ಬೈಬೇಡ
ಒಕ್ಕಾಳ ಹೊನ್ನ ಸೆರಗಲ್ಲಿ—ಕಟ್ಕೊಂಡು
ಸಾಲಕ್ಕೆ ಹೋಗವ್ನೆ ಮಳೆರಾಯ.

ದುಡಿಯುವ ರೈತ ಮಳೆ ಇಲ್ಲದೆ ಗೋಳೋ ಎಂದು ಅತ್ತರೆ ಮಳೆದೇವರು ಅವನ ಮೊರೆಯನ್ನು ಕೇಳುತ್ತಾನೆ.

ಉತ್ತು ಬಂದಣ್ಣ ಮುತ್ತಿನ್ಕಂಭ ಸೇರಿ
ಉತ್ತು ಬಂದೆ ಶಿವನೆ ಮಳೆಯಿಲ್ಲ—ಎಂದರೆ
ಮುತ್ತಿನ ಮಂಜು ಹರಿದಾವು.

ಅಂಬೂ ಕೊಡುವವನೆ ಗೊಂಬೆ ಹಚ್ಚಡದವನೆ
ರಂಭೆ ತೊಡೆ ಮೇಲಿರುವ—ಮಳೆದೇವ
ಅಂಬರದಿಂದ ಕರುಣಿಸು.

"ತಂಗಿಯ ಮನೆಗೆ ಹೋಗಿ, ತಂಗದೆ ಹೋಗುತಿದ್ದಾನೆ. ಆದುದರಿಂದ ತಂಗಿಸಿಕೊಡು". "ಕಾಲುಂಗರದ ತಂಗಿಯನ್ನು ಕರೆಯಲು ಬಂದಿದ್ದಾರೆ. ಕಾರೊಡ್ಡಿ ಹುಯ್ಯೊ ಮಳೆರಾಯ. ತಂಗಿಯ ಇಂದಿನ ಪಯಣ ಉಳಿಯಲಿ" ಎಂದು ಪ್ರಾರ್ಥಿಸಿದ ಕೂಡಲೆ ಮಳೆ ಆರ್ಭಟದಿಂದ ಪ್ರಾರಂಭವಾಗುತ್ತದೆ.

ಕಾರೆಂಬೊ ಕತ್ತಲೆ ಬೋರೆಂಬೊ ಮಳೆರಾಯ
ಬೋರಿಟ್ಟು ಬಂದ ಮಳೆರಾಯ—ರಂಭೆ ನಿನ್ನ
ಕಂಬೀಯ ಸೆರಗ ಮರೆಮಾಡೆ.

ಸೆರಗಿಗೆ ಕಂಬಿ ಇರಬೇಕು. ಮಳೆರಾಯ ರಂಭೆಯ ತೊಡೆಯ ಮೇಲೆ ವಾಲ ಗಿರುವನಂತೆ.

ಗುಡುಗುಡುಗುಟ್ಟೀತು ನಡುಬಾಣ ಮಿಂಚೀತು
ಮುಂಡಾದ್ರಿ ಅಂಬು ದಂಡೀನ—ಕುದುರೆಮೇಲೆ
ಚಂಡಾಡ್ತ ಹುಯ್ಯೊ ಮಳೆದೇವ.

ಮೂಡು ಮುಂದಾಗಿ ಹೊಡೆಯೀತು ಮಳೆರಾಯ
ಗೊಂಬೆ ತೇರಿಗೆ ಹನಿ ಬಿದ್ದೂ—ರಂಭೆಯುಟ್ಟ
ಪಟ್ಟೆಸೀರೆ ಸೆರಗ್ಗೆ ಹರಿದಾವು.

ಹೀಗೆ ಮಳೆಹುಯ್ದು ಗೊಂಬೆ ಹಚ್ಚಡ ಗೊರೆಯಾಗಿ (ಕೆಸರಾಗಿ), ರಂಭೆಯ ಸೆರಗಿಗೆ ನೀರು ಹರಿದು ಸಮೃದ್ಧಿಯಾದ ಜಲವೃಷ್ಟಿ ಉಂಟಾಗುತ್ತದೆ.

ಸ್ವಾತೀಯ ಮಳೆಹುಯ್ದು ಸೀತೆಯ ಕೆರೆ ತುಂಬಿ
ಜೋತಾಡುತ್ತೈತೆ ಕುಣಿಗಲು—ಕುಚ್ಚಿನ ಮಾನು
ಮುಂಗೈಯ ನೋಡಿ ನಗುತ್ತೈತೆ.

ಹೀಗೆ ಮಳೆ ಬಂದಕೂಡಲೆ ರೈತನಿಗೆ ಜಗತ್ತೇ ಆನಂದದಾಯಕವಾಗುತ್ತದೆ. ಆಗ ಹೊಲಕ್ಕೆ ಚೆಲ್ಲುವುದೆಲ್ಲಾ ಮುತ್ತೇ; ಬಿತ್ತುವುದೆಲ್ಲಾ ಏಲಕ್ಕಿಸಾಲುಗಳೇ. ಒಂದು ಏರು (ಎತ್ತಿನ ಜತೆ) ಇರುವುದು ಹತ್ತು

ಏರು ಆಗುತ್ತದೆ. ಇನ್ನು ಬಡತನ ಎಲ್ಲಿ ಬಂತು! "ಹೊನ್ನು ಚೆಲ್ಲೀವೆ ಹೊಲಕೆಲ್ಲ." ಕಾಲಕಾಲಕ್ಕೆ ಮಳೆಯೊಂದು ಆದರೆ ಸಾಕು. ರೈತ ಇನ್ನೇನನ್ನೂ ಕೇಳುವುದಿಲ್ಲ. ಅವನಿಗೆ ಆಗ ಬಡತನವೆಂಬುದೇ ಇಲ್ಲ. "ಮೂಡ್ಲಲ್ಲಿ ರಾಗಿ ಮೆಳೆಯುದ್ದ ಬೆಳೆದರೆ ನಿನಗೆ ಹರಿಸೇವೆ ಮಾಡುವೆ" ಎಂಬುದೇ ಅವನ ಹರಕೆ. ಚೆನ್ನಾಗಿ ಪೈರು ಬೆಳೆದರೆ ರೈತನಿಗೆ ಚಿನ್ನವೂ ಬೇಡ, ರನ್ನವೂ ಬೇಡ.

ಊರಿಗೆ ಮಳೆ ಹೂದೊ ಏರು ಕಟ್ಟೊ ಕಂದಯ್ಯ
ಊರು ಮುಂದಿರುವ ಬಸವಣ್ಗೆ—ಕೈಮುಗಿದು
ಏರು ಕಟ್ಟೊ ಮುದ್ದು ಮುಖದವನೆ.

ಇಂತಹ ಬೇಸಾಯಗಾರನಿಗೆ ಎತ್ತು ಎಂಬುದೇ ದೊಡ್ಡ ದೇವರು. ಎತ್ತಿಗಿಂತ ಬೇರೆ ದೇವರು ಇಲ್ಲ.

ಎತ್ತು ಎನಬಹುದೆ ಎಡಚೋರಿ ಬಸವನ
ಸುತ್ತೇಳು ಲೋಕ ಸಲಹೋನ—ಬಸವನ
ಸತ್ವ ಮರೆಯುವುದೆ ಧರೆಯಲ್ಲಿ.

"ಬಸವನ ಕಟ್ಟಿದವರಿಗೆ ಬೊಗಸೇಲಿ ಹೊನ್ನುಂಟು. ಕೆಸರು ಕೆಂಬತ್ತಿ ಬಯಲುಂಟು." ಇಂಥ ಸಕಾಲದ ಮಳೆ, ಒಳ್ಳೆ ಎತ್ತು, ಉಪೇಕ್ಷೆಯಿಲ್ಲದ ಆರಂಬ ಇವು ಕೂಡಿದರೆ ರೈತನೇ ದೇವೇಂದ್ರ. ಬೆಳೆಯುವ ಪೈರನ್ನು ಅಳೆಯುವ ವೇಳೆಗೇ ಅವನಿಗೆ ಸಾಕಾಗಿಹೋಗುತ್ತದೆ.

ಹನ್ನೆರಡೆತ್ತಿನ ಬಾರಿ ಹೊನ್ನ ಮೇಟಿಕಂಬ
ಬಾಸಿಂಗ್ದ ಕೊಳಗ ಬಲಗೈಯ—ಕಂದಯ್ಯ
ರಾಶಿ ಅಳೆಯೋದೆ ಬೆಳಗಾಯ್ತು.

೨

ರೈತ ಸಾಹಸಿ, ಕಷ್ಟಜೀವಿ. ಯಂತ್ರದಂತೆ ದುಡಿಯುತ್ತಲೇ ಇರುತ್ತಾನೆ. ಇವತ್ತು ೫೦–೧೦೦ ಮೈಲಿಗಳಿಂದ ಕೋಣಗಳನ್ನೆಲ್ಲಾ ಶೇಖರಿಸಿ ರೊಟ್ಟಿಯ ಗಂಟನ್ನು ಕಟ್ಟಿಕೊಂಡು ಕೋಣಗಳ ಬಾಲವನ್ನು ಮುರಿಯುತ್ತಾ ಸುಬ್ರಹ್ಮಣ್ಯದ ಜಾತ್ರೆಗೆ ಹೋಗಿಯೇ ಬಿಡುತ್ತಾನೆ. ಹೋದ ತತ್‌ಕ್ಷಣ ವ್ಯಾಪಾರವಾಗಿಬಿಟ್ಟರೆ ರೊಟ್ಟಿಯನ್ನು ವಾಪಸು ಕಟ್ಟಿಕೊಂಡೇ

ಊರು ಸೇರಿಬಿಡುತ್ತಾನೆ. ರಾಮನಾಥಪುರದ ಜಾತ್ರೆ, ಹಾಸನದ ಜಾತ್ರೆ, ಚುಂಚನಕಟ್ಟೆ ಜಾತ್ರೆ, ಹೇಮಗಿರಿ, ಗೊರೂರು, ಮುಡುಕತೊರೆ ಹೀಗೆ ಅವಿಚ್ಛಿನ್ನವಾಗಿ ತಿರುಗುತ್ತಲೇ ಇರುತ್ತಾನೆ. ಅವನಿಗೆ ನೂರಾರು ಮೈಲಿ ತಿರುಗುವುದು ಲೆಕ್ಕವೇ ಇಲ್ಲ. ಯಾವ ಶ್ರಮವನ್ನೂ ಅವನು ಲಕ್ಷ್ಯಿಸುವುದೇ ಇಲ್ಲ. ಅವನು ಎತ್ತು ಕೋಣಗಳ ಬಾಲ ಮುರಿಯುವುದನ್ನು ನಿಲ್ಲಿಸಿದರೆ, ಒಂದು ದಿನ ಅವನು ಸೋಮಾರಿಯಾದರೆ ಜಗತ್ತಿನ ಚಲನೆ ನಿಲ್ಲುತ್ತದೆ. ನಾವು ಯಾವುದನ್ನು ಸುಖ ಎನ್ನುತ್ತೇವೆಯೋ ಅದು ಅವನಿಗೆ ಇಲ್ಲವೇ ಇಲ್ಲ. ಆದರೆ ತಾನು ಮಾಡುವ ಕೆಲಸವನ್ನು ಚೆನ್ನಾಗಿ ಮಾಡುವುದೇ ಅವನಿಗೆ ಸುಖ. ಅವನು ಏನುಮಾಡಲಿ ಅದನ್ನೇ ಒಂದು ಹೊಸ ಶಿಸ್ತಿನಿಂದ, ಒಂದು ಅಚ್ಚುಕಟ್ಟಾಗಿ, ಒಂದು ಉತ್ಸಾಹದಿಂದ ಮಾಡುತ್ತಾನೆ. ಗೊಬ್ಬರದ ಗಾಡಿಯನ್ನು ಹೊಡೆದರೂ ಅರುಣನು ಸೂರ್ಯನ ರಥವನ್ನು ನಡೆಸುವ ಜರ್ಬಿನಿಂದಲೇ ಹೊಡೆಯುತ್ತಾನೆ. "ಹೂಡುವುದು ಹೊಸ ಬಂಡಿ; ಹೊಡೆಯುವವನು ಹಸುಮಗ, ಲಾಲಿಸಿಕೇಳು ಬಸವಣ್ಣ. ನಿನ್ನ ಬಂಡಿ ಭೂಮಿ ತಲ್ಲಣಿಸಿ ಹರಿದಾವು." ಬಂಡಿ ಹೊಡೆಯುವುದು ಬಂಡಾಟವಾದರೂ ಜೋರಾಡಿ ಬಂಡಿ ಹೊಡೆಯುತ್ತಾನೆ. ಅದರಲ್ಲೂ ಒಂದು ಚೆಂದವನ್ನು ಕಾಣುತ್ತಾನೆ.

> ಕಬ್ಬು ಕಾರುಳ್ಳವನೆ ಹುಬ್ಬು ನೇರುಳ್ಳವನೆ
> ಗೊಬ್ಬರದ ಗಾಡಿ ಹೊಡೆಯೋನೆ—ಅಣ್ಣಯ್ಯನ
> ಹುಬ್ಬಿಗಿನ್ನೊಂದು ಸರಿಯುಂಟೆ.

ಗೊಬ್ಬರದ ಗಾಡಿ ಹೊಡೆದರೆ ತಾನೆ ಏನು? ಕಬ್ಬುಕಾರುಳ್ಳವನು. ಮೇಲಾಗಿ ನೇರಾದ ಹುಬ್ಬುಳ್ಳವನು. ಪಚ್ಚೆ ತೆನೆಯಂತಹ ನಾಗಸರ ತಕ್ಕೊಂಡು ಎತ್ತಿನ ಜ್ಞಾನ ಮರೆಯುವವನು; ಸುಂದರ. ಅವನ ಎತ್ತೂ ಹಾಗೆಯೇ. "ಬಹದ್ದೂರಿ" ಎತ್ತು. "ಸಾವಿರ ಎತ್ತಿನ ಮುಂದೆ ಹೋಗೋದು ನಮ್ಮೆತ್ತು. ಪಾದಕ್ಕೆ ಜಂಗು ಮೊಕರಂಬೆ." ಅವು ವೇಗದಲ್ಲೂ ಹೆಸರಾದುವು. ಮಿಂಚುತ ಬೆಟ್ಟ ಇಳಿಯುತ್ತವೆ. 'ಹೂಡುವುದು ಹೊಸ ಬಂಡಿ. ಹೊಡೆಯುವವನು ಹಸುಮಗ.' ಗಾಡಿ ಹೊಡೆಯುವವನೂ ರಸಿಕ.

ಅವನು ಕಣ್ಣಿಗೆ ಬಿದ್ದ ಒಳ್ಳೆಯ ಹುಡುಗಿಯನ್ನು ಮಾತನಾಡಿಸಬೇಕಾದರೆ ಒಂದು ನೆಪಮಾಡಿಕೊಳ್ಳುತ್ತಾನೆ.

ಹೇರು ಕಟ್ಟಾಗ ಬಾರ್ಕೋಲ ನಾ ಮರೆತೆ
ಕಂಡು ಕೊಡು ಹೆಣ್ಣೆ ಕಡುಗಾತಿ—ನಮ್ಮೆತ್ತು
ಮುಂದೆ ಮೂರ್ಹೆಜ್ಜೆ ತೂಯೊಲ್ಲೊ.

ಹೋರಿ ಮೇಲೆ ಕೂತು ಕೋರಿಯ ನಾ ಕಂಡೆ
ಊರುವಸಿಯಂತ ವೊಕದವಳ—ನಾ ಕಂಡು
ಹೋರಿ ಹೂಡೋಕೆ ಮನಸಿಲ್ಲ.

ಊರ್ವಶಿ ಎಂಬ ಮಾತು ಅವನ ಕಿವಿಗೆ ಎಲ್ಲೋ ಬಿದ್ದಿರಬೇಕು.

೩

ಪೈರು ಚೆನ್ನಾಗಿ ಬೆಳೆದುಬಿಟ್ಟರೆ ರೈತನ ಆನಂದಕ್ಕೆ ಪಾರವೇ ಇಲ್ಲ. ಅವನು ಬಯಸುವುದು ಕಷ್ಟಕ್ಕೆ ತಕ್ಕ ಪ್ರತಿಫಲ. ಅವನ ಜೀವನದಲ್ಲಿ ಒಂದು ವಿಧವಾದ ಅನಾಸಕ್ತಿ ಇದೆ. ಫಲದ ಅಪೇಕ್ಷೆ ಇಲ್ಲದೆ ದುಡಿಯುತ್ತಾನೆ. ಫಲ ಬಂದಾಗ ಅದು ಭಗವಂತನದೆಂದು ಅನುಭವಿಸುತ್ತಾನೆ. ಅವನ ಆಸೆಗೂ ಅವನ ಹಸಿವೆಗೂ ಒಂದು ಮಿತಿಯುಂಟು; ಅವನ ಬೇಸರಿಕೆಗೂ ಬಳಲಿಕೆಗೂ ಒಂದು ಮಿತಿಯುಂಟು. ಎದುರಿಗೆ ಧಾನ್ಯದ ರಾಸಿ ಒಂದಿಷ್ಟು ಇದ್ದರಾಯಿತು; ಇನ್ನಷ್ಟು ಇಲ್ಲವಲ್ಲ ಎಂದು ಕೊರಗುವುದು ಅವನ ಸ್ವಭಾವವಲ್ಲ. ಆರು ತಿಂಗಳು ಅಂಬಲಿ, ಮೂರು ತಿಂಗಳು ಸೊಪ್ಪುಸೆದೆ. ಇನ್ನು ಮೂರು ತಿಂಗಳು 'ಹಂಗೂ ಹಿಂಗೂ' ಜೀವನ ಎಂದು ರೈತ ಹೇಳುತ್ತಾನೆ. ಈ 'ಹಂಗೂ ಹಿಂಗೂ' ಎನ್ನುವುದು ಉಪವಾಸವೇ. ಹೀಗೆ ಸುಗ್ಗಿಗೆ ಮುಂಚೆ ಮೂರು ತಿಂಗಳು ಉಪವಾಸವನ್ನೇ ಮಾಡಿದ್ದರೂ ಅದರಿಂದ ರೈತನ ಗಂಟಲು ಕಟ್ಟುವುದಿಲ್ಲ. ಮನುಷ್ಯನ ಒಳ್ಳೆಯ ಸ್ವಭಾವದಲ್ಲಿ ಅವನ ನಂಬಿಕೆ ಕೆಡುವುದಿಲ್ಲ. ಬಹಳ ಒರಟಾದ ತಾಳ ಝಲ್ಲರಿಗಳನ್ನು ಲಯಕ್ಕೆ ಸರಿಯಾಗಿ ಸದ್ದುಮಾಡುತ್ತಾ ಹಾಡುತ್ತಾ ಕುಣಿಯುತ್ತಿರುವಾಗ ಅವನಿಗೆ ಜಗತ್ತೇ ಸುಖಸಂತೋಷದಿಂದ ಇರುವಂತೆ ಕಾಣುತ್ತದೆ. ಅವನ

ಗಂಟಲಿನಿಂದ ಹೊರಟ ಆನಂದದ ಧ್ವನಿ ಜಗತ್ತಿನ ಮೂಲೆ ಮೂಲೆಗೂ ವ್ಯಾಪಿಸಿ ಬೇಸರಿಕೆಯನ್ನೂ ದುಃಖವನ್ನೂ ಹೊಡೆದು ಅಟ್ಟುತ್ತದೆ.

ತಂದನೊ ತಾನಾನಿ
ತಾನು ತಾನು ತಂದನೊ
ಸ್ವಾಮಿಗೇ ಶರಣು
ಕಟಿಕಟಿ ಕಲ್ಲೂರು
ಅರಗಿನಾ ಆಲೂರು
ಬೆಡಗಿನಾ ಬೇಲೂರು
ಹಿಂದೆ ತಾವರೆಗೇರೆ
ಮುಂದೆ ತಾವರೆಗೇರೆ
ಕಲ್ಲೇಶ ಲಿಂಗಾಗೆ
ಮಲ್ಲೇಶ ಲಿಂಗಾಗೆ
ಕಡ್ಗೂರು ರಾಮಪ್ಗೆ
ಒಡ್ದ ತೆಂಗಿನಕಾಯಿ
ಓಟೆಯ ತೆಗೆದಾರು
ಅಂದ ಚೆಂದಕೆ ಮೂರು
ಪಟ್ಟೆಯ ತೆಗೆದಾರು
ಪಟ್ಟಣದ ಮಾಸ್ವಾಮಿ
ಪಾದಾಕೆ ಬಿದ್ದಾರು
ಅರಿತೋರಿಗೆ ಮತ್ತೆ
ಮರೆತೋರಿಗೆ ದೇವ
ಮತಿಕೊಡೊ ಮಾದೇವ
ಸತಿಕೊಡೊ ಸಾದೇವ
ವಿದ್ಯೇವ ಕಲಿಸಯ್ಯ
ಹಿರಿಯರ ಕೂಡ.

ಹೇಳಿದಾ ನಾಗಣ್ಣ ಕೇಳಿದಾ ನಿಂಗಣ್ಣ
ಕೋಟೇಲಿಟ್ಟವರೆಲ್ಲೊ ಬೇಟೆಯಾ ತಕ್ಕೊಂಡು
ತಂದಾರು ತಾನಾನಿ ತಲೆಗಾಳು ಬಿದ್ದಾವು
ಮುಂದಕೆ ಹೋಗುವಾಗ ನಗಾರಿ ನುಡಿದಾವು

ಬೇಗ ತಿರಗೀ ಬೇಗ ಬೇಗ ತಿರಗೀ ಬೇಗ
ಬೇಗ ಚುಂಚನಗಲ್ಲ ಶ್ರೀ ಪಟ್ಟಕಟ್ಟ್ಯಾರು
ಕಟ್ಟುಬಾರೊ ಶರಣು ಕಟ್ಟುಬಾರೊ.

ಜಗ ಜಗವನೊಡೆಯಲೊ ಜಗದ ಪಟ್ಟೊಡೆಯಲೊ
ಅರಮನೆ ಒಳಗೊಬ್ಬ ಧೊರೆಮಗಾ ಕುಂತವ್ನೆ
ಪನ್ನೀರ ಕೊಳದಲ್ಲಿ ಸ್ನಾನವಾ ಮಾಡವ್ನೆ
ನಲವತ್ತು ಹೊನ್ನಿನಾ ನಾಮವಾ ಇಟ್ಟವ್ನೆ
ಅಚ್ಚಗಂಬೀಯ ಹಚ್ಚಡವ ಹೊದ್ದವ್ನೆ
ಪಚ್ಚಗಂಬೀಯ ಪಾಗಾನೆ ಸುತ್ತವ್ನೆ
ಹೊನ್ನು ಭಂಗಾರವನ್ನೊಳಗೆ ತಾನಿಟ್ಟವ್ನೆ
ಮುದ್ರೆಯುಂಗುರವನ್ನು ಕೈಯಲ್ಲಿ ಇಟ್ಟವ್ನೆ
ಪಟ್ಟಣದ ಮಾಸ್ವಾಮಿ ಪಾದಕೆ ಬಿದ್ದವ್ನೆ.

ಮೂಡಲ ತಂಗಾಳಿ ಬೀಸಿತೊಂದ್ಕುದ್ರೆಬಾಲ
ಮಿಸ್ಕಿತೊಂದ್ಕುದ್ರೆಬಾಲ
ಓಹೋಹೊ ಪೇಟ್ಡೋರು ಚೀಟಿ ಚಲ್ಲಣದೋರು
ಪೇಟೆ ರುಮಾಲ್ಡೊರು ಕಾದವ್ರೆ ಮಹವೀರ
ಎಳೆಯ ಕೋಗಿಲೆಬಣ್ಣ ಕವಚವಾ ತೊಟ್ಟು ನೀ
ಎದುರಾಗಿ ದಂಡೀಗೆ ಎದ್ದುಬಾರೊ ಸ್ವಾಮಿ—ಎದ್ದುಬಾರೊ
ದಂಡೀಗೆ ಎದುರಾಗಿ ಎದ್ದು ಬಂದ್ಯಲ್ಲೊ ಸ್ವಾಮಿ
ಸುದ್ದ ಮಲ್ಲಿಗೆ ರಾಜ ನಾ ಹ್ಯಾಂಗೆ ಮರೆಯಲೊ ನಿನ್ನ
ಪಂತದಲಿ ಗೆದ್ದವನೆ ಪಗಡೆರಣಶೂರನೆ
ನಾ ಹ್ಯಾಂಗೆ ಮರೆಯಲೊ ನಿನ್ನ—ನಾ ಹ್ಯಾಂಗೆ ಮರೆಯಲೊ ನಿನ್ನ.

ಸುಗ್ಗಿ ಬಂದಿದೆ. ಎಲ್ಲೈ, ಸ್ವಾಮಿ ಎದ್ದು ಬಾ. ಯಾಕೆ ಕೇರಿಕೇರಿ, ಹೊಟ್ಟೆಗಿಲ್ಲದೆ ತಿರುಗುತ್ತಿದ್ದೀಯೆ? ಇಲ್ಲಿ ಭಾರಿ ಕಿನ್ನರಿ ನುಡಿಯುತ್ತಿದೆ; ಮಲ್ಲಿಗೆ ಹಾರಗಳಿವೆ; ಗಂಧ, ವೀಳೆಯ ತಂದುಕೊಡುತ್ತೇವೆ. "ಆಗದೋನೆ ಭೋಗದೋನೆ ನಾಗರಾ ನಡುಕಟ್ಟಿನೋನೆ ಕೋಗಿಲ್ಹಾಂಗ ಕೂಗತೀಯೆಲ್ಲೊ." "ಗಂಧನಾದ್ರು ಧರಿಸಿಕೊಳ್ಳಿ, ವೀಳ್ಯಾನಾದ್ರು ಮೆದ್ದುಕೊಳ್ಳಿ" ಎಂಬುದಾಗಿ ರೈತ ಸುಗ್ಗಿಯಲ್ಲಿ ಸ್ವಾಮಿಯನ್ನು, ದೊರೆಯನ್ನು ಕರೆಯುತ್ತಾನೆ.

ಎಳೆಯ ಕೋಗಿಲೆ ಬಣ್ಣದ ಕವಚವನ್ನು ತೊಟ್ಟು, ಪನ್ನೀರ ಕೊಳದಲ್ಲಿ ಸ್ನಾನಮಾಡಿ ಹೊನ್ನು ಭಂಗಾರ ಮುದ್ರೆಯುಂಗರ ಧರಿಸಿ ಬರುವ ಸ್ವಾಮಿ ರೈತನನ್ನೂ ಅವನ ಔದಾರ್ಯವನ್ನೂ ಪರೀಕ್ಷಿಸಲು ಸುಗ್ಗಿಯಲ್ಲಿಯೇ ಬರಬೇಕು. ಬೇರೆ ಕಾಲದಲ್ಲಿ ಬಂದರೆ ಅವನೂ ರೈತನೊಂದಿಗೆ ಉಪವಾಸ ಮಾಡಬೇಕಾಗುವುದು.

೪. ಲೋಕದ ಬಂಧು

೧

ರೈತ ಕಣದಲ್ಲಿ ರಾಶಿಯ ಮುಂದೆ ಕುಳಿತಿರುವಾಗಲೇ ಹಿಂದೆ ಅವನನ್ನು ಮರೆತಿದ್ದವರಿಗೆಲ್ಲಾ ಅವನ ಜ್ಞಾಪಕ ಬರುತ್ತದೆ. ಶ್ಯಾನುಭಾಗರು, ಪಟೇಲರು, ಜೋಯಿಸರು, "ಮೇಟರು", ಪೂಜಾರಿ, ಶೇಕದಾರ, ಹಾವಾಡಿಗ, ದೊಂಬ, ಅಗಸ, ಹಜಾಮ, ಮಂದೆಕುರಿಯುವ, ಹಂದಿಚೀಕ, ಉಳ್ಳ ಹಾಕುವವನು, ಚಿತ್ರಗೊಂಬೆ, ಪುತ್ಲಿಬೊಂಬೆ ಇವರೆಲ್ಲಾ ತಮ್ಮ ತಮ್ಮ ಮಿರಾಸಗೆ ಬರುವರು. ಮಂದೆಕುರಿಯುವನು ವರುಷಕ್ಕೆ ಎರಡು ಸಲ ೨೦೦-೩೦೦ ಕುರಿಗಳನ್ನು ಹೊಡೆದುಕೊಂಡು ಬಂದು ಎರಡು ರಾತ್ರಿ ಅಥವಾ ಮೂರು ರಾತ್ರಿ ರೈತನ ಗದ್ದೆ ಮತ್ತು ಹೊಲಗಳಲ್ಲಿ ಅವನ್ನು ತಡೆಯುತ್ತಾನೆ. ಅವುಗಳ ಗಂಜಲ ಮತ್ತು ಹಿಕ್ಕೆ ಪೈರಿಗೆ ಬಹಳ ಒಳ್ಳೆಯ ಗೊಬ್ಬರ. ಮಂದೆಕುರಿಯುವನು ಬಹು ಸುಖಜೀವಿ. ಊರಿಂದ ಊರಿಗೆ ಹೀಗೆ ಅವನು ತಿರುಗುತ್ತಿರುತ್ತಾನೆ. "ಮಂದೆಕುರಿಯುವರಿಗೆ ಮೂರು ಊಟ" ಎಂದು ಪ್ರತೀತಿ; ಅಂದರೆ ಒಂದು ಊಟ ಜಾಸ್ತಿ. ಅವನು ಯಾರ ಜಮೀನಿನಲ್ಲಿ ಕುರಿ ಬಿಟ್ಟಿರುತ್ತಾನೆಯೋ ಆ ರೈತನೂ ಅವನ ಜತೆಗೆ ಎರಡು ಮೂರು ದಿನ ಊಟಕ್ಕೆ ಸೇರಿಬಿಡುತ್ತಾನೆ. ಸುಗ್ಗಿಯ ವೇಳೆಗೆ ಅವನು ಮತ್ತೆ ಹಿಂದಕ್ಕೆ ಬಂದು ತನ್ನ ಮಿರಾಸೆಯಾದ ರಾಗಿ ಭತ್ತವನ್ನು ವಸೂಲು ಮಾಡಿಕೊಂಡು ಹೋಗುತ್ತಾನೆ. ಹಂದಿಚೀಕನೂ ಹಾಗೆಯೇ. ಅವನೂ ಹಂದಿಗಳ ಹಿಂಡನ್ನು ಜಮೀನಿನಲ್ಲಿ ಎರಡು ಮೂರು ರಾತ್ರಿ ತಡೆದು ಗೊಬ್ಬರ ಒದಗಿಸುತ್ತಾನೆ. ಈ ಹಂದಿಗಳಿಗೆ ರುಚಿಯಾದ ಆಹಾರ ರಾಕ್ಷಸ (ಕತ್ತಾಳಿ)ನ ಗೆಡ್ಡೆ. ರೈತರು ಆ ಕಾಲದಲ್ಲಿ ಪ್ರಾಂತದ ಗೆಡ್ಡೆಗಳನ್ನೆಲ್ಲಾ ಅಗೆದು ಎಸೆದುಬಿಡುತ್ತಾರೆ. ಹಂದಿಚೀಕನಿಗೆ ಚೆನ್ನಾಗಿ ಅಡಿಗೆ ಮಾಡುವುದಕ್ಕೆ ಬರುವುದಿಲ್ಲ. ಆದುದರಿಂದ ರೈತನು ಅವನ ಜತೆಗೆ ಊಟಕ್ಕೆ ಸೇರುವುದಿಲ್ಲ. ಅವನ ಜಾತಿಯೂ ಕೀಳು ಎಂದು ರೈತರು ಹೇಳುತ್ತಾರೆ. ಉಳ್ಳ ಹಾಕುವವರು ಎಂದರೆ

ಇಲಿಗಳನ್ನು ಹಿಡಿಯುವವರು ಎಂದು ಅರ್ಥ. ಈಗ ಅವರು ಇಲಿಗಳನ್ನು ಹಿಡಿಯುತ್ತಿಲ್ಲ; ಆದರೆ ಅವರ ವಂಶದವರು ಹಿಂದೆ ಇಲಿ ಹಿಡಿಯುತ್ತಿದ್ದರು. ಈ ವಂಶದ ಮೂಲಪುರುಷನ ಹೆಸರು ಉಳ್ಳ ಎಂದು. ಉಳ್ಳನು ಒಂದು ಬಗೆಯ ತಿಂಡಿಯನ್ನು ಮಾಡಿ ಅದನ್ನು ಸೂರಿನ ಮೇಲೆ ಎಸೆದು ಸುತ್ತಾ ಬಲೆಹಾಕಿ ಕಾಯುತ್ತಿದ್ದನು. ತಿಂಡಿಯ ಆಸೆಗೆ ಇಲಿಗಳೆಲ್ಲಾ ಬಂದು ಬಲೆಗೆ ಬೀಳುತ್ತಿದ್ದವು. ಅವನಿಂದ ಈಚೆಗೆ ಆ ಬಲೆ ಮತ್ತು ಹಿಡಿಯುವ ಕ್ರಮಕ್ಕೆ ಉಳ್ಳನೆಂದೇ ಹೆಸರಾಯಿತು. ಈಗ ನಮ್ಮ ಕಡೆ ಪ್ರತಿಯೊಂದು ಊರಿನಲ್ಲಿಯೂ ಇವರ ವಂಶದವರು ಸೇರಿಕೊಂಡು, ತಾವು ಇಲಿಯನ್ನು ಹಿಡಿಯದಿದ್ದರೂ ಸುಗ್ಗಿಯ ಕಾಲದಲ್ಲಿ ರೈತರಿಂದ ದವಸವನ್ನು ವಸೂಲು ಮಾಡುತ್ತಾರೆ.

ಸುಗ್ಗಿಯ ಕಾಲದಲ್ಲಿ ನಮ್ಮ ಸೀಮೆಗೆ ಬರುವ ಬುರುಡೆ ಬೆಸ್ತರು ಮಹಾರಾಷ್ಟ್ರದ ಕಡೆಯವರು. ಅವರು ಆಡುವ ಭಾಷೆ ಮರಾಠಿ. ಆದರೆ ಅವರ ಸಂಸ್ಕೃತಿ ಕನ್ನಡ. ಅವರು ಹೆಂಡತಿ ಮಕ್ಕಳು ಸಂಸಾರ ಎಮ್ಮೆ ಗುಡಾರ ಸಮೇತ ಊರಿನಿಂದ ಊರಿಗೆ ತಿರುಗುತ್ತಾ ಇರುತ್ತಾರೆ. ಸಾಧಾರಣವಾಗಿ ನದಿಯ ತೀರಗಳಲ್ಲಿಯೇ ಇವರು ನಿಲ್ಲುವುದು ಹೆಚ್ಚು. ಒಂದೊಂದು ಭಾಗದಲ್ಲಿ ೧೦-೧೫ ದಿನ ಸಂಸಾರ ಮಾಡಿಕೊಂಡು ಸುತ್ತಾ ೮-೧೦ ಮೈಲಿ ಹೋಗಿ ಮೀನು ಹಿಡಿದುಕೊಂಡು ಬಂದು ಅದನ್ನು ನಮ್ಮ ಜನರಿಗೇ ಮಾರುತ್ತಾರೆ. ಬುರುಡೆ ಬೆಸ್ತರು ಸಾಧಾರಣವಾಗಿ ಐದು ಸಂಸಾರಗಳಿಗೆ ಕಡಿಮೆ ಒಂದೊಂದು ಗುಂಪು ಹೊರಡುವುದೇ ಇಲ್ಲ. ಇವರ ಒಂದೊಂದು ಗುಂಪಿಗೂ ಒಬ್ಬೊಬ್ಬ ಯಜಮಾನ ಇರುತ್ತಾನೆ. ಈ ಯಜಮಾನನಲ್ಲಿ ಒಟ್ಟು ಗುಂಪಿನ ಮೀನು ಮಾರಿದ ಸಾವಿರಾರು ರೂಪಾಯಿಗಳು ಶೇಖರವಾಗಿರುತ್ತವೆ. ಗಂಡಸರು ಮೀನು ಹಿಡಿಯುವುದಕ್ಕೆ ಹೋದಾಗ ಹೆಂಗಸರು ಊರುಗಳೊಳಗೂ ಕಣಗಳಿಗೂ ಹೋಗಿ ಸಜ್ಜೆ ಕುಕ್ಕುತ್ತಾರೆ. ಸಜ್ಜೆ ಕುಕ್ಕುವಾಗ ಅವರು ಹೇಳುವುದು ಕನ್ನಡ ತ್ರಿಪದಿಗಳು. ಅವುಗಳನ್ನು ಅವರು ಒಂದು ರಾಗದಲ್ಲಿ ಹೇಳುತ್ತಾರೆ. ಇವರ ಹೆಂಗಸರು ಪುಷ್ಟರಾಗಿ ಲಕ್ಷಣವಾಗಿರುತ್ತಾರೆ. ಕಾಡುಗಿಡಗಳ ಹೂವುಗಳನ್ನೆಲ್ಲಾ ಕಷ್ಟಪಟ್ಟು ಶೇಖರಿಸಿ ಅಲಂಕಾರ ಮಾಡಿಕೊಳ್ಳುತ್ತಾರೆ.

ಇವರೆಲ್ಲಾ ಧಾರವಾಡದ "ಇಲಕಲ್ ಪ್ಯಾಟರ್ನ್" ಎಂಬ ಕೈಮಗ್ಗದ ಸೀರೆಯನ್ನೇ ಉಡುತ್ತಾರೆ. ಎಲ್ಲಾ ಸಾಮಾನುಗಳನ್ನೂ, ಒನಕೆ ಬೀಸುವ ಕಲ್ಲು ಮೊದಲುಗೊಂಡು, ತೆಗೆದುಕೊಂಡು ಹೋಗಿ ಬೈಲಿನಲ್ಲೇ ಸಂಸಾರ, ಗುಡಿಸಲುಗಳನ್ನು ಹೂಡಿ ಮಕ್ಕಳನ್ನು ಹೆತ್ತುಕೊಂಡು ಸುಖವಾಗಿರುತ್ತಾರೆ.

ಮೈಸೂರು ಸೀಮೆಗೆ ಮಾರಿಯಮ್ಮನನ್ನು ಕುಕ್ಕೆಗಳಲ್ಲಿ ಹೊತ್ತುಕೊಂಡು ಬಂದು ಭಿಕ್ಷೆ ಬೇಡುವವರು ಉತ್ತರ ಕರ್ನಾಟಕದವರು. ಅವರ ಸಾಹಸವನ್ನು ನೋಡಿ ನಮಗೆ ಆಶ್ಚರ್ಯವಾಗುತ್ತದೆ. ಗದಗು, ಬಾಗಲಕೋಟೆ, ಕಾರವಾರ, ಇಲ್ಲಿಂದ ಕನ್ನಡಿಗರು ಕುಕ್ಕೆಯಲ್ಲಿ ಮಾರಮ್ಮನನ್ನು ಹೊತ್ತುಕೊಂಡು ಮೈಸೂರು ಸೀಮೆಗೆ ಬರುತ್ತಾರೆ. ದಾವಣಗೆರೆಯಿಂದಲೇ ಇವರ ಪ್ರಾಬಲ್ಯ ಪ್ರಾರಂಭವಾಗುತ್ತದೆ. ಇವರು ಸಂಸಾರದೊಡನೆ ಬಂದು ಆರು ತಿಂಗಳು, ಎಂಟು ತಿಂಗಳು ಊರಿಂದ ಊರಿಗೆ ತಿರುಗುತ್ತಾ ಜೀವನ ಮಾಡುತ್ತಾರೆ. ಇವರು ಬುರುಡೆ ಬೆಸ್ತರಂತೆ ಜೊಂಡಿನ ಚಾಪೆಗಳಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ಊರಹೊರಗೆ ವಾಸಿಸುವುದಿಲ್ಲ. ಹಳ್ಳಿಗಳ ಮನೆಗಳ ಜಗಲಿಯಮೇಲೆ ಕಾಲಹಾಕಿಬಿಡುತ್ತಾರೆ. ಇವರ ಸಾಮಾನುಗಳು ಜಾಸ್ತಿ ಇರುವುದಿಲ್ಲ. ಎಲ್ಲವನ್ನು ಆಚೆ ಈಚೆ ಒಂದು ಅಡ್ಡೆಯಲ್ಲಿ ಕಟ್ಟಿಕೊಂಡು ಊರಿಂದ ಊರಿಗೆ ಹೊತ್ತುಕೊಂಡೇ ಹೋಗುತ್ತಾರೆ. ಇವರು ಸಾಧಾರಣವಾಗಿ ದೊಡ್ಡಮಾರ ಮತ್ತು ಕುಕ್ಕೆ ಅಮ್ಮ ಎರಡನ್ನೂ ತರುತ್ತಾರೆ. ಊರಿನ ನಡುಬೀದಿಯಲ್ಲಿ ದೊಡ್ಡಮಾರ ಪೆಟ್ಟಿಗೆಯನ್ನು ಇಟ್ಟು ದೇವರ ಆಭರಣಗಳನ್ನೆಲ್ಲಾ ಒಂದೊಂದಾಗಿ ತೆಗೆದು, ಚಾವಟಿಯಿಂದ ಮೈಗೆ ಬಾರಿಸಿಕೊಳ್ಳುವ ದೊಡ್ಡಮಾರಮ್ಮನ ಪೂಜಾರಿ ಎಲ್ಲರ ಕಣ್ಣಿಗೂ ಬಿದ್ದಿರುವನು. ಸಾಧಾರಣವಾಗಿ ಅವನ ಹೆಂಡತಿಯೋ ಮಗಳೋ ಅವನ ಜತೆಯಲ್ಲಿ ತಮಟೆ ಹೊಡೆಯುತ್ತಿರುತ್ತಾಳೆ. ಮಧ್ಯಾಹ್ನದ ಮೇಲೆ ಅವನ ಹೆಂಡತಿಯೊಬ್ಬಳೇ ಸಣ್ಣಮಾರಿಯಮ್ಮನನ್ನು ಕುಕ್ಕೆಯಲ್ಲಿ ಇಟ್ಟುಕೊಂಡು ಊರೊಳಕ್ಕೆ ಹೊರಡುತ್ತಾಳೆ. ಸಾಧಾರಣವಾಗಿ ಹೆಂಗಸರಿಂದ ಅರಿಸಿನ ಕುಂಕುಮ ವಸೂಲು ಮಾಡುವುದೇ ಅವಳ ಕೆಲಸ.

ಇವರು ಮುಖ್ಯವಾಗಿ ತೋರಿಸುವ ಆಸೆ, ಮಕ್ಕಳು ಚೆನ್ನಾಗಿ ಬದುಕು ವುದೆಂಬುದು.

ನೀ ಮೊಗುವಾ ಸಾಕೊದು ದಿಟವೇನೆ
ಚೋರ ಕೊರಮುರು ಬರುತಾರೆ
ಕಳ್ಳ ಕೊರಮುರು ಬರುತಾರೆ
ಏರಿಯ ಕೆಳಗೆ ಹೋದಳು ಕೊರವಂಜಿ
ಹಾರಿಸಿ ಹುಲ್ಲ ಹೆಣೆದಾಳು ಕೊರವಂಜಿ
ಆರು ಕಾಲಿನ ನೆಲುವ ಹೆಣೆದಾಳು ಕೊರವಂಜಿ
ಗೌಡುಗೊಳ ಬೀದಿಗೆ ಹೋದಾಳು ಕೊರವಂಜಿ
ನೆಲ್ಲೊ ನೆಲ್ಲೊ ಎಂದು ಸಾರ್‍ಯಾಳು ಕೊರವಂಜಿ
ಹಣವೀಗೊಂದು ನೆಲ್ವ ಮಾರ್‍ಯಾಳು ಕೊರವಂಜಿ
ಹಾರುವ್ರ ಕೇರಿಗೆ ಹೋದಾಳು ಕೊರವಂಜಿ
ಗಿಲ್ಕೆ ಗಿಲ್ಕೆ ಎಂದು ಸಾರ್‍ಯಾಳು ಕೊರವಂಜಿ
ಬೀದಿ ಬೀದಿ ಮೇಲೆ ಹೋದಾಳು ಕೊರವಂಜಿ
ಕಣಿಯು ಕಣಿಯು ಎಂದು ಸಾರ್‍ಯಾಳು ಕೊರವಂಜಿ
"ಕೊರವಂಜಿ ಬಾರೆ ನಮ್ಮನೆಗೆ."

ಕೈತಾರೆ ಕೈತಾರೆ ಕೈತಾರೆ ದುಂಡಿ
ಕೈನೋಡಿ ಕಣಿಯಾನು ಹೇಳ್ತೀನಿ ಮಗಳೆ
ನೀ ಬಡಗಾಲ ಸೀಮೆಗೆ ಹೋಗಿದ್ದೆ ಮಗಳೆ
ಬಾಳೆಯ ಮರದಡಿ ಮಲಗಿದ್ದೆ ಮಗಳೆ
ಬೇಡರ ಗಾಳಿ ನಿಂಗ್ಹಿಡಿದಾದೆ ಮಗಳೆ
ಭಾರಿ ಪೂಜೆಯ ಹಾಕಲುಬೇಕು.
ನೀ ಮೂಡಲ ಸೀಮೆಗೆ ಹೋಗಿದ್ದೆ ಮಗಳೆ
ಮುತ್ತುಗದ ಮರದಡಿ ಮಲಗಿದ್ದೆ ಮಗಳೆ
ತುರುಕಾರ ಗಾಳಿ ಹಿಡಿದದೆ ನಿನಗೆ
ಭಾರಿ ಯಂತ್ರವ ಕಟ್ಸಿಸಲುಬೇಕು.

ಮಂಗಳ್ವಾರದ್ದಿವ್ಸ ಮನೆ ಸಾರಿಸಬೇಕು.
ರಂಗೋಲೆ ಪುಡಿಯಾನು ಬರೆಯಲುಬೇಕು

ಹಣ್ಣುಕಾಯಿ ಎರಡು ಮೊದಲಾಗಬೇಕು
ಕಳಿ ಅಡಕೆ ಚಿಗುರೆಲೆ ಮೊದಲಾಗಬೇಕು
ಕಣ್ಣಿಗೆ ಬೇಕಾದ ಹೂವಾಗಬೇಕು
ಕೊರವಂಜಿ ದಿಟವ ನೀ ನೋಡಬೇಕು
ನಾಲ್ಕು ಮೂಲೆಗು ನಾಲ್ಕು ಹಣವಾಗಬೇಕು
ನಟ್ಟನಡುವಿಗೆ ಒಂದು ವರಹಾವಾದರು ಬೇಕು
ಒಳ್ಳೇದು ಒಂದು ಹುಂಜಾಗಬೇಕು
ಮುಂದೆ ಬರೋದೊಂದು ಟಗರಾಗಬೇಕು
ಕೊರವಂಜಿ ದಿಟವ ನೀ ನೋಡಬೇಕು.

ನೀ ಮಗುವ ಸಾಕೋದು ದಿಟವೇನೆ
ಚೋರ ಕೊರಮರು ಬರುತಾರೆ
ಕಳ್ಳ ಕೊರಮರು ಬರುತಾರೆ.

ಈ ಕೊರಮರ ಕೈಗೆ ಸಿಕ್ಕದಂತೆ ಮಗುವನ್ನು ಸಾಕಬೇಕಾದರೆ ಕಂಡ ಕಂಡ ದೇವರಿಗೆ ಲಂಚ ಕೊಡಬೇಕು.

ಸುಗ್ಗಿಯಲ್ಲಿ ರೈತನಿಂದ ಮಿರಾಸೆ ವಸೂಲು ಮಾಡುವ ಮತ್ತೊಂದು ಪಂಗಡ ಚಕ್ಕಳ ಗೊಂಬೆಯವರದು. ಇವರು ಚಕ್ಕಳದ ಮೇಲೆ ಬಣ್ಣದಲ್ಲಿ ಗೊಂಬೆಗಳನ್ನು ಬರೆದು ಆಟವಾಡಿಸುತ್ತಾರೆ. ಗೊಂಬೆಗಳನ್ನು ಬೇಕಾದಂತೆ ಕುಣಿಸುತ್ತಾರೆ. ಕೆಲವು ಬೊಂಬೆಗಳನ್ನು ಬರೆದಿಟ್ಟುಕೊಂಡಿದ್ದು, ಹರಿಕಥೆದಾಸರು ಎಲ್ಲಾ ಕಥೆಗಳಿಗೂ ಒಂದೇ ಹಾಡುಗಳನ್ನು ಪ್ರಯೋಗಿಸುವಂತೆ ಎಲ್ಲಾ ಆಟಗಳಿಗೂ ಆ ಗೊಂಬೆಗಳನ್ನೇ ಉಪಯೋಗಿಸುತ್ತಾರೆ. ಅದರಲ್ಲಿ ಬರುವ ವಟವೃಕ್ಷ ಪಾಂಡವರು ತಮ್ಮ ಆಯುಧಗಳನ್ನು ತನ್ನಲ್ಲಿಡಲು ಬಂದಾಗ ಚೆನ್ನಾಗಿ ಕುಣಿಯುತ್ತದೆ. ಆಯುಧಗಳ ಕಟ್ಟೂ ಕುಣಿಯುತ್ತದೆ. ಹಾಗೆಯೇ ಬಕನು ಇರುವ ಪರ್ವತವೂ ಪಾಂಡವರು ವಾಸಿಸುತ್ತಿದ್ದ ಏಕಚಕ್ರ ನಗರವೂ ಕುಣಿಯುತ್ತವೆ. ಈ ಆಟ ಆಡಿಸುವುದಕ್ಕೆ ಹೆಚ್ಚು ಬುದ್ಧಿವಂತಿಕೆ ಬೇಕಿಲ್ಲ. ಆದರೆ ದೀಪದ ಬೆಳಕಿನಲ್ಲಿ ಬಣ್ಣದ ಬೊಂಬೆಗಳು ಬಹು ಜಬರ್ಾಗಿ ಕಾಣುತ್ತವೆ. ನಿಜವಾಗಿಯೂ ಒಳ್ಳೆಯ ಆಟ ಎಂದರೆ, ಪುತ್ಲಿಬೊಂಬೆ ಆಟ. ಈ ಬೊಂಬೆ

ಗಳನ್ನು ಮಾಡುವುದೇ ಒಂದು ಜಾಣ್ಮೆ. ಇದಕ್ಕೆ ಕೀಲಿನ ಗೊಂಬೆ ಎಂದು ಹೆಸರು ಇಡಬಹುದು. ಯಾಕೆಂದರೆ ಈ ಗೊಂಬೆಯ ಕೈಕಾಲು, ಸೊಂಟ, ಮೊಳಕಾಲು, ಕಣ್ಣು, ಮೂಗು, ಭುಜ ಮುಂತಾದ ಎಲ್ಲಾ ಅವಯವಗಳಿಗೂ ಬೇರೆಬೇರೆ ಕೀಲುಗಳಿರುತ್ತವೆ. ಈ ಬೊಂಬೆಗಳನ್ನು ಮರದಲ್ಲಿ ಕಡೆದು ಬಹಳ ಚೆನ್ನಾಗಿ ಮಾಡಿ ಬಣ್ಣಗಳನ್ನು ಹಾಕಿರುತ್ತಾರೆ. ರಂಗಮಂಟಪದಲ್ಲಿ ಎತ್ತರವಾದ ಸ್ಥಳದಲ್ಲಿ, ಗೊಂಬೆಗಳ ಸೂತ್ರಗಳನ್ನು ಹಿಡಿದುಕೊಂಡು ಆಟಗಾರನು ಗೊಂಬೆಗಳನ್ನು ಆಡಿಸುತ್ತಾನೆ. ಸಾಧಾರಣವಾದ ಆಟಗಾರನು ಎರಡು ಗೊಂಬೆ ಎಂದರೆ, ಇಬ್ಬರು ರಾಜರು, ಅಥವಾ ಇಬ್ಬರು ಸನ್ಯಾಸಿಗಳು, ಒಬ್ಬ ರಾಜ ಒಬ್ಬ ಮಂತ್ರಿ, ಅಥವಾ ಸಲ್ಲಸಲ್ಲೆಯರು—ಇವರನ್ನು ಸೂತ್ರಗಳಿಂದ ಆಡಿಸುತ್ತಾನೆ. ಅವನ ಸಹಾಯಕರು ಕೆಳಗಡೆ ಬಂದು ಗಂಗಳದ ಮೇಲೆ ಒಂದು ಕಡ್ಡಿಯನ್ನು ಇಟ್ಟು ಆ ಕಡ್ಡಿಯಮೇಲೆ ಕೈ ಆಡಿಸುವುದರಿಂದ, ಒಂದು ವಿಧವಾದ ಶ್ರುತಿ ಹೊರಡುತ್ತದೆ. ಅದರ ಜತೆಯಲ್ಲಿ ಕಥೆಯನ್ನು ಹೇಳುತ್ತಾರೆ. ಈ ಕಡೆ ಸೂತ್ರಧಾರ ಆ ಕಥೆಗೆ ಅನುಸಾರವಾಗಿ ಗೊಂಬೆಗಳನ್ನು ಸೂತ್ರಗಳಿಂದ ಎಳೆದು ಕುಣಿಸುತ್ತಾನೆ. ಕೈಕಾಲುಗಳನ್ನು ಆಡಿಸುವುದು, ಹಿಂದುಮುಂದೆ ಇಡುವುದು, ಕಣ್ಣಿನ ಭಾವ, ಕೋಪ, ಉತ್ಸಾಹ, ದುಃಖ, ಪ್ರೇಮ ಎಲ್ಲವನ್ನೂ ಆಟಗಾರನು ಎರಡು ಗೊಂಬೆಗಳಲ್ಲೂ ಸೂತ್ರಗಳಿಂದ ತೋರಿಸುತ್ತಾನೆ. ಅವನ ಗೊಂಬೆಗಳ ನರ್ತನವೂ ಬಹಳ ಮನೋಹರವಾಗಿರುತ್ತದೆ. ಆಟಗಾರ ಬುದ್ಧಿವಂತನಾಗಿದ್ದಷ್ಟೂ ಆಟಕ್ಕೆ ಕಳೆ ಕಟ್ಟುತ್ತದೆ. ಗೊಂಬೆಗಳು ಮನುಷ್ಯರಂತೆ ಎಲ್ಲಾ ಹಾವಭಾವಗಳನ್ನೂ ಚೆನ್ನಾಗಿ ತೋರಿಸುತ್ತವೆ. ಅನೇಕವೇಳೆ ಸೂತ್ರಗಳನ್ನು ಹಿಡಿಯುವ ಆಟಗಾರನೇ ಈ ಗೊಂಬೆಗಳನ್ನು ಮಾಡಿಕೊಳ್ಳುತ್ತಾನೆ. ಈ ಆಟಕ್ಕೆ ಜನ ಬಹಳ ಹೆಚ್ಚಾಗಿ ಸೇರುತ್ತದೆ. ಈ ಚಕ್ಕಳಗೊಂಬೆ, ಪುತ್ಲಿಗೊಂಬೆ ಇವರಿಬ್ಬರೂ ಪೂರ್ಣವಾಗಿ ಕನ್ನಡ ನಾಡಿನವರು. ಇವರು ಹಳ್ಳಿಗಳಲ್ಲಿದ್ದುಕೊಂಡು ಬೇಸಾಯ ಮಾಡುತ್ತಾ ಮಧ್ಯೆಮಧ್ಯೆ ಜನರಂಜನೆಗಾಗಿ ತಮ್ಮ ವಿನೋದಗಳನ್ನು ಪ್ರದರ್ಶಿಸುತ್ತಿರುತ್ತಾರೆ.

ಸುಗ್ಗಿಯಲ್ಲಿ ರೈತನಿಂದ ಮಿರಾಸೆ ವಸೂಲು ಮಾಡುವವರಲ್ಲಿ ಬೊಂಬಾಯಿ

ತಮಾಷೆಯವನೂ ಒಬ್ಬ. ಇವನು ಸಾಧಾರಣವಾಗಿ ಕೊಯಮುತ್ತೂರಿನ ಕಡೆಯವನು. ಇವನಿಗೆ ಕನ್ನಡ, ತೆಲುಗು, ತಮಿಳು ಮೂರೂ ಬರುತ್ತವೆ. ಒಂದು ಕಡ್ಡಿಗೆ ೧೫-೨೦ ಬೊಂಬೆಗಳನ್ನು ಕಟ್ಟಿ ಅದನ್ನು ಎತ್ತರವಾದ ಒಂದು ಪೆಟ್ಟಿಗೆಯಲ್ಲಿಟ್ಟು ಅದಕ್ಕೆ ಸ್ವಲ್ಪ ದಪ್ಪನಾಗಿ ಕಾಣುವ ಒಂದು ಅಂಗುಲ ದಪ್ಪದ ಎರಡು ಗಾಜುಗಳನ್ನು ಅಂಟಿಸಿ ಉಳಿದ ಎಲ್ಲಾ ಕಡೆಯೂ ಮುಚ್ಚಿರುತ್ತಾನೆ. ಒಳಗಡೆ ಇಟ್ಟಿರುವ ಚಿತ್ರಗಳನ್ನು ಕಟ್ಟಿರುವ ಕೋಲನ್ನು ಸ್ವಲ್ಪಸ್ವಲ್ಪವಾಗಿ ತಿರುಗಿಸಿದಂತೆ ಒಂದೊಂದು ಬೊಂಬೆ ಮೇಲಕ್ಕೆ ಎದ್ದು ಕಾಣುತ್ತದೆ. ಒಂದೊಂದು ಸಲ ನೋಡುವುದಕ್ಕೆ ಮೂರು ಕಾಸು ಆರು ಕಾಸು ಕೊಡಬೇಕು. ಚಿತ್ರಗಳ ವಿಚಾರವನ್ನೆಲ್ಲಾ ಆಟಗಾರ ಸ್ವಲ್ಪ ಹೆಚ್ಚು ಕಡಿಮೆ ಚೆನ್ನಾಗಿ ತಿಳಿದಿರುತ್ತಾನೆ. ಒಂದೊಂದು ಚಿತ್ರವನ್ನು ತೋರಿಸುವಾಗಲೂ ಅದಕ್ಕೆ ಸಂಬಂಧಪಟ್ಟ ಸಂಗತಿಗಳನ್ನೆಲ್ಲಾ ಹೇಳುತ್ತಾನೆ. ರೈತರಿಗೆ ಅನೇಕ ವಿಷಯಗಳು ಆಟಗಾರನಿಂದ ತಿಳಿಯುತ್ತವೆ. ಬೊಂಬಾಯಿ ಪಟ್ಟಣ, ಸಮುದ್ರ, ತಾಜಮಹಲ್, ಶಹಜಹಾನನ ಕಥೆ, ಕಾಶೀ ಕ್ಷೇತ್ರ, ರೈಲು, ಆಕಾಶವಿಮಾನ ಮೊದಲಾದವುಗಳೆಲ್ಲಾ ರೈತನಿಗೆ ಗೊತ್ತಾಗುತ್ತವೆ. ಒಂದು ಸಲ ಬೊಂಬಾಯಿ ತಮಾಷೆಯೊಳಗಿನ ರೈಲು, ಕಟ್ಟಿದ್ದ ನೂಲು ಸಡಿಲವಾದುದರಿಂದ ಕೆಳಕ್ಕೆ ಬಿದ್ದು ಬಿಟ್ಟಿತು. ರೈತರು ರೈಲನ್ನು ನೋಡಿಯೇ ಇರಲಿಲ್ಲ. ಅದರಿಂದ ಬಿದ್ದರೆ ಏನು ಅಪಾಯವಾಗಬಹುದು ಎಂಬುದೂ ಅವರಿಗೆ ತಿಳಿದಿರಲಿಲ್ಲ. ರೈಲು ಬಿದ್ದ ಕೂಡಲೆ ಅವರು, ರೈಲು ಬಿತ್ತು ರೈಲು ಬಿತ್ತು ಎಂದರು. ಕೂಡಲೆ ತಮಾಷೆಯವನು, ರೈಲು ಇಲ್ಲಿ ಬಿದ್ದರೆ ನಾನೂ ನೀನೂ ಉಳಿತೇವೆಯೇ ಎಂದು ಹೇಳಿ ರೈಲಿನ ವೇಗ, ಅದು ಕಂಬಿಯ ಮೇಲೆ ಹೋಗುವುದು, ಇಂಜನ್ ಮುಂತಾದ ಅದಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ತಿಳಿಸಿದನು. ಈ ರೀತಿ ರೈತನಿಗೆ ಜ್ಞಾನ ಎಲ್ಲಾ ಕಡೆಯಿಂದಲೂ ಬರುತ್ತದೆ. ಈ ಮೇಲೆ ಹೇಳಿದ ರೈತನ ಮಿತ್ರರು ಯಾವ ಯಾವುದೋ ಕಾಲದಲ್ಲಿ ಬಂದು ಆಟವಾಡಿಹೋಗಿದ್ದು ತಮ್ಮ ಭಾಗದ ವಸೂಲಿಗೆ ಸುಗ್ಗಿಯಲ್ಲಿ ಬರುತ್ತಾರೆ. ದಾಸಯ್ಯಗಳು ಬಂದು ಭತ್ತದ ರಾಸಿಯಿಂದಲೇ ಬವನಾಸಿಯ ತುಂಬ ತುಂಬಿಕೊಂಡು ಹೋಗಿಬಿಡುತ್ತಾರೆ.

ರೈತನೊಬ್ಬ ಬಂದವರಿಗೆಲ್ಲಾ ಕೊಟ್ಟು ಪೂರೈಸುತ್ತಾನೆ ಎಂದರೆ ಇತರರಿಂದ ಸಾಧ್ಯವೇ. ವಿಶ್ವವನ್ನು ಆಡಿಸುವವನೇ ರೈತ. ಆದುದರಿಂದಲೇ ಅವನು ವಿಶ್ವಬಂಧು.

೨

ರೈತ ಸ್ವಾಭಾವಿಕವಾಗಿ ಸಾಹಸಿ ಮತ್ತು ಕೆಚ್ಚೆದೆಯವ. ಅವನ ಜೀವನದಲ್ಲಿ ಒಳ್ಳೆಯ ಶಿಸ್ತು ಇದೆ. ನಮ್ಮ ದೇಹಕ್ಕೂ ಮನಸ್ಸಿಗೂ ಸಮಾಧಾನವಿಲ್ಲದ ಇಂದಿನ ನಾಗರಿಕತೆಯಲ್ಲಿ ಶಿಸ್ತು ಇರುವುದು ಅವನ ಜೀವನದಲ್ಲಿ ಮಾತ್ರ. ಅವನ ಆಹಾರ, ವಿಹಾರ, ಆಚಾರ, ವ್ಯವಹಾರ, ಎಲ್ಲದರಲ್ಲೂ ಶಿಸ್ತು ಇರುತ್ತದೆ. ಆಹಾರದ ವಿಷಯದಲ್ಲಿ ಅವನ ನಿಯಮಗಳು ಜಾಸ್ತಿ. ಬಾಯಿಚಪಲಕ್ಕಾಗಿ ಅವನು ಯಾವಾಗಲೂ ಏನನ್ನೂ ಮಾಡಿಕೊಂಡು ತಿನ್ನುವುದೇ ಇಲ್ಲ. ಯಾವುದಕ್ಕೂ ಒಂದು ನೆಪ ಬೇಕು. ಆ ಕಾಲದಲ್ಲಿ ಮಾತ್ರ ಅವನು ಅದನ್ನು ಮುಟ್ಟುತ್ತಾನೆ. ನಮ್ಮ ಹಾಗೆ ಅವನು ಯಾವ ಯಾವತ್ತು ಯಾವ ಯಾವ ಹೊಸ ಆಹಾರ ತೆಗೆದುಕೊಳ್ಳಲಿ ಎಂಬುದಾಗಿ ಯೋಚನೆಮಾಡುತ್ತಿರುವುದಿಲ್ಲ. ಆ ರೀತಿ ಅವನು ನಿಜವಾಗಿಯೂ ತಿನ್ನುವುದಕ್ಕೆ ಹಿಡಿದರೆ ಉಳಿದವರಿಗೆ ಯಾವ ವಸ್ತುವೂ ದೊರಕುವುದೇ ಇಲ್ಲ. ರಸಬಾಳೆಹಣ್ಣಿಗೆ ಅವನು ಮದ್ದಿನ ಬಾಳೆಯ ಹಣ್ಣು ಎಂದೇ ಕರೆಯುತ್ತಾನೆ. ಔಷಧಿಗೆ ಹೊರತು ಬೇರೆ ಯಾವುದಕ್ಕೂ ಅವನು ಅದನ್ನು ಮುಟ್ಟುವುದಿಲ್ಲ. ಗೌರಿಯ ಹಬ್ಬದಲ್ಲಿ ಮಾತ್ರ ಅವನು ತೆಂಗಿನಕಾಯಿಗಳನ್ನು ಕೊಳ್ಳುತ್ತಾನೆ. ಆ ವಾರ ಸಂತೆಯಲ್ಲಿ ತೆಂಗಿನಕಾಯಿ ಒಂದೂವರೆ ಆಣೆ ಆಗುತ್ತದೆ. ಎಷ್ಟು ಸಾವಿರ ಕಾಯಿ ಬಂದರೂ 'ಜಪ್' ಎನ್ನುತ್ತದೆ. ಮಾಳಾದ ಪಕ್ಷದಲ್ಲಿ ಮಾತ್ರ ಅವನು ಬೆಲ್ಲವನ್ನು ಕೊಳ್ಳುತ್ತಾನೆ. ಹೀಗೆ, ಯಾವ ಒಂದು ಬಗೆಯ ಶಿಸ್ತು ನಮ್ಮ ಪೂರ್ವಿಕರಲ್ಲಿ ಇದ್ದಿತೋ, ಅಥವ ಈಗಿನ ಕೆಲವು ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೂ ಇದೆಯೋ ಆ ಶಿಸ್ತು ರೈತನ ಜೀವನದಲ್ಲಿ ನಮಗೆ ಈಗಲೂ ಕಾಣುತ್ತದೆ.

ರೈತ ವೇದಾಂತ, ತರ್ಕವಾದ ಇವುಗಳಲ್ಲಿ ಕಾಲ ಕಳೆಯುವುದಿಲ್ಲ. ಸಾಧಾರಣವಾದ ನೀತಿಯೆ ಅವನ ಸರಳ ಜೀವನಕ್ಕೆ ಸಾಕು. ಎದ್ದವನೇ

ಮೇಲೆ ಉರಿಯುವವನ ಕಡೆಗೆ ಕೈಮುಗಿಯುತ್ತಾನೆ. "ಹೊತ್ತಿನಂತೆ ಎದ್ದು ಪತ್ಯಾರ ನೆನೆಯಲಿ. ಊರಿಗೆ ಹಿಂದಾಗಿ ನೀರಿಗೆ ಮುಂದಾಗಿ ಹತ್ತೆಂಟು ನಾಮವನ್ನು ಇಡುವ ನೇರಾನೆ ಮುಖದ ತಿಮ್ಮಪ್ಪನನ್ನು ನೆನೆಯುತ್ತೇನೆ." ಮಾಡುವ ಕೆಲಸ ಚೆನ್ನಾಗಿ ಮಾಡಬೇಕು. "ನಾವು ಇಕ್ಕಿದ್ರೆ ನೇಮದಿಂದ ಇಕ್ಕಬೇಕು. ನಾಲ್ವರ ಎಂಜಲು ಬಿಡಬೇಕು. ಗಂಧಸಿಕ್ಕಿದ್ರೆ ಚಂದದಿಂದಿಡಬೇಕು. ನಾಲ್ವರ ಎಂಜಲ ಬಿಡಬೇಕು." ತಿರುಪತಿಗೆ ತನಗೆ ಹೋಗುವುದಕ್ಕೆ ಆಗದಿದ್ದರೆ ತನ್ನ ಕಾಣಿಕೆಯನ್ನು ದಾಸಯ್ಯನ ಮೂಲಕ ಭಕ್ತಿಯಿಂದ ಒಪ್ಪಿಸುತ್ತಾನೆ. ಅವನ ದೇವರು ತಿಮ್ಮಪ್ಪ "ರಾಯ ರಾಯರಿಗಿಂತ ರಾಯ." ಅಂತವನ ದಾಸಯ್ಯ ಬಂದರೆ ಗೌರವಿಸಬೇಡವೆ? "ದಾಸಯ್ಯ ಕಣೆ ನೋಸಿದ ಲಾವಣಿ, ಏಸು ದಿನ್ಕೆ ಬಂದ್ಯೊ ನನ ಸ್ವಾಮಿ"; "ದಾಸಯ್ಯ ಬಂದ ಹಾಸೀರೆ ಗುಡಸೀರೆ ಕ್ಯಾಸಕ್ಕಿ ಮುತ್ತ ಹರಹೀರೆ." ನಮ್ಮ ರೈತರಲ್ಲಿ ಅನೇಕರಿಗೆ ತಿಮ್ಮಪ್ಪನೇ ಮನೆದೇವರು. ತಿಮ್ಮಪ್ಪನನ್ನು ಎಷ್ಟು ಹೊಗಳಿದರೂ ಅವರಿಗೆ ತೃಪ್ತಿಯಿಲ್ಲ. ಆ ತಿಮ್ಮಪ್ಪನ ಗುಡಿಯ ಮೇಲೆ ಎಣ್ಣೆಯ ಜಾರಿಕೆ ತುಪ್ಪದ ಜಾರಿಕೆ. 'ಮೂಡ ಮುತ್ತಿನ ಗಿರಿ, ಪಡುವ ಚಿನ್ನದ ಗಿರಿ ಸೋಲಿಗರ ಸೀಮೆ ಸಿರಿಹರಿ ವೆಂಕಟರಮಣ ಸೋಲಿಸಬೇಡ ಗೆಲಿಸಯ್ಯ." "ವೆಂಕಟರಮಣಾನೆ ಎಳೆಯ ಗೊವಿಂದಾನೆ ಸೂಳೇರಿಗೆ ಒಲಿಯೊ ಸುಗುಣಾನೆ ತಿಮ್ಮಪ್ಪ ಸೋಲಿಸಬೇಡ ಗೆಲಿಸಯ್ಯ." ಇಷ್ಟು ಸಮೀಪ ಬಾಂಧವ್ಯವುಳ್ಳ ದೇವರ ಸ್ನೇಹವಿರುವಾಗ ರೈತನಿಗೆ ಬಾಕಿ ವೇದಾಂತ ಯಾಕೆ ಬೇಕು? ಈ "ಸೋಲಿಸಬೇಡ ಗೆಲಿಸಯ್ಯ" ಎಂಬುದೇ ಅವನ ಪಲ್ಲವಿ: ಚೆನ್ನಾಗಿ ಬದುಕಬೇಕು. ರಸಿಕವಾಗಿ ಬಾಳಬೇಕು. ಈಜಬೇಕು. ಇದ್ದು ಜಯಿಸಬೇಕು.

೫. ಗಂಡ, ಹೆಂಡತಿ, ಪ್ರೇಮ, ಸಂಸಾರ

೧

ಪೈರು ಚೆನ್ನಾಗಿ ಬೆಳೆದರೆ ರೈತನನ್ನು ಹಿಡಿಯುವುದಕ್ಕೆ ಆಗುತ್ತದೆಯೆ? ಅವನ ಜೀವ ಆಗ ಬಿಸಿಲು ತಗುಲಿದ ಗಿಡದಂತೆ ಅರಳುತ್ತದೆ. ಸಮೃದ್ಧಿಯೊಂದಿಗೆ ಅವನ ಪ್ರೇಮದ ವ್ಯಾಪಾರ ಸ್ವಾಭಾವಿಕವಾಗಿ ಪ್ರಾರಂಭವಾಗುತ್ತದೆ. ರೈತ ದುಡಿದು ದೇಹಶಕ್ತಿಯನ್ನೂ ಬಲವನ್ನೂ ಹೆಚ್ಚಿಸಿಕೊಂಡಿರುವ ಕಟ್ಟುಮಸ್ತಾದ ಆಳು; ಮಂಡಿಯ ವರೆಗೆ ಹೊಟ್ಟೆಯೊಂದೇ ಜಗ್ಗುಹಾಕುತ್ತಾ ಬೆಳೆದಿರುವ ಬಡ ಆಳಲ್ಲ. ದೇಹ ಬಲಿಷ್ಠವಾಗಿರುವಂತೆ ಅದರಲ್ಲಿ ಕೆಚ್ಚೂ ಹೆಚ್ಚು. ಅವನನ್ನು ಕಂಡರೆ ಎಲ್ಲರಿಗೂ ಪ್ರೀತಿ.

ನಿಲ್ಲು ನಿಲ್ಲಯ್ಯ ರಾಜಾ
ಮಲ್ಲಿಗೆ ಹಾರಗಳಿಲ್ಲಿ ರಾಜಾ
ಕೇರಿಕೇರಿ ತಿರುಗಲಿದ್ದಿ
ಭಾರಿ ಕಿನ್ನರಿ ನುಡಿಸುತಿದ್ದಿ
ನಮ್ಮ ಕೇರಿಗೆ ಯಾಕೆ ಬರಲಿಲ್ಲ
ನಮ್ಮ ಕೇರ್ಗೆ ಬಂದರ್ನೀನು
ಕರ್‍ಯ ಕಂಬ್ಲಿ ಗದ್ದೆ ಹೂಡಿ
ಗಂಧ ವೀಳ್ಯ ತಂದುಕೊಡುವೆವೊ
ಗಂಧನಾದ್ರು ಧರಿಸಿಕೊಳ್ಳಿ
ವೀಳ್ಯನಾದ್ರು ಮೆದ್ದುಕೊಳ್ಳಿ
ಬಂದ ಕಾರ್‍ಯ ಹೇಳಿಹೋಗಿ
ಆಗದೋನೆ ಭೋಗದೋನೆ
ನಾಗರಾ ನಡುಕಟ್ಟಿನೋನೆ
ಕೋಗಿಲ್ದ್ಹಂಗೆ ಕೂಗುತೀಯಲ್ಲೊ.

ಇಂತಹ ಭೂಪತಿ ಮುತ್ತಿನ ತುರಾಯಿ ಹಿಡಿದುಕೊಂಡು ಮಲ್ಲಿಗೆ ಹೂ ಕೊಯ್ದು ಮಾಲೆಕಟ್ಟಿ ಆಚೆ ಈಚೆ ತೋಟದ ನಡುವೆ ಗಂಧದ ಶ್ರೀವನದ

ಬಯಲಲ್ಲಿ ಬರುತ್ತಿರುವಾಗ, ಅವನು ಸೀರೆ ತರದಿದ್ದರೂ ಸೆರಗೊಡ್ಡಿ ಹೆಣ್ಣು ಕೊಡು ಎಂದು ಬೇಡದಿದ್ದರೂ ಸೋದರದವರು ಬಂದು ಧಾರೆ ಎರೆಯುತ್ತಾರೆ. ತೆರವನ್ನೂ ಸಹ ಕೇಳುವುದಿಲ್ಲ. ಆಗ ಅವನ ಜೋರೇ ಜೋರು. ತೋಟದ ಹೂವನ್ನು ತಲೆಗೆ ತುಂಬಿಕೊಂಡು ಊಟವನ್ನು ಮರೆತ ಅವನ ವಿಷಯದಲ್ಲಿ ಈ ಮುಂದಿನ ಮಾತು ಅಸಂಭವವಾಗಿ ತೋರುವುದಿಲ್ಲ.

ಎಳ್ಳುಹೊಲದಾಗೆ ಎಳೆ ಟಗರ ಸಾಕಿ
ಎಳಗಿನ ಕೆಂಗಪ್ಪ ಮೊಕ ಮುನಿಸೊ ಜಾಣ
ಎಳಗಿನ ಕೆಂಗಪ್ಪ ಮೊಕ ಮುನಿಸ ಮಾಡ್ಕೊಂಡು
ನಲ್ಲೂರ ದುರ್ಗಾಕೆ ಹೊರಟಾನು ಜಾಣ
ಸಾಲ್ದಿಪ್ಪೆ ಮರದ ನೆರಳಲ್ಲಿ ಹೊರಟಂಥ
ಕೆಂಗಪ್ಪ ಹಸ್ಸೆಂದು ಕುದ್ರೆಯಿಂದಿಳ್ದ
ತನ್ನ ಸಣ್ಣ ಜಾಡಿ ತಾ ಹಾಸಿ ಕೆಂಗಪ್ಪ
ಅಲ್ಲಿ ಮಾಡ್ಯಾನು ಸುಖನಿದ್ರೆ.

ಆ ವಸಂತದಲ್ಲಿ ಮಲ್ಲಿಗೆ ಜಾಜಿಗಳರಳಿ ಘಮಿಸುವ ಹಿಪ್ಪೆಮರದ ನೆರಳಿನಲ್ಲಿ ತಂಗಾಳಿ ಬೀಸಿ ಜೊಂಪು ಹತ್ತಿ ಮಲಗಿದ್ದಾಗ ಆ ರಸಿಕನಿಗೆ ಈ ರೀತಿ ಹಗಲು ಗನಸು ಬಿದ್ದಿದ್ದರೆ ಆಶ್ಚರ್ಯವಲ್ಲ:

ಏಳು ಮಂದಿ ಅಲ್ಲಿ ಸೂಳೇರು ಕೈಯ ಕಟ್ಟಿ ಏನೆಂದರು
ಹಳ್ಳಿಕಾರನಲ್ಲ ಡಿಲ್ಲಿಗೌಡನಲ್ಲ ಭದ್ರ ಚಿಕ್ಕವ್ವನ ಮಗ ಕಾಣೆ.

ಹಾಗೆಯೇ ಆ ಗುರುತಿದ್ದ ಯುವಕನನ್ನು ಅವರು ನೋಡುತ್ತಿದ್ದಾಗ

ಭದ್ರ ಚಿಕ್ಕವ್ವನ ಮಗನಾದರೇನಾಯ್ತು
ಹೋಗೋಣ ಬಾರೆ ಮನ್ಗೆ ಜಾಣೆ
ಅರ್ಮನ್ಗೆ ಹೋಗಾಕೆ ನಾವೀಗ ಬಂದೀವಿ
ಹಿಂದೆ ಬರ್‍ತಾರೆ ಹಿರಿಯೋರು ಜಾಣ
ಹಿಂದೆ ಬರ್‍ತಾರೆ ಹಿರಿಯೋರು ಬೇಡ
ಸೂಳೆದಂಡವ ತೆಗೆವಾರು ಕುಲದಲ್ಲಿ.

ಅರಮನೆಗೆ ಹೋಗುವುದಕ್ಕೆ ಬಂದವರು ಕೆಂಗಪ್ಪನ ರೂಪಕ್ಕೆ ಮರುಳಾಗಿ ನಿಂತರೆ ಹಿರಿಯರು ಬಿಡುತ್ತಾರೆಯೆ? ದಂಡ ತೆಗೆಯುತ್ತಾರೆ. ಆದರೂ

ಆ ಗೆಣೆಕಾತಿಯರು ಹೆದರಲಿಲ್ಲ. ಕೆಂಗಪ್ಪನೊಂದಿಗೆ ಸರಸವನ್ನೇ ಪ್ರಾರಂಭಿಸಿದರು.

ಗಂಧಾದುಂಡೆ ಕೊಳ್ಳೊ ಗಾಜಿನ್ಭರಣಿ ಕೊಳ್ಳೊ
ಅಂದುಳ್ಳಿ ಮಕ್ಕಳ ಕೊಳ್ಳೊ ಜಾಣ
ಕಣ್ಕಪ್ಪ ಕೊಳ್ಳೊ ಕಸ್ತೂರಿ ಭರಣಿ
ಬ್ಯಾಡಾತಿ ಸಂಗ ಬೇಡವೋ ಜಾಣ
ಬೇಡಾರು ನಮ್ಮ ಬಿಡಗರಿಯಾರು
ಕೆಂಗ ಬಾರೆಂದು ಸೆರಗೆಳೆದಾರು
ಸೂಳೆ ಮಲ್ಲಿಯ ಸೂರೆಲ್ಲ ಮಲ್ಲಿಗೆ
ಜಾಣ ಕೆಂಗಪ್ಪನ ಮನಸೂವೆ
ಜಾಣ ಕೆಂಗಪ್ಪ ಮಲಗೊ ಮಂಚದ್ಮೇಲೆ
ತಾಳೆಹೂವಿನ ತಲೆದಿಂಬು.

ಆದರೂ ಕೆಂಗಪ್ಪನಿಗೆ ಬೇಡಿತಿಯ ಆಸೆ ಬಿಡಲಿಲ್ಲ.

ಹತ್ತೂ ಕಾಲೇಣಿ ಮುತ್ತಿನ ಚೇಣಿ
ಮತ್ತಾರಿಗೆ ಹುವ ಕುಯ್ತೀಯೊ ನೀನು
ನನ್ನೂರ ಕಳ್ಳ ಬೇಡಾರ ಹುಡುಗಿಯ
ತೋರಾದ ತುರುಬೀಗೆ ಕುಯ್ದೀನಿ ಜಾಣ.

ಈ ಪ್ರಕೃತಿಯೊಂದಿಗೆ ಬಾಳಿ ಬೆಳೆಯುವ ಜೀವನದಲ್ಲಿ, ಗೆಳತಿ ರಸಿಕನನ್ನು ಕಂಡು ಹೀಗೆ ಹೇಳಿದ್ದರೂ ಸ್ವಾಭಾವಿಕವಾಗಿ ತೋರುತ್ತದೆ.

ರಾಗಿಯ ಹೊಲವನ್ನಿಟ್ಟು ರಾಜ್ಯವಾಳೊ ಗಂಡನ್ನಿಟ್ಟು
ನಿನಗಾಗಿ ನಾನು ಬಂದೆನೊ—ಗೆಣೆಕಾರ
ನಿನಗಾಗಿ ನಾನು ಬಂದೆನೊ.

ಉದ್ದಿನ ಹೊಲವನ್ನಿಟ್ಟು ಮುದ್ದಾಡೊ ಗಂಡನ್ನಿಟ್ಟು
ನಿನಗಾಗಿ ನಾನು ಬಂದೆನೊ—ಗೆಣೆಕಾರ
ನಿನಗಾಗಿ ನಾನು ಬಂದೆನೊ.

ಇವು ಆ ರಸಿಕ ಜೀವನದ ಕೆಲವು ಮಾತುಗಳು.

"ಹಳ್ಳಿಕಾರರ ಹುಡುಗ ಇರುಳು ಎದ್ದು ಬರುವಾಗ ಬೆಳ್ಳಿ ಉಂಗುರದ ಬೆಳಕಿಗೆ ಬೆಳ್ಳಕ್ಕಿಯ ಹಿಂಡು ಚೆದರುತ್ತವೆ." "ಕೂಡಿದರೆ (ಮದುವೆಯಾದರೆ) ಕುಪ್ಪಳ್ಳಿ ಹುಡುಗನನ್ನು ಕೂಡಬೇಕು. ಅವನು ಕೊಪ್ಪು ಭಂಗಾರ ಇಡುತ್ತಾನೆ." "ಚಿನ್ನದ ಚೀಲಕ್ಕೆ ರನ್ನದ ಬಾಯ್ದಾರದಂತೆ ನನಗೆ ನಿನ್ನಂಥ ಗೆಣೆಕಾರ. ನಿನ್ನೊಡನೆ ಆಡಿ ನೆನ್ನೆಯಿಂದ ನೀರು ತರಲಿಲ್ಲ." "ನನ್ನ ಗೆಣೆಕಾರ ಧೀರ. ಅವನು ಕಾಕುಹಾಕುತ್ತಾ ಬಂದ. ಅವನ ಕಾಕು ಕಡೆಬಾಗಲಿಗೆ ಕದವಾಯಿತು. ಶತ್ರುಗಳು ಹೆದರಿದರು." ಹುಡುಗ ಹೀಗೆ ಬೆಳೆಯುತ್ತಿರುವಾಗ ಹುಡುಗಿ ಚೆಂದುಳ್ಳ ಚೆಲುವೆಯಾಗಿ ಬೆಳೆಯುತ್ತಾಳೆ. ಹೊಲಗಳಲ್ಲಿ ಗದ್ದೆಗಳಲ್ಲಿ, ಬಿತ್ತುವಲ್ಲಿ ಕಳೆಕೀಳುವಲ್ಲಿ, ಒಕ್ಕುವಲ್ಲಿ ಬಡಿಯುವಲ್ಲಿ, ಗೊಬ್ಬರ ಹೊರುವುದರಲ್ಲಿ ಹಕ್ಕಿಗಳಂತೆ ಹುಡುಗ ಹುಡುಗಿಯರು ಒಬ್ಬರಿಗೊಬ್ಬರು ಸರಸವಾಗಿ ಸಮಾನವಾಗಿ ಬೆಳೆಯುತ್ತಾರೆ. ಆಗ ಒಬ್ಬರಲ್ಲಿ ಒಬ್ಬರಿಗೆ ಪ್ರೀತಿ ಮೊಳೆಯುವುದು ಸ್ವಾಭಾವಿಕವಾದುದು. ಅದರಲ್ಲೂ ಅವರು ಮುಂದೆ ಮದುವೆಯಾಗುವ ಗಂಡಹೆಂಡಿರೇ ಆದುದರಿಂದ ಹಾಸ್ಯ ವಿನೋದದ ಮಾತುಗಳು ನಡೆಯುವುದುಂಟು. "ಚೊಳ್ಳೆ ಹೂವಿನ ಹಾಗೆ ಚೂಕಾಡಿ ಹುಡುಗ. ತೆಳ್ಳಗಿದ್ದರೇನು? ಮನೆಗಾರ ಹಾಕಿದ ಕಾಕು ಮುಂಗಾರು ಸಿಡಿಲು ಹೊಡೆದಂತೆ." "ಕೆಬ್ಬೆ ಹೊಲದವನು ಗುಬ್ಬಿ ಚೆಲ್ಲಾದವನು ಹುಬ್ಬಿನಲ್ಲಿ ಹುಲಿಯನ್ನು ತಿವಿದವನು" ಅಂತಹ ಶೂರ. ಅಂತಹ ಧೀರನನ್ನು ಕಾಣದಿದ್ದರೆ ಹುಡುಗಿ ತಳಮಳಿಸುತ್ತಾಳೆ. "ಕಾಣದೆ ಇರಲಾರೆ ಕಾಶಿ ಖರ್ಜೂರವ. ಬಾಣಶೂರನ ಗೆಳೆಯಾನ ಮುಖವನ್ನು ಕಾಣದೆ ಅರಘಳಿಗೆ ಇರಲಾರೆ."

ಗಂಡಿಗೆ ಹೆಣ್ಣಿನ ಮೇಲೂ ಪ್ರೀತಿ ಹಾಗೆಯೇ ಬೆಳೆಯುತ್ತದೆ. "ಹಸನಾದ ಹೆಣ್ಣೆ ಮೊಸಳೆ ತೋಟಕೆ ಬಾ, ರಸಮೆಟ್ಟಿದ ಎಲೆಯ ಕುಯ್ಯೆಸೇನು, ಹಸನಾದ ಸಗೆಯ ನೆಗಿಸೇನು. ಕಲ್ಲಿನ ಮೇಲೆ ಕಲ್ಲು ಒಡ್ಡಿ ಮಲ್ಲಿಗೆ ಕುಯ್ಯುವವಳೆ, ನಿಲ್ಲು ಹೇಳು ಹಸನಾದ ಮಾತ, ನೀ ಕೂದ ಮಲ್ಲಿಗೆ ನನಗೂ ನಿನಗೂ ಸರಿಪಾಲು. ಹುಡುಗಿ ನಿನ್ನನ್ನು ನೋಡಿ ಹೋರಿ ಹೊಡೆಯು

ವ್ರದಕ್ಕೆ ಮನಸಿಲ್ಲ. ನಿನ್ನ ಮೊಗ ಸೂಜಿ ಮೊನೆಯಂತೆ. ನಿನ್ನ ಮೈಬಣ್ಣ ಇಂಬಿಯ ಹಣ್ಣಿನಂತೆ ತುಂಬಿತು ನನಗೆ ನಿನ್ನ ಮೇಲೆ ಹಂಬಲ ಬಿತ್ತು; ಮೈಸೂರು ಸಂಬಳ ಬಿಟ್ಟು ಬರಲೆ? ಬಗ್ಗಿ ಸಣ್ಣ ಅಕ್ಕಿ ಅಳೆವವಳೆ ನಿನ್ನ ಮಡಲಲ್ಲಿ ಚಿಗುರೆಲೆ ಹುಬ್ಬುಹಾಕಿವೆ. ಕಾಡುಗಣ್ಣಿನವಳೆ ಕೂಡಿದ ಹುಬ್ಬಿನವಳೆ ಕೋಡಿಲಿ ನೀರ ಮೊಗೆವವಳೆ ನಿನ್ನನ್ನು ನೋಡಿ ಕೋಗಿಲೆಗಳು ಮೇವು ಮರೆತವು. ಕೈಯ ಕಂಕಣದವಳೆ ಮೈಯ ಭೂಷಣದವಳೆ ಮೈಯಾರಿ ಸಣ್ಣದನಿಯವಳೆ ನಿನ್ನ ಮೇಲೆ ನನ್ನ ಪ್ರೀತಿ ಬಿತ್ತಲ್ಲ. ಉತ್ತ ಹೊಲದಲ್ಲಿ ಪತ್ತಾರೆ (ಪತ್ರೆ) ಕುಯ್ಯುವವಳೆ, ಮುತ್ತಿಕ್ಕಿದ ಓಲೆಯನ್ನು ಕಿವಿಯಲ್ಲಿ ಧರಿಸಿದವಳೆ, ಹರಗಿದ ಹೊಲದಲ್ಲಿ ಮರುಗವ ಕೊಯ್ಯುವಳೆ ಹರಳಿಕ್ಕಿದ ಓಲೆಯನ್ನು ಕಿವಿಯಲ್ಲಿ ಧರಿಸಿದವಳೆ, ಬಣ್ಣದ ಶಾಲೆಯವಳೆ ಬೆಳ್ಳಿಯ ಬಳೆಯುವಳೆ ದುಂಡು ಮಲ್ಲಿಗೆ ಮುಡಿವವಳೆ, ದಂಡಿನ ಹಾದೀಲಿ ದನ ಬರುವ ಓಣೀಲಿ ಎಳೆನಾಗರಾ ತೆಕ್ಕೆ ಮುಡಿದಂತೆ ಮುಡಿಯುಳ್ಳವಳೆ, ಜಾಣೆ, ಪಾರಿವಾಳದ ಹಟ್ಟಿ ಮನೆಯುವಳೆ ನೀಲದುಂಗುರದವಳೆ, ದಂಡೀನ ಹಾದೀಲಿ ಗೊಂಡೇವ ಮಾರುವವಳೆ, ಆಚೆ ಕೇರಿಯವಳೆ ಕಾಚಕ್ಕಿ ನೆರಿಯವಳೆ, ಮಾವನ ಮಗಳೆ, ಪ್ರೀತಿಬಿತ್ತಲ್ಲ ನಿನ ಮೇಲೆ. ನಡುವಿಗೆ ಒಡ್ಯಾಣ ನಡುವಿಗೆ ಚಿನ್ನದ ಗೊಂಬೆ ನಡುಬೀದಿ ಒಳಗೆ ನಲಿವವಳೆ, ಗೋದಿಯ ನೆರಿಯೋಳೆ, ಬೀದಿ ಮನೆಯೋಳು ಬೀಸಣಿಗೆ ನೆರಿಗೆಯೊಳು ಜಾಲದ ಹೂವಿನ ಜಡೆಯೊಳು, ಕಾಗಿನಾ ಸೀರೆಯೋಳು, ಕಡೆಚೋರಿ ಮನೆಯೋಳು, ಮಾವನ ಮಗಳೆ, ತಂದುಕೊಂಡೇನು ತೆರ ಹೇಳೆ" ಎಂದು ಗಂಡು ಹೆಣ್ಣನ್ನು ಬಗೆ ಬಗೆಯಾಗಿ ವರ್ಣಿಸುತ್ತದೆ, ಬಯಸುತ್ತದೆ, ಬೇಡುತ್ತದೆ. ಹೆಣ್ಣಿನ ಆಸೆಯಿಂದ ಗಂಡಿಗೆ ಏನೂ ಬೇಕಾಗುವುದಿಲ್ಲ. "ಸಣ್ಣಶಾವಿಗೆ ಒಲ್ಲ ಚಿನ್ನಿ ಸಕ್ಕರೆ ಒಲ್ಲ ಹೆಣ್ಣು ಎಂಬ ಶಬ್ದ ಬಿಡುವಲ್ಲ. ಅಣ್ಣಯ್ಯ, ಹೆಣ್ಣು ಬಂದಮ್ಲೆ ಏಳು ಉಣ್ಣು." ಹೆಣ್ಣಿನದೇ ಗಂಡಿಗೆ ಧ್ಯಾನವಾಗುತ್ತದೆ. ಆದರೆ ಮನಸ್ಸಿಗೆ ಬೇಕಾದ ಹೆಣ್ಣು ಅಷ್ಟು ಸುಲಭವಾಗಿ ದೊರಕುತ್ತದೆಯೆ? ತೆರ ಸುಲಭ ಎಂದು ಕುರುಡಿ ತಂದರು ಎಂಬ ಗಾದೆಯಂತೆ ಯಾವು ಯಾವುದನ್ನೋ ಗಂಟುಹಾಕಿಕೊಳ್ಳಲು ಆಗುತ್ತದೆಯೆ? "ಹುಣಚಿಯ ಎಲೆಗಳ ಎಣಿಸಿ

ನೋಡಿದರೇನು, ಮನಸಿನ ಹೆಣ್ಣು ಕೈಮೀರಿ ಹೋದರೆ." "ಕುಟ್ಟಿದ ಅಕ್ಕೀಲಿ ಕುಸುಮಾವ ತೆಗೆವಾಳು ನೆಲ್ಲಿಕಾಯಲ್ಲಿ ಒಳನಾರನ್ನು ತೆಗೆಯು ವವಳು" ಇಂತಹ ಚೆಲುವೆ ಸಿಕ್ಕಬೇಕಾದರೆ ಕಂಡಕಂಡ ದೇವರಿಗೆಲ್ಲಾ ಹರಕೆ ಹೊರಲೇ ಬೇಕು. "ಕನ್ನಂಬ್ಯಾಡೀಲಿರುವ ಚೆನ್ನಗೋಪಾಲಯ್ಯ ಕನ್ನೆ ಹೆಣ್ಣು ನಮಗೆ ಒಲಿದರೆ ಕನ್ನಂಬಾಡಿ ಕನ್ನಡಿಗೆ ಮುತ್ತು ಬಿಗಿಸುವೆನು; ಕಾಗಲ್ವಾಡೀಲಿರುವ ಬಾಗಿಲ ಹನುಮಂತ ನೀಟ್ಗಾತಿ ಹೆಣ್ಣು ಒಲಿದರೆ ಬಾಗಿ ಲಿಗೆ ಮುತ್ತ ಹೆಣಿಸೇನು" ಎಂದು ಗಂಡು ಹರಕೆ ಹೊರುತ್ತದೆ. ಹೆಣ್ಣು ಒಲಿ ಯಲಿ ಎಂಬುದೇ ಪ್ರಾರ್ಥನೆಯೇ ಹೊರತು ಹೆಣ್ಣು ದೊರಕಲಿ ಎಂಬುದಲ್ಲ.

ಒಳ್ಳೆ ಹೆಣ್ಣು ಸಿಗುವುದು ಎಷ್ಟು ಕಷ್ಟವೋ ಒಳ್ಳೆಯ ಗಂಡೂ ಹಾಗೆಯೇ. ಎಷ್ಟೋ ಪೂಜೆ ಹರಕೆ ವ್ರತ ನಡೆಯಬೇಕು. "ಗರಡಿಮನೆಗೆ ಗಂಭೀರ ಹೋಗವ್ನೆ ಗಂಧದ ಲೋಡ ತಿರುಗುವ ದೊರೆಮಗನಿಗೆ ಮಗಳ ಕೊಡಬೇಕು." "ಮುತ್ತೈದೆತನ ಬೇಡಿ ಮೂರು ತಾಸು ನಾನು ನಿಂತೆ. ಮುತ್ತಿನ ತುರಾಯಿ ಅರಸರ ಸಂಗ ಬೇಡಿ ಸುತ್ತೇನು ಶಿವನ ಶಿಖರಾವ" ಎಂಬುದೇ ಹೆಣ್ಣಿನ ಆಸೆ.

೩

ಬೈಲಿನಲ್ಲಿ ದುಡಿಯುವ ರೈತ ಅರೋಗ ದೃಢಕಾಯನಾಗಿ ಕಟ್ಟು ಮಸ್ತಾದ ಆಳಾಗಿರುತ್ತಾನೆ. ಅವನ ದೇಹ ಗಾಳಿ ಮಳೆಗೆ ಸಿಕ್ಕಿ ಪಳಗಿ ಕಂಚು ಆಗಿರುತ್ತದೆ. ಅವನ ಸೊಂಟ ತೋಳು ಎಲ್ಲಾ ಬಲಿಷ್ಠವಾಗಿರುತ್ತವೆ.

ಒಂಟೆಯ ಮೇಲೆ ಬರುವ ಬಂಟಾನ ನೋಡಿರೆ
ಎಂಟಾಳಿಗಿಂತ ಚೆಲುವಾನ—ಮದವಣ್ಣನ
ಸೊಂಟ ನೋಡಿ ಹೆಣ್ಣ ಕೊಡಿರಮ್ಮ.
ಆನೆಯ ಮೇಲೆ ಬರುವ ಅರಸಾನ ನೋಡಿರೆ
ಅರಾಳಿಗಿಂತ ಚೆಲುವಾನ—ಮದವಣ್ಣನ
ತೋಳ ನೋಡಿ ಹೆಣ್ಣ ಕೊಡಿರಮ್ಮ.

ಅವನು ಅತಿ ಎಳಕಾದವನೂ ಅಲ್ಲ; ಮುದುಕನೂ ಅಲ್ಲ. ಒಳ್ಳೆಯ ಯುವಕ. "ಹೆಣ್ಣ ಕೊಡಿ ದೇಶಪತಿ ರಾಯರ್ಗೆ ಮಿಾಸಿ ಕಪ್ಪು ಹತ್ತಿ ಬರುವವರಿಗೆ."

ತನಗೆ ಒಳ್ಳೆಯ ಹೆಣ್ಣು ದೊರಕಬೇಕು ಎಂಬುದು ಗಂಡಿನ ಆಸೆ. “ನಿನ್ನಂತ ದುಂಡಿ ನನಗಿಲ್ವೆ” ಎಂಬುದೇ ಒಳ್ಳೆಯ ಹೆಣ್ಣನ್ನು ಕಂಡಾಗ ಅವನ ಪಲ್ಲವಿ. ತನಗೆ ಅನುರೂಪನಾದ ಗಂಡು ಸಿಕ್ಕಬೇಕೆಂಬುದೇ ಹೆಣ್ಣಿನ ಬಯಕೆ. ಹೆಣ್ಣು ಹೆತ್ತವರಿಗೆ ಅದಕ್ಕಿಂತ ಹಿರಿಯ ಸುಖ ಬೇರೆ ಇಲ್ಲ. “ಅಡಿಗೆಯ ಮನೆಯಲ್ಲಿ ಮಡದಿಯ ಸುಳಿವಿಲ್ಲ. ಅಡಿಗೆ ಬಾಯಿಗೆ ರುಚಿ ಇಲ್ಲ. ಮಡದಿ ತವರಿಗೆ ಹೋಗ್ಯಾಳೆ. ಬೇರೆ ಊರಿಗೆ ಹೊರಟ ರಾಯನ ಮುಖ ಯಾಕೆ ಬಾಡಿದೆ. ಹೆಂಡತಿಯನ್ನು ಬಿಟ್ಟು ಪರನಾಡಿಗೆ ಹೊರಟಿದ್ದಾನೆ. ನನ್ನ ಗಂಧದ ರತಿಗಾರ ರುಮ್ಮಾಲೆಲ್ಲ ಪರಿಮಳ, ರಾಯ ಯಾವಾಗ ಬರುತ್ತೀರಿ? ಕಮಲದ ಹೂವೆ ನಿನ್ನ ಕಾಣದೆ ಇರಲಾರೆ, ಮಲ್ಲಿಗೆ ನಿನ್ನ ಮಾಯ ಬಿಡಲಾರೆ, ಕೇದಗೆ ಗರಿ ನಿನ್ನ ಅಗಲಿ ಇರಲಾರೆ. ಹಚ್ಚಡದ ಪದರದಲ್ಲಿ ಅಚ್ಚಮಲ್ಲಿಗೆ ಹೂವ ಬಿಚ್ಚಿ ನನ್ನ ಮೇಲೆ ಒಗೆಯುವ ರಾಯರನ್ನು ಹೇಗೆ ಮರೆಯಲಿ? ಅರಗಿಸಂಥ ನಲ್ಲ ತಿರುಗಿ ಬರದೆ ಹೋದ; ಅರಗಿಣಿ ಹೋಗಿ ಕರೆದುಕೊಂಡು ಬಾ, ಅರಸರ ದರಬಾರದಲ್ಲಿ ಇದ್ದಾರೆ. ಹಾಸಿಗೆ ಹಾಸು ಎಂದ ಮಲ್ಲಿಗೆ ಮುಡಿ ಎಂದ, ಬೇಸತ್ತರೆ ಮಲಗು ಎಂದ. ನನ್ನ ನೋಡಿ ತವರ ಮರೆ ಎಂದ, ನಿಂತು ನೂರೆಲೆಯ ಮಡಿಚು ಎಂದ” ಇಂತಹ ಅನುಕೂಲದಾಂಪತ್ಯ, ಪ್ರೇಮದಾಂಪತ್ಯವೇ ಸ್ವರ್ಗಸುಖ. ಅದರ ಆಸೆಗೇ ಮದುವೆ. ಆ ಪ್ರೇಮದ ಎದುರಿಗೆ ಸಂಸಾರದ ಮುಂದಿನ ಕಷ್ಟಗಳೆಲ್ಲಾ ತೃಣವಾಗಿ ತೋರುತ್ತವೆ. ಪ್ರೇಮದ ಸ್ಫೂರ್ತಿಯನ್ನು ಹೊಂದಿದ ರೈತ ಕೆಚ್ಚೆದೆಯುಳ್ಳವನಾಗಿ ತನ್ನ ಪಾಲಿನ ಕಷ್ಟವನ್ನೂ ಸುಖವನ್ನೂ ಅನುಭವಿಸಲು ಬಂದ ಕೋರಿಯೊಡನೆ ಹೊಸ ಬಾಳನ್ನು ಹೂಡುತ್ತಾನೆ. ಹುಡುಕಿ ಬಯಸಿ ತಂದ ಹುಡುಗಿಯಿಂದ ಅವನು ನಿಜವಾಗಿಯೂ ನಾಲ್ಕು ಭುಜಗಳುಳ್ಳವನೇ ಆಗುತ್ತಾನೆ. ಭಾರವನ್ನು ಸಮವಾಗಿ ಹೊರುವ ಎರಡು ಎತ್ತುಗಳಂತೆ ಗಂಡ ಹೆಂಡರಿಬ್ಬರೂ ಒಬ್ಬರಿಗೆ ಒಬ್ಬರು ಸಮಾನರಾಗಿ ಸಂಸಾರ ರಥವನ್ನು ಎಳೆಯುತ್ತಾರೆ. ಇಂತಹ ಹೆಣ್ಣು ನಮಗಾದೊ ಹಣ್ಣು ನಿಮಗಾದೊ. ಮಾಡಿದ್ದ ಅಡಿಗೆ ಸಭೆಗಾದೊ.

ಇಂತಹ ಮದವಣ್ಣನ ಮದುವೆಯಲ್ಲಿ ಎಲ್ಲಾ ಸಂಭ್ರಮ. "ಎಣ್ಣೆ ಸೀಗೆಕಾಯಿ ಸನ್ನೆನಾಡುತ ಬಂದಿವೆ. ಮದವಣ್ಣ ಇನ್ನೂ ಮಲಗಿದ್ದಾನೆ. ಉಗುರೆಣ್ಣೆ ಹೋಗಿ ಗಗನಕ್ಕೆ ಸೇರಿವೆ. ಮಗನ ಮಂಡೆಲಿ ಒರಗಿವೆ. ಕನ್ನೆಯರಾ ಎಣ್ಣೆ ಒತ್ತಿ. ನಿಮ್ಮ ಕೈ ಬೆರಳು ಚೆನ್ನಿಗರಾಯನ ಎಲೆದೋಟದಲ್ಲಿರುವ ಸೊನ್ನರದ ನವಿಲಿನಂತೆ ಕುಣಿದಾವು. ಅರಸಿನ ಒತ್ತೊರೆ ನಿಮ್ಮ ಕೈ ಬೆರಳು ಸರಸದ ನವಿಲಂತೆ ಕುಣಿದಾವು."

ಮದುವೆಯಲ್ಲಿ ಉಪಯೋಗಿಸುವ ಎಲ್ಲಾ ಸಾಮಾನುಗಳೂ ಶ್ರೇಷ್ಠವಾದವುಗಳೇ ಆಗುತ್ತವೆ.

ಕರಿ ಎಳ್ಳಿನೆಣ್ಣೆ ದುರಗದ ಸೀಗೆಕಾಯಿ
ದೊರೆಗಳ ಸಂಗಡ ಮದವಣ್ಣ—ಮಿಾದ್ನೀರು
ದುರ್ಗಾಕೆ ಕೋಡಿ ಹರಿದಾವು.

ಅಚ್ಚೆಳ್ಳಿನೆಣ್ಣೆ ಗಟ್ಟದ ಸೀಗೆಕಾಯಿ
ಸೆಟ್ಟಿಗೊಳ ಸಂಗಡ ಮದವಣ್ಣ—ಮೀದ್ನೀರು
ಗಟ್ಟಾಕೆ ಕೋಡಿ ಹರಿದಾವು.

ಆಗ ನೀರಿನ ಶಾಸ್ತ್ರವಾಗುತ್ತದೆ.

ಆಲದ ಮಣೆ ಬಂದೊ ಹುವ್ವಿನ ಚೌರಿ ಬಂದೊ
ಹೆತ್ತಮ್ಮ ನೀರ ಹದಮಾಡಿ—ಏನೆಂದಾಳು
ಮುತ್ತಿನ ಬಚ್ಚಲಿಗೆ ನಡೆಯಮ್ಮ.

ಅತ್ತಿಯ ಮಣೆ ಬಂದೊ ಮುತ್ತಿನ ಚೌರಿಗೆ ಬಂದೊ
ಹಡೆದಮ್ಮ ನೀರ ಹದಮಾಡಿ—ಏನೆಂದಳು
ಚಿತ್ರದ ಬಚ್ಚಲಿಗೆ ನಡೆಯಮ್ಮ.

ಮದವಣಿಗ ನೀರು ಹಾಕಿಕೊಳ್ಳುವ ಮಣೆ ಚೆನ್ನಾಗಿರಬೇಕು. ಅಲಂಕಾರವಾಗಿರಬೇಕು. ಬರುವುದು ಸಾವಕಾಶವಾದರೂ ಚಿಂತೆಯಿಲ್ಲ. ಬಂದಾಗ ಚೆನ್ನಾಗಿರಬೇಕು.

ಆಲದ ಮಣೆಗ್ಹೋಳಿ ಆರೇಳು ದಿನವಾಯ್ತು
ಆಲದ ಮಣೆ ಬರಲಿಲ್ಲ—ಬಡಗೀಮನೆ
ಎತ್ತುಬಿಟ್ಟು ಎಮ್ಮೆ ಹೊಡೆತನ್ನಿ.

ಎಮ್ಮೆ ಹೊಡ್ಯೋಕೆ ತಪ್ಪೇನು ತ್ಯಾಗೇನು
ಚಿತ್ರ ತುಂಬೋಕೆ ಬೆಳಗಾದೊ
ಚಿತ್ರಾ ಕೆತ್ತೋಕೆ ಬೆಳಗಾದೊ.

"ಹೆಸರು ಇಲ್ಲದ ತಾವ ಕೆಸರು ಯಾಕೆ ನಿಂತಿತು. ಹೆಸರಿಗೆ ದೊಡ್ಡವರ ಮಗ ವಿಾದ. ಈ ತಾವಿನಲ್ಲಿ ಹಸುರು ಸಂಪಿಗೆ ಸುಳಿ ಒಡೆದೊ."

ಹೀಗೆ ಅತಿ ಸಂಭ್ರಮದಿಂದ ಮದುವೆ ಆಗುತ್ತದೆ. ದಾಸಯ್ಯನಿಗೂ ಅವನ ಅನುಚರರಿಗೂ ಹರಿಸೇವೆ ಸಲ್ಲುತ್ತದೆ. ನಗಾರಿ ಭಾಂಕಿ ತುತ್ತೂರಿ ಶಂಖ ಜಾಗಟೆ ಇವುಗಳ ವಾದ್ಯಗಳೊಡನೆ ಐರಣೆ (ಐದು ಕಲಶಗಳು) ಮೆರವಣಿಗೆಯಾಗುತ್ತವೆ. ಹೆಣ್ಣಿನ ಊರಿಗೆ ಗಂಡು ಬರುತ್ತಾನೆ. ಇದಕ್ಕೆ ಮದುವೆ ಬಂತು ಎನ್ನುವುದೇ ವಾಡಿಕೆ. ಮದುವೆಯ ದಿನವೇ ಹುಡುಗಿಗೆ ಬಳೆತೊಡಿಸಿ ಸ್ನಾನಮಾಡಿಸುತ್ತಾರೆ.

ಕಾಮುಕಸ್ತೂರಿ ಹೂವ ಭೂಮಿ ತಿರುಗಿದರಿಲ್ಲ
ಕೋವಿಲ್ಲಿ ಚೆಲುವೆ ನನ ಮಗಳೆ—ನಿನ ನೋಡಿ
ಭೂಮಿ ತೂಕದ ವರ ಬಂದ.

ಜೋಯಿಸರು ಪಟ್ಟೆ ಕಟ್ಟುವ ಚಿನ್ನದ ತಗಡನ್ನು ಎಲ್ಲರ ಕೈಯಲ್ಲೂ ಮುಟ್ಟಿಸಿ ಅದಕ್ಕೆ ಆಶೀರ್ವಾದವನ್ನು ಗಳಿಸುತ್ತಾರೆ. ಸಾಮಾನ್ಯವಾಗಿ ಗಂಡಿನವರು ಬಂದು ಊರ ಮುಂದಿನ ಆಂಜನೇಯನ ದೇವಸ್ಥಾನದಲ್ಲಿ ಇಳಿದುಕೊಳ್ಳುವುದು ಪದ್ಧತಿ. ದೇವಸ್ಥಾನದಲ್ಲಿ ಮಂಗಳಾರತಿಗೆ ಆ ದಿವಸ ಪೂಜಾರಿಗೆ ಸ್ವಲ್ಪ ಹೆಚ್ಚಿನ ಸಂಭಾವನೆ. ಪೂಜಾರಿಗೆ ಮದುವೆಯ ದಿನ ಮಾಡಬೇಕಾದ ಕರ್ತವ್ಯ ಇಷ್ಟು ಎಂಬುದೂ ವಿಧಾಯಕವಾಗಿರುತ್ತದೆ. ಅನಂತರ ವಸ್ತ್ರಗಾರಪೆಟ್ಟಿಗೆ ಬುವ್ವದಪೆಟ್ಟಿಗೆ ಅಡ್ಡಪೆಟ್ಟಿಗೆ ಇವುಗಳ ಮೆರವಣಿಗೆ ಆಗುತ್ತದೆ. ಈ ಪೆಟ್ಟಿಗೆಯಲ್ಲಿ ಗಂಡಿನ ಕಡೆಯವರು ಹೆಣ್ಣಿಗೆ ಕೊಡಬೇಕಾದ ಎಲ್ಲಾ ಉಡುಗೆರೆಗಳನ್ನೂ ಇಟ್ಟಿರುತ್ತಾರೆ.

ವಾಲೆಯ ತಂದೀವಿ ವಾಲೆಯ ನೋಡ್ಕೊಳ್ಳಿ
ವಾಲೆಯ ಮೇಲೆ ಬರಕೊಳ್ಳಿ—ವಾಲೆಯ
ವಸ್ತ್ರಾಗರ ಪೆಟ್ಗೇಲಿ ಇರ್ಸೀವಿ.

ಬುಗ್ಡೀಯ ತಂದೀವಿ ಬುಗ್ಡಿಯ ನೋಡ್ಕೊಳ್ಳಿ
ಬುಗ್ಡೀಯ ಮೇಲೆ ಬರ್ಕೊಳ್ಳಿ—ಈ ಮನೆಯ
ವಸ್ತ್ಾಗ್ರ ಪೆಟ್ಗೀಲಿ ಇರ್ಸೀವಿ.

ಗುಂಡೂ ತಂದೀವಿ ತಾಲಿಯ ತಂದೀವಿ
ತಾಲಿಯ ಮೇಲೆ ಬರ್ಕೊಳ್ಳಿ—ನಿಮ್ಮನೆ
ಪಾಲಿಗೆ ನೀವು ಇಟ್ಕೊಳ್ಳಿ.

ವರಸು ಹಣೆಗೆ ಬಾಸಿಂಗವನ್ನು ಕಟ್ಟಿಕೊಂಡು ಕೈಯಲ್ಲಿ ಕಠಾರಿ ಹಿಡಿದು ಅದರ ತುದಿಗೆ ಒಂದು ನಿಂಬೆ ಹಣ್ಣು ಸಿಕ್ಕಿಸಿರುತ್ತಾನೆ. ಬಾಗಿಲಿನಲ್ಲಿ ಚೆನ್ನಾಗಿ ಹಸೆ ಬರೆದು ಅಲಂಕಾರವಾದ ಸ್ಥಳದಲ್ಲಿ ಧಾರೆ ಹುಯ್ಯುತ್ತಾರೆ. "ಹಸೆಯ ಬರಿಯೋರ್ಮನ್ನಿ ಕಸವಿಲ್ಲ ಮುಸುರೆ ಇಲ್ಲ, ಹಸಿಯಡಕೆ ಸಿಪ್ಪೆ ಮೊದಲಿಲ್ಲ. ಹಸೆಯ ಬರಿಯೋರು ಕುಸಲಿಸಿ ಬರೀರಮ್ಮ. ಸಣ್ಣಮುತ್ತಿನ ತಳಿ ಕೊಡಿ ಈ ಮನೆಯ ಸಿಸು ಕುಳ್ಳಿರುವ ಜಗಲಿಗೆ."

ಸಣ್ಣಕ್ಕಿ ಹಸೆಯ ಚೆನ್ನಾಗಿ ಬರೀರಮ್ಮ
ಚಿನ್ನದ ಗೊಂಡೆಯ ನೆರಿಗ್ಯೋರು
ಚಿನ್ನದ ಗೊಂಡಿಯ ನೆರಿಗ್ಯೊಳೆ ಸರಸತಿಯೆ
ಚೆನ್ನಾಗಿ ತುಂಬೆ ಚೌಕವ.
ಚೌಕ ತುಂಬ್ಯಾರೆ ಕಲಕಲನೆ ನಕ್ಕಾರೆ
ಅದ್ಕೆ ಹೊಸಮುತ್ತು ಬೆರಸ್ಯಾರೆ
ಅದ್ಕೆ ಹೊಸಮುತ್ತ ಏನೆಂದು ಬೆರಸ್ಯಾರೆ
ಮಾವನ ಮಗ ಬರ್ಲೆಂದು.
ಮಾವನ ಮಗ ಬರಬೇಕವನ ಕೈಯ
ಹೂವಿನುಂಗರವ ಗೆಲಬೇಕು
ಅತ್ತೆಯ ಮಗ ಬರಬೇಕವನ ಕೈಯ
ಮುತ್ತಿನುಂಗರವ ಗೆಲಬೇಕು.

ಬಾಗಿಲಿಗಿದಿರಾಗಿ ಬರೀರಮ್ಮ ಹಸೆಗೊಳ
ಬಾಗಿಲಲ್ಲಾವೆ ಗಿಳಿಗೋಳು—ನಮ್ಮಾನೆ
ಭಾಗ್ಯದಾ ನುಡಿಯ ನುಡಿದಾವು.

ಕಂಭಕ್ಕಿದಿರಾಗಿ ತುಂಬಿರಿ ಹಸೆಗೊಳ
ಕಂಭದಲ್ಲಾವೆ ಅರಗಿಣಿ—ನಮ್ಮನೆಯ
ಪುಣ್ಯದ ನುಡಿಯ ನುಡಿದಾವು.

ಇಂತಹ ಹಸೆಯಮೇಲೆ ಚಿತ್ರಕೆತ್ತಿದ ಮಣೆ. ಸಾಮಾನ್ಯವಾದ ಕಾಲದಲ್ಲಿ ರೈತನ ಮನೆಗೆ ನಾವು ಯಾರಾದರೂ ಕುಳಿತುಕೊಳ್ಳುವುದಕ್ಕೆ ಹೋದರೆ "ಮಣೆ ಹಾಕಿರ್ಲ" ಎಂದು ಹೇಳಿ ನಾಲ್ಕು ಅಥವಾ ಐದು ಅಂಗುಲ ಅಗಲದ ಒಂದು ಮಣೆಯ ಚೂರನ್ನು ನಮ್ಮ ಮುಂದಕ್ಕೆ ಎಸೆಯುತ್ತಾನೆ. ಅದು ಸಾಧಾರಣವಾಗಿ ಒಂದು ಸಣ್ಣ ಸ್ಲೇಟಿಗಿಂತ ದೊಡ್ಡದಾಗಿರುವುದಿಲ್ಲ. ನಾವು ಅದರ ಮೇಲೆ ಕೂರುವುದಿಲ್ಲ ಎಂಬುದಾಗಿ ಪ್ರಮಾಣ ಮಾಡಿದರೂ ಕೇಳದೆ ಅವನು ಅದರ ಮೇಲೆಯೇ ನಮ್ಮನ್ನು ಕೂರಿಸುತ್ತಾನೆ. ಒಂದೆರಡು ನಿಮಿಷಗಳಲ್ಲಿ ಆ ಸರ್ಕಸ್ಸಿನಿಂದ ನಮಗೆ ಸಾಕಾಗಿ ಹೋಗುತ್ತದೆ. ಅವನ ಹತ್ತಿರ ನಾವು ಆಡಬೇಕಾದ ಮಾತುಗಳು ಇನ್ನೂ ಹೆಚ್ಚಾಗಿದ್ದರೂ ಆ ಶೂಲದ ಮೇಲೆ ಕುಳಿತುಕೊಳ್ಳಲಾರದೆ ನಾವು ಬೇಗ ಮೇಲಕ್ಕೆ ಎದ್ದುಬಿಡುತ್ತೇವೆ. ಆದರೆ ಮದುವೆಯ ಕಾಲದಲ್ಲಿ ಇಷ್ಟು ಕಷ್ಟವಾದ ಮಣೆ ಹಾಕುವುದಿಲ್ಲ.

ಮದುವೆಯಂತಹ ಸಮಾರಂಭದಲ್ಲಿ ಮಣೆಯನ್ನು ಸುಮ್ಮನೆ ಹತ್ತಲು ಮುತ್ತೈದೆಯರು ಅವಕಾಶಕೊಡುವುದಿಲ್ಲ. ಆಗ ಒಂದು ಹಾಡು ಆಗಲೇ ಬೇಕು.

ಮಣೆಯ ಹತ್ತುವಾಗ ಮನೆಯೋರ ನೆನಕೊಂಡು
ಮನೆಯೋರ ಪಾದಾ ನೆನಕೊಂಡು—ಗೌಡ್ನ
ಶಿಶುವೆ ಬಾರ ಹಸೆಯ ಜಗಲೀಗೆ.

ಹಸೆಯ ಹತ್ತುವಾಗ ಋಷಿಗಳ ನೆನಕೊಂಡು
ಋಷಿಗಳ ಪಾದ ನೆನಕೊಂಡು—ರಾಮನ
ಸಿಸುವೆ ಬಾರ್ಹಸೆಯ ಜಗಲೀಗೆ.

ಸಂಸಾರದಲ್ಲಿ ಗಂಡಹೆಂಡಿರು ಒಂದು. ಯಾರು ಯಾರನ್ನು ಬಿಟ್ಟರೂ ಗಂಡ ಹೆಂಡತಿಯನ್ನೂ ಹೆಂಡತಿ ಗಂಡನನ್ನೂ ಬಿಡುವಂತೆ ಇಲ್ಲ. ಅಲ್ಲದೆ

ಗಂಡು "ಹೆಣ್ಣಿಗಾಗಿ ಬಹು ದೂರ ಬಂದಿದ್ದೇನೆ. ಎಲ್ಲರನ್ನೂ ಬಿಟ್ಟಿದ್ದೇನೆ" ಎನ್ನುತ್ತದೆ—ಹೆಣ್ಣೂ ಹಾಗೆಯೇ ಹೇಳುತ್ತದೆ.

ಹಟ್ಟಿ ಕಲ್ಲು ದಾಟಿ ಹರಿಯ ಸಮುದ್ರ ದಾಟಿ
ಮತ್ತೆ ಜಾನಕಿ ಮನೆ ದಾಟಿ—ಬಂದಿವ್ನಿ
ಅತ್ತೆಯ ಮಗಳೆ ಮೊಕ ತೋರೆ
ಅತ್ತೆಯ ಮಗಳೆ ಮೊಕ ತೋರೆ ನಿನ್ನಿಂದ
ತಾಯಿ ತಂದೆಯ ತೊರೆದಿವ್ನಿ.

ಅದಕ್ಕೆ ಹೆಣ್ಣು ಸಹ ಅದೇ ರೀತಿಯ ಪ್ರತ್ಯುತ್ತರ ಕೊಡುತ್ತದೆ.

ಹಾದಿ ಕಲ್ಲು ದಾಟಿ ಹತ್ತು ಸಮುದ್ರದಾಟಿ
ಮತ್ತೆ ಜಾನಕಿ ಮನೆ ದಾಟಿ—ಬಂದಿವ್ನಿ
ಅತ್ತೆಯ ಮಗನೆ ಮೊಕ ತೋರೊ
ಅತ್ತೆಯ ಮಗನೆ ಮೊಕ ತೋರೊ ನಿನ್ನಿಂದ
ತಾಯಿ ತಂದೆಯ ತೊರೆದಿವ್ನಿ.

ಗಂಡು ಹೆಣ್ಣುಗಳು ಹೇಗಿದ್ದರೂ ಬೀಗಿತ್ತಿಗಳ ಬಿಗುಮಾನ ಕಡಿಮೆಯಾಗುವುದೆ? "ಹೆಣ್ಣಿನವ್ನ ಕಿವಿಗೆ ರಾಗಿಕಲ್ಲನ್ನು ಇಕ್ಕಿಸುತ್ತೇನೆ, ಬರ ಹೇಳಿ. ಅಕ್ಕಿಕೊಮ್ಮೆಗೆ ಬಿಟ್ಟಿಟ್ಟು ನೋಡೋಳೆ ಹಟ್ಟಿಗೆ ಮನೆಗೆ ತಿರುಗೋಳೆ. ಬೀಗಿತ್ತಿ, ನಾವು ಹತ್ತೇ ಜನ ಕಣೆ ಅಳಬೇಡ. ಬೇಳೆ ಕೊಮ್ಮೆಗೆ ಬಿಟ್ಟಿಟ್ಟು ನೋಡೋಳೆ ಬೀದಿಗೆ ಮನೆಗೆ ತಿರುಗೋಳೆ, ಬೀಗಿತ್ತಿ, ನಾವಾರೇ ಜನ ಕಣೆ ಅಳಬೇಡ." ಬೀಗಿತ್ತಿಯ ಯೋಗ್ಯತೆ ತೋರಿಸುವುದಕ್ಕೆ ಅವಳು ಇಲಿಯ ಸುಂಡನ ಮೇಲೆ ಒಂದು ಖಂಡುಗ ಅಕ್ಕಿ ಹೇರಿದಳೆಂದು ಹಾಸ್ಯಮಾಡುತ್ತಾರೆ.

ಚೂಜಿ ತೋರಾಕೆ ಚೂಜಿಯ ಉದ್ದಾಕೆ
ಬಗ್ಗಿ ಬಗ್ಗಿ ತುಪ್ಪ ಬಿಡುವೊಳೆ—ಬೀಗಿತ್ತಿ
ನಿನ್ನಾಣೆ ನಾವು ಉಣಲಿಲ್ಲ.
ನಮ್ಮ ಬೀಗುತಿ ಒಳ್ಳೆವಳು ಅನುತಿದ್ದೆ
ಕಳ್ಳಿ ದೊಣ್ಣೆ ಅವಳ ಹೆಗಲಲ್ಲಿ—ಇಟ್ಕೊಂಡು
ಕಳ್ಳರ್ಮಾಡವ್ರೆ ಮದುವೆಯ.

ಬೀಗಿತಿಯ ತಳಕನ್ನೂ ಹಾಸ್ಯಮಾಡದೆ ಬಿಡಲಿಲ್ಲ.

ಬೀಗಿತ್ತಿ ಬೀಗಿತ್ತಿ ಓಲೆಲ್ಲಾ ಸೈಕಾಣೆ
ಕೋಣೆಲಿ ಗುಂಡಿ ಮೊಳದುದ್ದ—ಬೀಗಿತ್ತಿ
ಮಣ್ಣ ಕೊಟ್ಟೇನು ಒರಕೊಳ್ಳಿ—ಸುಣ್ಣ ಕೊಟ್ಟೇನು ಸಾರಿಸಿಕೊಳ್ಳಿ.

ಬೀಗುತಿ ಬೀಗುತಿ ಓಲೆಲ್ಲಾ ಸೈಕಣೆ
ಮಾಡೋಕೆ ಒಂದು ಮಡಕಿಲ್ಲ—ಬೀಗಿತಿ
ಕುಂಬಾರ್ರುಗ್ಗ ನಿನ್ನುಗ್ಗ ಮೊಕಮುನಸೆ.

ಗಂಡಸ್ನೂ, ಗಂಡಿನ ಕಡೆಯವರನ್ನೂ ಈ ಹಾಸ್ಯದಲ್ಲಿ ಬಿಡುವುದಿಲ್ಲ.

ಓಲೆ ತರ್ತೀನೆಂದು ಬಹಳ ಓಡಿಹೋದ
ಓಲೆಯ ತರುವ ಪೋಲುಮೋರೆಯ ಯಾರೂ ಕಾಣರೊ
ಗುಂಡು ತರ್ತೀನೆಂದು ಬಹಳ ಓಡಿಹೋದ
ಗುಂಡು ತರುವ ಗಂಡು ಮೋರೆಯ ಯಾರು ಕಾಣರೊ
ಹರಡಿ ತರ್ತೀನೆಂದು ಬಹಳ ಓಡಿಹೋದ
ಹರಡಿ ತರುವ ಕರಡಿ ಮೋರೆ ಯಾರು ಕಾಣರೊ.

೩೯

ಹೆಣ್ಣು ಹುಟ್ಟಿದ ಕಾಲದಿಂದಲೂ, ಇವಳನ್ನು ಒಳ್ಳೆಯ ಮನೆಗೆ ಕೊಟ್ಟೇವೆ ಎಂಬುದೇ ತಾಯಿತಂದೆಗಳ ಯೋಚನೆಯಾಗುತ್ತದೆ. ಮಗು ಹುಟ್ಟಿದಾಗ ಈ ಚಿಂತೆ ಪ್ರಾರಂಭವಾಗಿ, ಅವಳಿಗೆ ಮದುವೆಯಾಗಿ ಅವಳು ಗಂಡನ ಮನೆ ಸೇರಿ ಗಂಡನೊಂದಿಗೆ ಸರಿಯಾಗಿ ಬಾಳಲು ಪ್ರಾರಂಭಿಸುವ ವರೆಗೆ ಇದ್ದೇ ಇರುತ್ತದೆ. ಹೆಣ್ಣು ಎಂದರೆ ಒಂದು ಚಿಂತೆ. "ಹೆಣ್ಣು ಹುಟ್ಟಿತು ಎಂದು ಹೇಳಿ ಕಳುಹಿಸಬೇಡ, ಹೆಣ್ಣು ಎಂದರೆ ಅವರು ಹೆದರುತ್ತಾರೆ; ಹೆಣ್ಣಲ್ಲ, ನಮಗೆ ರವಿಚಿನ್ನ. ಹೆಣ್ಣು ಹುಟ್ಟಿದ ಮನೆ ಹೆಗ್ಗಣ ಹತ್ತಿದ ಹಾಗೆ; ಗಂಡಸು ಮಗ ಗಜಭೀಮ; ಹುಟ್ಟಿದರೆ ಚಿಲಕ ಚಿತ್ತರ ನಗುತಾದೆ." ಎಂಬ ಮಾತು ತಾಯಿತಂದೆಗಳ ಭಯವನ್ನು ಸೂಚಿಸುತ್ತದೆ. ಹೆಣ್ಣಿಗೆ ಸರಿಯಾದ ವರ ಸಿಕ್ಕದಿದ್ದರೆ ತಾಯಿತಂದೆಗಳಿಗೆ ಅದಕ್ಕಿಂತ ಹೆಚ್ಚಿನ ದುಃಖ ಮತ್ತೇನು ಬೇಕು.

ಒನಕೆ ಒಳ್ಳೇದವ್ವ ಒಲಿದು ಕುಟ್ಟುವರಿಲ್ಲ
ಸೀರೆ ಒಳ್ಳೇದವ್ವ ಸೆರಗಿಲ್ಲ—ಹೆಣ್ಣಿನ
ಗುಣ ಒಳ್ಳೆದವ್ವ ರುಣವಿಲ್ಲ.

ಒಳ್ಳೆಯ ಹೆಣ್ಣಿಗೆ ಸರಿಯಾದ ಗಂಡು ದೊರಕದಿದ್ದರೆ ಗುಡ್ಡದ ಕಲ್ಲಿಗೆ ಧಾರೆ ಎರೆದ್ಹಂಗೆ. ಹೆಸರು ಬೇಳೆಯನೊಯ್ದು ಕೆಸರಲ್ಲಿ ಚೆಲ್ಲಿದಂತೆ.

ಹೆಣ್ಣನ್ನು ಚೆನ್ನಾಗಿ ಬಾಳಿಸದವನಿಗೆ ಸಮಾಜದಲ್ಲಿ ಪುರಸ್ಕಾರವಿಲ್ಲ. "ಒಳ್ಳೆಯ ಅಡಕೆಗೆ ಎಲ್ಲಿತ್ತು ತರಗೆಲೆ; ಸೆಲ್ಲಿಕಾಯಿನಂತ ಬಟವಾನ ಹುಡುಗಿಗೆ ಎಲ್ಲಿದ್ನೋ ಜೋಗಿ ದರವೇಸಿ. ಕರಿಯ ಕಂಬಳಿ ತಂದು ಹೊದೆಯಲಾರದ ಮೇಲೆ ಅದ್ಯಾಕೆ ತಂದೆ ದರವೇಸಿ. ಕಂಡೋರ ಹೆಣ್ಣ ಮದ್ವ್ಯಾಗಿ ಗೋಳ ಹುಯ್ಕೊಂಡ್ಯ." ಅರಸಿಕನಾದ ಗಂಡನಿಗೆ ರಸಿಕಳಾದ ಹೆಣ್ಣು ಸಿಕ್ಕಿದರೂ ವ್ಯರ್ಥ. ಅವಳ ಬೆಲೆ ಅವನಿಗೆ ತಿಳಿಯುವುದಿಲ್ಲ.

ಕುಂಬಾರನಿಗ್ಯಾಕೊ ಗೊಂಬೆ ಮಾಟದ ಹೆಣ್ಣು
ತುಂಬೆಂದ ಮಣ್ಣ ತುಳಿಯೆಂದ—ಮನೆಮನೆಗೆ
ಹೊತ್ತು ಮಾರೆಂದ ಹೊಸಮಡಕೆ.

೬

ಹೆಣ್ಣಿಗೆ ತವರುಮನೆ ಎಂದರೆ ಅತಿ ಪ್ರೀತಿ, ಅತಿ ಆಸೆ. ತಾಯನ್ನು ಬಿಟ್ಟು ಹೋಗುವುದು ಮಗಳಿಗೆ ಬಹಳ ಕಷ್ಟ. "ಹೆತ್ತಮ್ಮ ನೀ ಇದ್ದರೆ ನಮಗೆ ಸಾಮ್ರಾಜ್ಯ. ಕಡಗ ಇಲ್ಲದ ಕೈ ಕರುಣ ಇಲ್ಲದ ಪುರುಷ ಹಡೆದಮ್ಮ ಇಲ್ದ ತವರು ಇವು ಮೂರು ಅಡವಿಯಲ್ಲಿ ವಸತಿ ಬಿಟ್ಟಂತೆ. ತಾಯಿಯ ಕಾಣದೆ ಜೀವ ತಾವೂರಿ ಬಾವೂರಿ ಭಾರಿಯ ಬಿಸಲಿಗೆ ಅವರೆಯ ಹೂವಿನ ಹಾಗೆ ಬಾಡತೀನಿ, ಕರದೊಯ್ಯೆ ತಾಯಿ. ಯಾರು ಇದ್ದರೆ ತಾನೆ ತಾಯಿಯಂತೆ ಆದಾರೊ; ಸಾವಿರ ಸೌದೆ ಒಲೆಯಲ್ಲಿ ಉರಿದರೂ ದೀವಿಗೆಯ ಬೆಳಕುಂಟೆ. ತಂದೆಯನ್ನು ಜ್ಞಾಪಿಸಿಕೊಂಡರೆ ತಂಗಳವು ಬಿಸಿ ಯಾಯ್ತು; ಗಂಗಾದೇವಿ ತಾಯಿಯನ್ನು ಜ್ಞಾಪಿಸಿಕೊಂಡರ ಮಾಸಿದ ತಲೆ ಮಡಿಯಾಯ್ತು. ತಾಯಿಯ ಮನೆಗೆ ಹೋಗಿ ಬಾಯಿ ಬೇಡಿದುದ ಉಂಡೆ, ಶ್ಯಾವಿಗೆ ಉಂಡೆ; ಹಡೆದವ್ನ ಮೋರೆ ನೋಡಿ ಉಂಡೆ ಮೊಲೆಹಾಲ.

ತಾಯಿ ಕಟ್ಟಿದ ಬುತ್ತಿ ತರತರದ ಯಾಲಕ್ಕಿ. ತಾಯಿಲ್ದ ತವರಿಗೆ ಹೋದರೆ ನೀರಿಲ್ದ ಕೆರೆಗೆ ಕರ ಹೋದಂತೆ; ಹಣ್ಣಿಲ್ದ ಮರಕೆ ಕಣ್ಣಿಲ್ದ ಗಿಳಿ ಹೋದಂತೆ. ಉಂಗುರ ಉಡಿದಾರ ಮುರಿದರೆ ಮಾಡಿಸಬಹುದು. ಮಡದಿ ಸತ್ತರೆ ತರ ಬಹುದು ; ಆದರೆ ಹಡೆದ ತಾಯಿತಂದೆ ಎಲ್ಲಿ ಸಿಕ್ಕಿಯಾರು ? ಹಣ್ಣು ಹಾಲಿ ಗಿಂತ ಬೆಣ್ಣೆ ತುಪ್ಪಕ್ಕಿಂತ ಚೆನ್ನಾಗಿ ಕಳಿತ ರಸಬಾಳೆ ಹಣ್ಣಿಗಿಂತ ತಾಯಿಯ ಎದೆಹಾಲು ಕಡು ರುಚಿ. ತವರೂರು ದಾರೀಲಿ ಕಲ್ಲಿಲ್ಲ, ಮುಳ್ಳಿಲ್ಲ, ಸಾಸಿವೆ ಯಷ್ಟು ಮರಳಿಲ್ಲ ; ಬಿಸಿಲಿನ ಬೇಗೆಯೂ ಸುಡಲಿಲ್ಲ. ತವರು ಇಲ್ಲದ ಮೇಲೆ ಈ ಜನ್ಮ ಇರಬಾರದು ; ಹೊಳೆಯ ಕರೆಗೆ ಹೋಗಬೇಕು, ಗಂಗೆಯಲ್ಲಿ ಮುಳುಗಬೇಕು. ತಾಯಮ್ಮ ಎಂಬೋಳು ದೇವಲೋಕದ ಮನಸ; ಕಾಶಿಗೆ ಹೋಗುವುದಕೆ ಏಟು ಹೊತ್ತು ಬೇಕು. ಕಾಶಿ ಕುಂತವ್ಲೆ ಮನೆಯಾಗ.” ಈ ಮೇಲಿನ ಕಾವ್ಯ ತವರುತಾಯಿ ಎಂದರೆ ಎಷ್ಟು ಮಮತೆ ಎಂಬುದನ್ನು ವ್ಯಕ್ತಪಡಿಸುತ್ತದೆ.

೭

ಹೆಣ್ಣಿಗೆ ಅಣ್ಣ, ತಮ್ಮ, ಅಕ್ಕ, ತಂಗಿ ಎಲ್ಲರೂ ಹಿತವಾಗಿದ್ದರೆ ಸಂಸಾರ ಚೆನ್ನಾಗಿರುತ್ತದೆ. ತಮ್ಮನನ್ನು ಕಂಡರೆ ಹೆಣ್ಣಿಗೆ ಪ್ರೀತಿ ಹೆಚ್ಚು. ಅವನ ಚೆಲುವು, ಠೀವಿ, ಅಲಂಕಾರ, ಧೀರತೆ ಇವುಗಳನ್ನು ಎಷ್ಟು ಹೊಗಳಿದರೂ ಅವಳಿಗೆ ತೃಪ್ತಿ ಇಲ್ಲ. “ಚೆಲುವ ನನ್ನ ತಮ್ಮ ನೆರಗಲ್ಲಿ ಮುಖ ತೊಳೆಯೊ, ಉಗುರಲ್ಲಿ ಗಂಧ ಹದಮಾಡೊ, ಚದುರೇರು ಬರ್‍ತಾರೆ ನಜರೀರೊ. ಕೆಂದೆತ್ತು ಕೈಯಾಗ ಕೆಂಪಂಗಿ ಮೈಯಾಗ ಚಂದರು ಬಾವಲಿ ಕಿವಿಯಾಗ ಇಟ್ಕೊಂಡು ತಂಗಿಯರ ಕರೆಯೆ ಬರುತಿದ್ದ. ರುಮ್ಮಾಲು ಸುತ್ತ್ಯಾನು ಚುಂಗ ಬಿಟ್ಟ್ಯಾನು ಝುಮಕೀಲಿ ; ಅಣ್ಣಯ್ಯ ನಿನ್ನ ಚುಂಗಿಗೆ ಸೂಳೆ ಮರು ಳಾದಳು. ಹೆಣ್ಣಿನ ಜನುಮಕ್ಕೆ ಅಣ್ಣತಮ್ಮದಿರು ಬೇಕು, ಸಭೆಯೊಳಗೆ ಬೆನ್ನ ಕಟ್ಟುವವರು ಉಡಿಯೊಳಗೆ ಸಾವಿರ ಹೊನ್ನ ಕಟ್ಟುವವರು ಬೇಕು. ಅವರಿಗೆ ಅವರಣ್ಣ ಅವಲಕ್ಕಿ ಕಳುಹಿದ ನಮ್ಮಣ್ಣನೇನು ಬಡವೇನೆ; ಕ್ಯಾದಿಗಿ ಗರಿಯೊಳಗೆ ಸೀರೆ ಕಳುಹಿಸಿದಾನೆ. ಕುದುರೆಯ ಕುಣಿಸುತ್ತ ಕುಂಕುಮ ಚೆಲ್ಲುತ್ತ ಅರಗಿಣಿಗೆ ಮಾತ ಕಲಿಸುತ್ತ ಅಣ್ಣ ಬರುತಾನೆ. ನನ್ನ

ತಮ್ಮ ಸರದಾರ ಬರುವಾಗ ಮಲ್ಲಿಗೆ ಸುರಿದಾವು, ಯಾಲಕ್ಕಿ ಗೊನೆಬಾಗಿ ಹಾಲುಸುರಿದಾವು. ಕರಿಯ ಸೀರೆಯನ್ನುಟ್ಟು ಕೆರೆಯ ಸೀರಿಗೆ ಹೋದೆ; ನನ್ನ ಮೋಜಿನ ಅಣ್ಣ ಉಡಿಸಿದ ಸೀರೆಯ ಬೆಲೆಯನ್ನು ಬಲುಮಂದಿ ಕೇಳಿದರು. ಬಾಳೆಯ ಗೊನೆ ಹಂಗೆ ತೋಳ ತಿರುವುತ ತಮ್ಮ ಬಂದ. ಅಣ್ಣನು ಸಾಮಾನ್ಯನಲ್ಲ. ಅತ್ತೆಮನೆಯವರನ್ನು ಹೆದರಿಸುತ್ತಾನೆ. ಅತ್ತೆಯ ಮನೆ ಸುದ್ದಿ ತವರಿಗೆ ಹತ್ತಿವೆ. ನನ್ನಣ್ಣ ಬಹಳ ಸಿಟ್ಟಿನವನು. ಕೇಳಿ ಮರಿ ಗುದುರೆ ಬಿಟ್ಟುಕೊಂಡು ಇಲ್ಲಿ ಬರುತ್ತಾನೆ. ಕೈಯಲ್ಲಿ ಕೆಂದೆತ್ತು ಮೈಯಲಿ ಕೆಂಪಂಗಿ ರುಮ್ಮಾಲು ಸುತ್ತಿ ಝುಮಕೀಲಿ ಚುಂಗಬಿಟ್ಟ ತಮ್ಮ. ಅಣ್ಣ ತಂಗಿಯನ್ನು ಕಳುಹಿಸಿ ತೆಪರೇರಿ ನಿಂತು ಅಂಗೀಲಿ ಕಣ್ಣ ನೀರ ಒರಸುತ್ತಾ ತಂಗಿ ಇಂದಿಗೆ ಎರವು ಎಂದ.''

ಇನ್ನು ತಂಗಿಯೋ—

ತಂಗಿ ತಂಗಿ ಬಾರ ತಂಬೂಲ ತುಟಿ ಬಾರ
ಸೆಟ್ಟಿ ಸಾಹುಕಾರ ಸೊಸಿ ಬಾರ—ನನ ತಂಗಿ
ಭಂಗಾರ ಬಾರ ಬಯಲೀಗೆ.

ಅಚ್ಚಮಲ್ಲಿಗೆ ಹೂವ ಮುಚ್ಚಿಮಾರುವ ಜಾಣ
ನಾ ಕೊಳುವೆನಿದರ ಬೆಲೆ ಹೇಳೊ—ತಂಗಿಗೆ
ಸುರಳಿಗೂದಲಿನ ಸುಗುಣೆಗೆ.

ಎಂತಹ ತವರು ಇದ್ದರೆ ತಾನೆ ಏನು? ಹೆಣ್ಣಿಗೆ ಮುಖ್ಯವಾದುವು ಗಂಡನ ಮನೆ. ಎಷ್ಟು ಕಷ್ಟಪಟ್ಟುಕೊಂಡಿದ್ದರೂ ಚಿಂತೆಯಿಲ್ಲ. ಗಂಡನ ಮನೆ ಯಲ್ಲಿರಬೇಕು. "ಸಾವಿರ ಕೊಟ್ಟರೂ ಸೋದರದ ಮನೆಬೇಡ. ಸಾವಿರದ ಮೇಲೆ ಐನೂರು ಕೊಟ್ಟರೂ ಮಲಮಕ್ಕಳಿರುವ ಮನೆ ಬೇಡ. ಗಂಜಿಯ ಕುಡಿದರೂ ಗಂಡನ ಮನೆ ಲೇಸು; ಅಂದಣದ ಮೇಲೆ ಚವರೀಯ ಬೀಸಿ ದರು ಹಂಗಿನ ತವರುಮನೆ ಸಾಕು. ಅಣ್ಣ ಬಾಳಿದರೇನು ತಮ್ಮ ಬಾಳಿದ ರೇನು ತನ್ನ ಕೈಹಿಡಿದ ಪುರುಷ ಬಾಳಿದರೆ ಉಣಲಕ್ಕು ಭಾಗ್ಯ ತಿನಲಕ್ಕು.'' ಅಂತಹ ಗಂಡ ಬಾಳಿದರೆ "ಕಮಲದ ಹೂವೆ ನಿನ್ನ ಕಾಣದೆ ಇರಲಾರೆ. ಮಲ್ಲಿಗೆ ಮಾಯ ಬಿಡಲಾರೆ ಕೇದಗೆ ಗರಿ ನಿನ್ನ ಅಗಲಿ ಇರಲಾರೆ'' ಎಂದು

ಹೆಂಡತಿಯನ್ನು ಪ್ರೀತಿಸುತ್ತಾನೆ. ಹಚ್ಚಡದ ಪದರದಲ್ಲಿ ಮಲ್ಲಿಗೆ ಹೂವನ್ನು ಮುಚ್ಚಿ ತಂದು ಕಾಡಿಗೆಗಣ್ಣ ನಡುಸಣ್ಣಗಿನ ನಲ್ಲೆಯಮೇಲೆ ಒಗೆಯುತ್ತಾನೆ. ಗಂಧದ ರತಿಗಾರನಾಗಿ ರುಮ್ಮಾಲು ಎಲ್ಲ ಪರಿಮಳಹೊಂದಿ ನಗರದ ದರಬಾರಿನಲ್ಲಿ ಇರುತ್ತಾನೆ. "ಜಾತ್ರೆಗೆ ಹೋದವರು ಬರಲಿಲ್ಲ. ಜೀವ ತಳಮಳಗುಟ್ಟುತ್ತಿದೆ. ರಾತ್ರಿ ಹೆಂಗೆ ಕಳೆಯಾಲಿ. ಸರದಾರ ನಿಮ್ಮಿಂದ ಸರ್ವವನ್ನು ಮರೆತೆ, ನಿಮ್ಮಿಂದ ಸರ್ವ ಬಳಗವನ್ನೂ ಮರೆತೆ." ಎಂದು ಯಾವಾಗಲೂ ಹೆಂಡತಿಯಿಂದ ಹೇಳಿಸುತ್ತಿರುತ್ತಾನೆ. "ಸಾರಿಸಿದ ಮನೆಯೊಳಗೆ ವಾರಿಗೆ ರಾಯ ಒಳಗೆ ಹೊರಗೆ ಸುಳಿದರೆ ಕಾಲಿಗೆ ವಜ್ರ ಬಿಗಿದ್ಹಂಗೆ ಆಗುತ್ತದೆ." ರಾಯ ಮುಖ್ಯವಾಗಿ ವಾರಿಗೆಯವನಾಗಿರಬೇಕು. ಮುದುಕನಾಗಿರಬಾರದು. ಎಳೆಪ್ರಾಯದವನಾಗಿರಬೇಕು. ಇಂತಹ ಚಿಕ್ಕಪ್ರಾಯದ ರಾಯ ಬಡವನಾದರೆ ತಾನೆ ನಷ್ಟವೇನು? ಐಶ್ವರ್ಯವಂತನಾದ ಮುದುಕನಿಗಿಂತ ಬಡವನಾದ ವಾರಿಗೆ ರಾಯ ಲೇಸು. "ಕೂಲಿ ಮಾಡಿದರೇಸು ಕೋರಿ ಹೊತ್ತರೇಸು. ನಮಗೆ ನಮ್ಮ ರಾಯ ಒಡವೆ. ಮನೆಯಲ್ಲಿ ಭಂಗಾರ್ದ ಮಾಲು ಇದ್ಹಂಗೆ." ಗಂಡ ಇಲ್ಲದ ಮೇಲೆ ಬಾಳಿ ಫಲವೇನು.

> ಸುಣ್ಣ ಇಲ್ದ ಗೋಡೆ ದೇವರಿಲ್ಲದ ಜಗಲಿ
> ಅರಸರಿಲ್ಲದ ಮನೆತನ—ಮಾಡೋದು
> ಯಾತರ ಸುಖ ಹಡೆದವ್ವ.

ಆದರೆ ಗಂಡ ದುಷ್ಟನಾಗುವುದೂ ಉಂಟು. ಬೇರೆ ಸ್ತ್ರೀಯರ ಮನೆಯ ಮುಂದೆ ಸುಳಿದಾಡುವುದೂ ಉಂಟು. ಗಂಡನುಳ್ಳ ಗರತಿಯ ಸಂಗಕ್ಕೆ ಹೋಗುವುದೂ ಉಂಟು. "ಹೆಣ್ಣಿಂದು ರಾವಣನು ಮಣ್ಣುಗೂಡಿದ. ಅನ್ನಿಗರ ಹೆಣ್ಣ ಬಯಸದೆ ನಿನ್ನ ಹೆಣ್ಣಿನಲ್ಲಿ ಸುಖಿಯಾಗು. ಹಗಲು ಹಾರುವನಾಗಿ ಇರುಳು ಬಣಜಿಗನಾಗಿ ಅರಸಾರ ಮಗನಾಗಿ ತಿರುಗಿ ನಿದ್ದೆಗೆಡಬೇಡ" ಎಂದು ಹೇಳುವ ಯಾವ ನೀತಿಯೂ ಅವನಿಗೆ ಹಿಡಿಸದೆ ಹೋಗಬಹುದು. ಜಾಗರದ ನವಿಲಂತೆ ಬಾಗುತ್ತ ಬಳುಕುವ ಬಾಲೆಯ ಕಂಡು ಅವನು ಭ್ರಮಿಸಬಹುದು. ಆದರೂ ಹೆಂಡತಿ ಅವನಿಗೆ ಸರಿಯಾದ ವಿವೇಕವನ್ನು ಹೇಳಿ ಅವನನ್ನು ದಾರಿಗೆ ತರಬೇಕಾಗುವುದು.

೮

ಮೊದಲನೆಯ ಸಲ ಹೆಣ್ಣನ್ನು ಕಳುಹಿಸಿಕೊಡುವಾಗ ಸ್ವಾಭಾವಿಕವಾಗಿ ತಾಯಿಗೆ ಅತಿದುಃಖವಾಗುತ್ತದೆ. ಅತ್ತೆಯ ಮನೆಗೆ ಹೋಗುತ್ತಿರುವ ಹೆಣ್ಣಿಗೂ ಬಹುಶ ಹಾಗೆಯೇ ಆಗಬಹುದು. "ಹುಟ್ಟಿದ ಮನೆಯಿಂದ ಮೆಟ್ಟಲಸಿಳಿವಾಗ ಹೊಟ್ಟೆಗೆ ಸಿಡಿಲು ಬಡಿದಂತೆ ಹೆತ್ತಮ್ಮೆ ಕಣ್ಣಾಸೀರೆದ್ದು ಹೊಳೆಯಾದೊ.'' ತಾಯಿ ಮಗಳಿಗೆ "ಎಳೆಗರು ಎತ್ತಲ್ಲ ದಳವಾಯಿ ದೊರೆಯಲ್ಲ. ಮನೆಗೆ ಬಂದಳಿಯ ಮಗನಲ್ಲ. ತವರಿಗೆ ಮಾತು ತಂದೊಳು ಮಗಳಲ್ಲ. ಆದುದರಿಂದ ವಿವೇಕವಾಗಿರು. ಅಪವಾದಕ್ಕೆ ಸಿಲುಕಬೇಡ. ಹೆಣ್ಣು ಅತ್ತೆಯ ಮರೆಯಲ್ಲಿ ಬಾಗಿಕೊಂಡಿರಬೇಕು. ಅತಿಮುಂದಾಗಿ ಚಾಕ ಚಕ್ಯದಿಂದ ನುಗ್ಗಬಾರದು. ತೋಟದ ಕಡಕಾಲ ದಾಟುವುದು ತಡವಲ್ಲ. ಹಾಗೆಯೇ ನೀಟಾಗಿ ಬರುವ ಗರ್ತಿ ಹೆಣ್ಣಿನ ಮೇಲೆ ಮಾತು ಬರುವುದು ತಡವಲ್ಲ" ಎಂದು ಎಚ್ಚರಿಸುತ್ತಾಳೆ.

ಮಗಳು ತಾಯಿಗೆ ಒಂದು ಗುರುತನ್ನು ಹೇಳಿ ಹೋಗುತ್ತಾಳೆ.

ಹೆಣ್ಹೆತ್ತ ಮನೆಯು ಭಿನ್ನ ಭಕುತವಾದೋ
ಬಣ್ಣ ಬರೆದಿವ್ನಿ ನಡುಮನೆಗೆ—ತಾಯಮ್ಮ
ಬಣ್ಣನೋಡಿ ನಮ್ಮ ಮರೆಯಮ್ಮ.

ಗಂಡ ಎಷ್ಟೇ ಒಳ್ಳೆಯವನಾಗಿದ್ದರೂ, ಹೆಣ್ಣಿಗೆ ತವರುಮನೆ ಬಿಟ್ಟುಹೋಗುವಾಗ ದುಃಖ ಉಕ್ಕಿಬರುತ್ತದೆ.

ತೊಟ್ಟಿಲ ಹೊತ್ಕೊಂಡು ತವರುಬಣ್ಣ ಉಟ್ಕೊಂಡು
ಅಪ್ಪ ಕೊಟ್ಟೆಮ್ಮೆ ಹೊಡಕೊಂಡು—ತೌರೂರ
ತಿಟ್ಹತ್ತಿ ನಿಂದು ನೋಡ್ಯಾಳೊ.

ತವರಿನ ಮಮತೆ ಮಗಳಿಗೆ ಯಾವಾಗಲೂ ಹೋಗುವುದಿಲ್ಲ. ತವರಿನ ನಡುಮನೆಯ ಜ್ಯೋತಿ ಉರಿಯಲಿ ಎಂಬುದೇ ಅವಳ ಪ್ರಾರ್ಥನೆಯಾಗಿರುತ್ತದೆ. ತಾಯಿಗೂ ಯಾವಾಗಲೂ ಮಗಳದೇ ಚಿಂತೆ. "ಹೂವ ಮಾರುವ ಗೊಲ್ಲ ಹೂವ ಯಾಕೆ ಇಲ್ಲಿ ತಂದೆ? ಹೂವ ಕೊಳ್ಳುವ ಮಗಳಿಲ್ಲ. ಅವಳ್ತನ್ನ ಮಾವನ ಮನೆಗೆ ನಡೆದಳು.''

ತಾಯಿಯ ಮನೆಯನ್ನು ಬಿಟ್ಟುಹೋಗುವ ಹೆಣ್ಣು ತನ್ನ ಸಂಗಾತಿ ಗಳನ್ನೆಲ್ಲಾ ತೊರೆಯುತ್ತಾಳೆ. "ಸಂಗಾತಿ ಸಂಪನ್ನೆ ಹೆಸರು ನಾಗರಕನ್ನೆ, ಸಂಗಾತಿ ಸಾದು ಸಿಂಬಿಹೆಣ್ಣು. ಸಂಗಾತಿ ಜಂಬುನೇರಿಲೆಹಣ್ಣು ಮುಂಗೈಯ ಹಿಡಿಸಿ ನಗಿಸುವವಳ ಮುಖಭಾವ ಮುಂಗಾರ ಮಿಂಚು ಹೊಳೆದ್ಹಂಗೆ." ಇಂಥ ಸಂಗಾತಿಯ ಸಹವಾಸ ತಪ್ಪಿತು. ಮಾತಾಡೋಣವೆಂದರೆ ಅವಕಾಶ ವಿಲ್ಲ. ಹೆಣ್ಣೆ ಸಂಜೆಗೆ ಸ್ವಪ್ನಕ್ಕೆ ಬಾ ಎಂದು ಹೆಣ್ಣು ಬಯಸುತ್ತಾಳೆ.

ಎಷ್ಟೇ ಸುಖವಾಗಿದ್ದರೂ ಹೆಣ್ಣಿಗೆ ಅತ್ತೆಯ ಮನೆ ಕಷ್ಟವಾಗಿ ತೋರು ತ್ತದೆ. ಆದರೆ ಗಂಡ ನಿಜವಾಗಿಯೂ ಹಿತವಿಲ್ಲದವನೇ ಆದರೆ "ಗಂಡನಾ ಮನೆಯು ಚೆಂಡ ನೀಗೆಯ ಗುತ್ತಿ. ಗಂಡನೆಂಬುವನು ಉರಿಮಾರಿ. ಕಂಡರೆ ಕಂದ ಕಿಚ್ಚೆದ್ದು ಕೆದರ್ಯಾನು" ಎಂಬಂತೆ ಆಗುತ್ತದೆ. ಆದರೂ ಸಹಿಸಿಯೇ ತೀರಬೇಕು. "ಹಂತವಿಲ್ಲದ ಭಾವಿ, ಜಂತವಿಲ್ಲದ ಸೀರೆ, ಸಂತೋಷವಿಲ್ದ ಸತಿ ಪುರುಷ್ನ ಕೈಹಿಡಿದು ಚಿಂತೆಮಾಡಿದರೆ ಫಲವೇನು?" "ಎಳ್ಳು ಬಿತ್ತಲಿಲ್ಲ ಎಳ್ಳು ಬೆಳೆಯಲಿಲ್ಲ ಎಳ್ಳುಹೂಸೀರೆ ಉಡಲಿಲ್ಲ. ಹಡೆದಪ್ಪ ಒಳ್ಳೆಮನೆ ನೋಡಿ ಕೊಡಲಿಲ್ಲ" ಎಂಬ ಕೊರಗು. ಆಗ ಉಪಾಯದಿಂದ ಗಂಡನೆಂಬ ಹೋರಿಗೆ ಮೂಗುದಾರ ಹಾಕಬೇಕು.

ಸೇರದ ಗಂಡಯ್ನ ಏನೆಂದು ಕರೆಯಲೊ
ಬಾರೋ ಗಂಡಯ್ಯ ಮಲಗೋಣ—ಮಂಚದ್ಮೇಲೆ
ತಾಳೆಹೂವಿನ ತಲೆದಿಂಬು.

ಎಷ್ಟಾದರೂ ಗಂಡನನ್ನು ಪಳಗಿಸುವವಳೇ ಜಾಣೆ. "ಗಂಡನಾ ಗುಣ ವನ್ನು ಕಂಡೆನೆಂಬೊಳು ಜಾಣೆ. ಹಿಂಡೆತ್ತಿನೊಳಗೆ ಬಸವನ ಪಾದವ ಕಂಡೆ ನೆಂಬೊಳು ಕಡುಜಾಣೆ." ಹೀಗೆ ಗಂಡನ ಮನಸ್ಸನ್ನು ಹೇಗಾದರೂ ಒಲಿಸಿ ಕೊಂಡವಳೇ ಗರತಿ. ಇಲ್ಲದಿದ್ದರೆ ಅವಳಿಗೆ ಸಮಾಜದಲ್ಲಿ ಸ್ಥಾನವಿಲ್ಲ.

ಅತ್ತೆಯನ್ನು ಸಮಾಧಾನಪಡಿಸುವುದು ಕಷ್ಟ. ಹೇಗೆ ಮಾಡಿದರೂ ಆಕ್ಷೇಪಣೆ. "ಹಾಗಲ ಕಾಯನ್ನು ಹೇಗೆ ಅಟ್ಟರು ಕಹಿ." "ಅತ್ತೆಯ ಮನೆಯ ಬೆಳದಿಂಗಳು ಬಿಸಿಲಾಯ್ತು. ಅತ್ತೆಮನೆಯಲ್ಲಿ ಕುಡಿದ ನೀರು ದಕ್ಕವು. ಮುಡಿಮಾಡಿ ಮೂರು ದಿನಗಳಾಗಿವೆ. ಅತ್ತೆ, ಅರುವತ್ತು ಗಂಗಳ

ಬೇಕಾದರೂ ಬೆಳಗತೀನಿ ಬೈಬೇಡ. ತವರವರು ಸರಮುತ್ತುಮಾಡಿ ಸಲಹವರೆ" ಎಂದು ಹೆಣ್ಣು ಕೊರಗುತ್ತಾಳೆ. ಗಂಡನ ಮನೆಯ ಕಷ್ಟ ಹೆಚ್ಚಿದಷ್ಟೂ ಹೆಣ್ಣಿಗೆ ತವರಿನ ಆಸೆ ಜ್ಞಾಪಕಗಳು ಹೆಚ್ಚುತ್ತವೆ. "ಮಳೆ ಬಂದರೆ ಬರಲಿ. ಹೊಳೆ ತುಂಬಬೇಡ. ಹರಗಲಿಗೆ ಬೇಕೆ ಹಿಡಿಹೊಸ್ನ." "ದುಂಡುಮಲ್ಲಿಗೆಸರ ಕೊಂಡುಬಂದು ಅಣ್ಣಯ್ಯ ಮಲೆನಾಡ ತವರ ಮರಿ ಎಂದ." ಅಕ್ಕತಂಗೀರು ಕಟ್ಟೆ ನೀರಿಗೆ ಹೋಗಿ ಅಲ್ಲಿ ನೋಡೆ ಅಕ್ಕ ತವರೂರು ಬೀದಿಯಲ್ಲಿ ಹದಿನಾರು ತೇರು ಹರಿದಾವೆ ಎಂದರೆ ಅಕ್ಕ, ಹರಿದರೆ ಹರಿಯಲಿ ಮುರಿದರೆ ಮುರಿಯಲಿ ನಾವೊಬ್ಬರ ಮನೆಯ ಸೊಸೆಯಾದೋ ತೌರೂರ ಸುದ್ದಿ ನಮಗೇನು ಎನ್ನುತ್ತಾಳೆ. "ಮೂಡಸೀಮೆಗೆ ಹೋಗಿ ಬಾ ಮಳೆರಾಯ ಕಗ್ಗಲ್ಲಿನ ನನ್ನ ತೌರೂರು ಮುಂದೆ ಜಗ್ಗಿಸಿ ಹುಯ್ಯೊ ಮಳೆರಾಯ. ಒಬ್ಬರಿರುವ ಮನೆಗೆ ಹಬ್ಬದಿರು ಮಲ್ಲಿಗೆ ಒಬ್ಬಳೇ ಕೂದು ಮುಡಿಲಾರೆ ಹಬ್ಬುಹೋಗು ನನ್ನ ತವರಿಗೆ. ಬಂಗಾರ ಬಳೆಯವರು ತವರವರು ತಿಂಗಳ ಹಾದ್ಯವರು ನನ್ನ ಕೊಟ್ಯಾಕೆ ಮರೆತಾರು ಮಾವಿನ ಹಣ್ಣು ಉಣುವಾಗ ನೆನಸುವರು" ಎಂದು ಹೆಣ್ಣು ಹಲುಬುತ್ತದೆ. ಒಳ್ಳೆ ಪದಾರ್ಥಗಳನ್ನು ತಿನ್ನುವಾಗ ಮಕ್ಕಳನ್ನು ನೆನದುಕೊಳ್ಳುವುದು ವಾಡಿಕೆ. ಆದುದರಿಂದ,

> ಆಕಳಂಥ ಅತ್ತೆ ಗೋಕುಲದಂಥ ಮಾವ
> ಶ್ರೀ ಕೃಷ್ಣನಂಥ ಪತಿರಾಯ—ಇದ್ದರೆ
> ಸಾಕಿದ ತವರ ಮರೆತೇನು.

ಇಲ್ಲದಿದ್ದರೆ

> ಹೆಣ್ಣಾಗಿ ಹುಟ್ಟೊಕಿಂತ ಮಣ್ಣಾಗಿ ಹುಟ್ಟಿದರೆ
> ಮಣ್ಣಿನ ಮೇಲೊಂದು ಮರವಾಗಿ—ಹುಟ್ಟಿದರೆ
> ಪುಣ್ಯವಂತರಿಗೆ ನೆರಳಾಗಿ.

ಎಂದು ಹೆಣ್ಣು ಬಯಸುತ್ತದೆ.

ಆದರೆ ಗಂಡ ಸರಿಯಾಗಿದ್ದರೂ, ಅವಿಭಕ್ತ ಕುಟುಂಬಗಳಲ್ಲಿ ಇತರರು ಹೊರಗಿನಿಂದ ಬಂದ ಹೆಣ್ಣಿಗೆ ಬಹಳ ಹಿಂಸೆ ಕೊಡುತ್ತಾರೆ. ಅವರ ಪೈಕಿ ಅತ್ತೆಯ ಮನೆಯಲ್ಲಿ ಮೈದುನ, ತಾಯಿಯ ಮನೆಯಲ್ಲಿ ಅತ್ತಿಗೆ. ಗಂಡ ಬೈದರೆ ಹೆಂಡತಿ ಸಹಿಸಿಕೊಳ್ಳುತ್ತಾಳೆ. ಆದರೆ ಇತರರು ಬೈದರೆ ದುಃಖ ಉಕ್ಕಿ ಬರುತ್ತದೆ. "ಮಾರಾಯ ಬೈದರೆ ಬಾರವು ಕಣ್ಣೀರು ಮಾರಾಯ್ನ ತಮ್ಮ ಮೈದುನ ಬೈದರೆ ಮಾಡಿಲ್ದೆ ಮಳೆಯು ಸುರಿದ ಹಂಗೆ." ಗಂಡನ ಮನೆಯಲ್ಲಿ ಮೈದುನ ಕಾಡುವಂತೆ ತಾಯಿಯ ಮನೆಯಲ್ಲಿ ಅತ್ತಿಗೆ ಕಾಡುತ್ತಾಳೆ. ಆದರೆ ತಾಯಿ ಬದುಕಿದ್ದರೆ ಅತ್ತಿಗೆಯ ಬೇಳೆ ಬೇಯುವುದಿಲ್ಲ. ನಾದಿನಿ ಮಾತ್ರ ಮನೆಗೆ ಬಂದ ಸೊಸೆಯನ್ನು ಚೆನ್ನಾಗಿ ಕಾಡುತ್ತಾಳೆ. ಹಾಗೆಯೇ ತಾಯಿಯಿಲ್ಲದ ಮನೆಗೆ ನಾದಿನಿ ಬಂದರೆ ಅತ್ತಿಗೆ ಅವಳನ್ನು ಚೆನ್ನಾಗಿ ಓಡಿಸಲ್ಲಿ ಹಾಕಿ ಹುರಿಯುತ್ತಾಳೆ. "ಹಡೆದಮ್ಮ ಇಹಳೆಂದು ದಡ ದಡಸೆ ನಾ ಬಂದೆ. ಒಳಗೆ ಅಣ್ಣಯ್ಯನ ಮಡದಿಯ ದನಿ ಕೇಳಿ ತಲೆಬಾಗಿ ಲಿಂದ ತಿರುಗೀದೆ. ಹಡೆದಮ್ಮ ಇದ್ದಾಗ ನಡುಮನೆ ನನಗಿತ್ತು ಕಡಗದ ಕೈಯ ಸೊಸಿ ಬಂದು ನಡೆದಾಗ ತುದಿಗಟ್ಟೆ ನನಗೆ ಎರವಾಯ್ತು." ಈ ರೀತಿಯಾದ ಅತ್ತಿಗೆಯ ಮೇಲಿನ ತಿರಸ್ಕಾರದಿಂದ, ಅಣ್ಣನು ಅವಳ ಕೈಯ ಗೊಂಬೆ, ದಾಸಾನುದಾಸ ಎಂದು ತಂಗಿಗೆ ಅಣ್ಣನ ಮೇಲೂ ಅಸಹನೆ. "ಹಳ್ಳದ ದಂಡಿಗೆ ಹಸಿರು ಮೆಣಸಿನ ಕಾಯಿ ದಣಿಸ್ಯಾಡುತಾವೆ ಗಿಳಿವಿಂಡು ಅಣ್ಣಯ್ಯನ ಕುಣಿಸಾಡುತಾಳೆ ಅತ್ತಿಗೆ" ಎಂದು ಬೇಸರಪಟ್ಟುಕೊಳ್ಳುತ್ತಾಳೆ. ತಂದೆತಾಯಿ ಇಲ್ಲದ ಮೇಲೆ ಅಣ್ಣಯ್ಯನೂ ಅಕ್ಕತಂಗಿಯರನ್ನು ಪ್ರೀತಿಯಿಂದ ನೋಡಿಕೊಳ್ಳುವುದಿಲ್ಲ. "ಅಣ್ಣ ದಂಡಿಗೆ ಹೋದ ದುಂಡು ಮಲ್ಲಿಗೆ ತಂದ; ತಂಗೀರು ಕೇಳಿದರೆ ಇಲ್ಲವೆಂದ ಮಡದಿ ಕೇಳಿದರೆ ಮುಡಿ ಎಂದ. ಅಕ್ಕನ್ನ ಕರಸೆಂದ್ರೆ ಚಿತ್ತೇಯ ಬಿಸಿಲೆಂದ ಚಿಕ್ಕಹೆಂಡತಿಯ ಕರಸೆಂದ್ರೆ ನನ್ನಣ್ಣ ಸತ್ತಿಗೆ ಮುತ್ತ ಬಿಗಿಸೀದ. ತಂಗಿಯ ಕರಸೆಂದ್ರೆ ಅಂದಳಕೆ ಬಿಸಿಲೆಂದ ರಂಭೆ ಹೆಂಡತಿಯ ಕರಸೆಂದ್ರೆ ನನ್ನಣ್ಣ ಅಂದಳಕೆ ಮುತ್ತ ಬಿಗಿಸೀದ." ಹೀಗೆ ಅಣ್ಣನಲ್ಲೂ ಅತ್ತಿಗೆಯಲ್ಲೂ ತಂಗಿಗೆ ಸ್ವಾಭಾ

ವಿಕವಾಗಿ ತಿರಸ್ಕಾರವುಂಟಾಗುತ್ತದೆ. ಅಣ್ಣನಿಗೂ ತಂಗಿಯಲ್ಲಿರುವ ಅನಾದರ ಬೇರೆ ಬೇರೆ ರೂಪದಲ್ಲಿ ಪ್ರಕಟವಾಗುತ್ತದೆ.

ಕಗ್ಗಲ್ಲು ಒನಕೆ ಕರಿಯ ಮಲ್ಲಿಗೆ ಸ್ವಾಮಿ
ಒಬ್ಬಳಿಗೊಂದೊಬ್ಬೆ ಸಮೆಯಾದೊ—ಅಣ್ಣಯ್ಯ
ಎಬ್ಬಿಸು ನಿನ್ನ ಮಡದೀಯ.

ಎಬ್ಬಿಸೋದು ಯಾಕೆ ನಿದ್ದೆಗೆಡ್ಸೊದ್ಯಾಕೆ
ಎರಡೊಬ್ಬೆ ಮಾಡಿ ತೊಳಸೀಡು—ತಂಗ್ಯಮ್ಮ
ಮಂಡೆ ನೋವೆಂದು ಮಲಗವ್ಳೆ.

ತಂಗಿಗೆ ಒಂದಿಲ್ಲೊಂದು ಕಾರಣದಿಂದ ಅತ್ತಿಗೆಯನ್ನು ಕಂಡರೆ ಬೇಜಾರಾಗುತ್ತದೆ. ನಮ್ಮದು ಮಲಸೀಮೆ. ಹಳ್ಳಿಗರಿಗೆ ಪಟ್ಟಣಿಗರನ್ನು ಕಂಡರೆ ಹೇಗೋ ಮಲಸೀಮೆಯವರಿಗೆ ಮೂಡಸೀಮೆಯವರನ್ನು ಕಂಡರೆ ಹಾಗೆ. ಮೂಡಣವರು ಜಾಣರು. ಕೂರಿಗೆ ಹಿಡಿಯುವುದರಲ್ಲೂ ಹಾಡು ಹಾಡುವುದರಲ್ಲೂ ಜಾಣರು. "ಹಾಡು ಹಾಡೆಂದರೆ ನಾಸೇನ ಹಾಡಲಿ. ಹಾಡಲೊಗೆಣೆಯ ನನ ಮೇಲೆ ಮೂಡಲ ಜಾಣ ಕೂರಿಗೆ ಹಿಡಿದಂಗೆ." ಹಾಗೆಯೇ ಮೂಡಸೀಮೆಯ ಗೆಳತಿ ಸಿಕ್ಕಬೇಕಾದರೂ ಪುಣ್ಯಮಾಡಿರಬೇಕು.

ಸಂಗಾತಿ ನೀ ಬಾರೆ ಮೂಡಸೀಮೆಯ ಹೆಣ್ಣೆ
ಉಂಗುರವ ತಾರೆ ಬೆರಳಿಗೆ—ಜಂತದ
ರಂಭೆ ನಿನ್ನ ಹೆಂಗೆ ಮರೆಯಲಿ.

ಮೂಡಸೀಮೆಯ ಹೆಣ್ಣು ಸಿಕ್ಕುವುದು ಹೀಗೆ ಕಷ್ಟವಾದರೂ ತಂಗಿ ಅಣ್ಣನಿಗೆ

ಮೂಡಸೀಮೆಯ ಹೆಣ್ಣು ಬೇಡಕನಣ್ಣಯ್ಯ
ನೀಡಿದ ಕಾಲ ತೆಗೆಯಾಳು—ಆ ಬಾಲೆ
ನೆರೆಯರಿಗೆ ಅಂಜಿ ಬಾಳ್ಯಾಳೆ.

ಎಂದು ಹೇಳುತ್ತಾಳೆ. ಮೂಡಸೀಮೆಯ ಹೆಣ್ಣಾದರೂ ಸರಿಯೆ, ಅತ್ತಿಗೆಯಾದ ಮೇಲೆ ಅವಳ ಯೋಗ್ಯತೆ ಹೋಯಿತು.

ಅತ್ತಿಗೆಯಲ್ಲಿ ತಿರಸ್ಕಾರವಿದ್ದರೂ ತಂಗಿಗೆ ಅಣ್ಣಬೇಕು. ಆದುದರಿಂದಲೇ ಅವಳು ಅಣ್ಣ ಇರುವವರೆಗೆ ತವರುಮನೆಗೆ ಬರುತ್ತಿರುತ್ತಾಳೆ.

ಕುದುರೆಯನ್ನು ಕುಣಿಸುತ್ತ ಕುಂಕುಮ ಚೆಲ್ಲುತ್ತ ಉಗುರಿನಲ್ಲಿ ಬುಗರಿ ತಿರುವುತ್ತ ಅಣ್ಣಯ್ಯದೊರೆ ತಂಗಿಯನ್ನು ಮದುವೆಗೆ ಕರೆಯಲು ಬಂದನು. ಮದುವೆ ಕಣೆ; ಕನ್ನಡಿ ಕಲಶವು ನೀ ಬರದೆ ನಾನು ಹೋಗಲಾರೆ ಎಂದನು. ತಂಗಿ "ಹತ್ತಿಯು ಮುರಿಬೇಕು. ಹರಳು ಕಾಯ ಬಡಿಬೇಕು. ನಾನುಹೇಗೆ ಬರಲಿ" ಎಂದಳು. ಅಣ್ಣ "ಹತ್ತಿಯು ಮುರಿಯೋಕೆ ಹರಳು ಕಾಯಬಡಿಯೋಕೆ ಆಳು ಕಳುಹೇಸು" ಎಂದನು. ತಂಗಿ ಅತ್ತಿಮರದ ಕೆಳಗೆ ಕುಳಿತಿದ್ದ ಅತ್ಯಮ್ಮನನ್ನು ಕುರಿತು, ಅತ್ತಮ್ಮ ತೌರಿಗೆ ಹೋಗಿ ಬರತೀನಿ ಎಂದಳು. ಅತ್ಯಮ್ಮ

ಹೋಗಿಬಾರೆ ಸೀನು ಹೊನ್ನೊಲೆ ಕಿವಿಯೋಳೆ
ಕೆನ್ನೇಲಿ ಸೂರ್‍ಯ ಹೊಳೆವವಳೆ—ಸೊಸೆಮುದ್ದೆ
ತೌರು ಒಳ್ಳೇದೆಂದು ಇರಬೇಡ.

ಎಂದು ಹೇಳಿ ಕಳುಹಿಸಿದಳು.

ಅಂದಣವನ್ನು ಏರಿ ಅಣ್ಣನ ಮನೆಗೆ ಬಂದಳು. ತಂದೆ ತಾಯಿ ಇದ್ದಿದ್ದರೆ ಅಣ್ಣನು ಯಾರನ್ನೂ ಕೇಳದೆ ಸೆಟ್ಟಗೆ ತಂಗಿಯೊಂದಿಗೆ ಒಳಕ್ಕೆ ಹೋಗುತ್ತಿದ್ದನು. ಆದರೆ ಈಗ ಒಳಗೆ ಇರುವವಳು ಹೆಂಡತಿ. ಸ್ವತಂತ್ರವಾಗಿ ಹೋಗುವುದಕ್ಕೆ ಗತಿಯಿಲ್ಲ. ಸಿಂದಿರು ಅಕ್ಕ ಸಡವೇಲಿ; ಒಳಗಿರುವ ರಂಭೆಯ ಕೇಳಿ ಬರತೀನಿ ಎಂದು ಅಣ್ಣ ಒಳಕ್ಕೆ ಹೋದ. ಹೆಂಡತಿ ತನ್ನ ತಂಗಿಯನ್ನು ಒಳಕ್ಕೆ ಸೇರಿಸುವಳೋ ಇಲ್ಲವೋ ಎಂಬ ಭಯ. ಎಂಥ ಹೆಂಡತಿಗಾದರೂ ಕೃಪೆಯುಂಟಾಗಬೇಕು; ಅಂತಹ ಅತ್ಯಂತ ಸುಂದರವಾದ ಈ ಮಾತುಗಳಲ್ಲಿ ಹೆಂಡತಿಗೆ ತಂಗಿ ಬಂದ ವಿಚಾರ ತಿಳಿಸಿದ.

ಮಾಳಿಗೆ ಮಾಳಿಗೆ ಏಳಂಕ್ಣ ದ್ಮಾಳಿಗೆ
ಮಾಳಿಗೆ ಮೇಲೆ ಮಲಗಿರ್‍ವೊ—ನೀ ರಾಜ
ನಾದ್ಠಿ ಬಂದವ್ಳೆ ಮುಖತೋರೆ.
ಎಳೆಬಾಳೆ ಸುಳಿಬಾಳೆ ಅಪರಂಜಿ ಚಿನ್ನಾವೆ
ಮೂಡ್ಲ ನಾಡಿಂದ ತಂಗ್ಯಮ್ಮ—ಬಂದವ್ಳೆ
ನೀ ಒಂದು ಮಾತ ಕರೆಹೋಗೆ.

ಅಪರಂಜಿ, ಎಳೆಬಾಳೆ ಸುಳಿಬಾಳೆ ಸೀರಾಜಿ, ಅತ್ತೆಯು ಮಗಳೆ ಮುತ್ತಿನ ಮಾಣಿಕವೆ—ಎಂತಹ ಜೇನುಸೋರುವ ಸವಿಮಾತುಗಳು. ಆದರೆ ಹೆಂಡತಿಗೆ ದಯೆ ಬರಲಿಲ್ಲ. ಅವಳ ಅನುಭವದಲ್ಲಿ ಅವಳಿಗೆ ನಾದಿನಿಯರಿಂದ ಸುಖ ವಾಗಿರಲಿಲ್ಲ. "ಅಕ್ಕರದಿಂದ ಕರೆಯೋಕೆ ಅಕ್ಕಲ್ಲ ತಂಗ್ಯಲ್ಲ. ಕುಟ್ಟಿದ ಅಕ್ಕಿ ಮನೆಲಿಲ್ಲ. ಭತ್ತ ಇಲ್ಲ, ಸೌದೆ ಇಲ್ಲ."

ಕಾದ ಓಡಿನ್ಹಂಗೆ ಉರಿದ ಹಂಚಿನ್ಹಂಗೆ
ನಾದಿನಿ ಬಂದವ್ಳೆ ತವರೀಗೆ—ಈಗೀಗ
ನಾದಿನಿ ಬಂದವ್ಳೆ ತವರೀಗೆ.

ಹಿಂದೀನ ವರುಷದಲಿ ಒಂದೊಂದು ಮಾತಾಡಿ
ಒಂದೊಂದು ಭಂಗಪಡಿಸಿದ್ಳು—ನಾದಿನಿ
ಈಗೇನ ಮಾಡುವಳೊ ನಾಕಾಣೆ.

ಸಾವೆ ಕುಟ್ಟು ಎಂದರೆ ಶಾಲೆ ಮಾಸಿತೆಂದಾಳು
ಮಡದೀಯ ಕಳುಹಿಸಿ ಆಚೆಗೆ—ನಿಮ್ಮಯ
ಅಂದಣವ ಕಳುಹಿಸಿ ಆಚೆಗೆ.

ಹೀಗೆ ಅತ್ತಿಗೆ ಕರೆಯದೆ ಇದ್ದರೂ ಮನೆಬಾಗಿಲಿಗೆ ಬಂದಮೇಲೆ ಒಳಕ್ಕೆ ಹೋಗದೆ ನಾದಿನಿ ಹಿಂದಿರುಗುವುದಕ್ಕೆ ಆಗುತ್ತದೆಯೆ? ಅವಳು ತಾಯಿಯ ಸಾವನ್ನು ನೆನೆದು ದುಃಖಿಸುತ್ತ ಅಡಿಗೆಮನೆತನಕ ಬಾಗಿಹೋದಳು. ಅಲ್ಲಿ ಅತ್ತಿಗೆಯನ್ನು ಕಂಡು ಪ್ರೀತಿಯನ್ನು ಹೊರಸೂಸಿ, "ಅತ್ತಿಗೆ ಮನೆಯಲ್ಲಿ ಎಲ್ಲರೂ ಕ್ಷೇಮವೆ?" ಎಂದು ಕೇಳಿದಳು. ನಾದಿನಿ ಹೇಳಿದ ಮಾತಿಗೆ ಅತ್ತಿಗೆ ಮನದಲ್ಲಿ ಸೆಟ್ಟಿಗೆಮುರಿಯುತ್ತಾ "ನೀ ಬರಲು ಇನ್ನು ನಮಗೆಲ್ಲಿ ಕ್ಷೇಮ?" ಎಂದಳು. ಅತ್ತಿಗೆ ನೀರು ಕೊಡು ಎಂದರೆ, ನಿಮ್ಮಣ್ಣ ನೀರಿಗೆ ತೊತ್ತನಿಡಲಿಲ್ಲ ಎಂದಳು. "ಕೆಂಪುಸೀರೆಯ ಚೆಲ್ವೆ ನಿನ್ನಾರು ಕರೆಸಿದರು. ಅಣ್ಣನ ಮನೆಯ ಕಣಜ ಬೊಕ್ಕಸವೆಂದು ತಿಳಿದೆಯ" ಎಂದು ಗದರಿಸಿದಳು. ತಂದೆತಾಯಿಗಳಿದ್ದಾಗ ತಾನು ಸುಖವಾಗಿದ್ದು ದರ್ಬಾರುಮಾಡುತ್ತಿದ್ದ ಮನೆಯಲ್ಲಿ ತನ್ನ ಅವಸ್ಥೆ ಹೀಗಾದುದರಿಂದ ನಾದಿನಿಗೆ ಕಣ್ಣಲ್ಲಿ ನೀರು ಬಂತು. ಅತ್ತಿಗೆಯ ಮಾತು ಶೂಲವಾಯಿತು. ಆದರೆ ಅವಳು ಜೋರಿನಲ್ಲಿ

ಕಡಮೆ ಇರಲಿಲ್ಲ. ಅವಳ ದೌಷ್ಟ್ಯ ಚೆನ್ನಾಗಿ ಪ್ರಕಾಶಕ್ಕೆ ಬಂದು ಅವಳು ಈ ರೀತಿ ಗರ್ಜಿಸಿದಳು :

ಅಂಡಗಾಲಿನೋಳ ತಂದೆ ತುಂಡು ಮುಶಿಯೋಳ ತಂದೆ
ತೊಂಡೆಕಾಯ್ನಂತ ತುಟಿಯವಳ—ನೀ ತಂದು
ತಂಗಿಯರಿಗೆಲ್ಲಾ ಹಗೆಯಾದೆ.

ಮೂದೇವಿ ನೀ ತಂದೆ ಮುಸಕಿನ ಜೋಳ ತಂದೆ
ಸ್ವಸ್ಥನಿರದೆ ಕಸಬರಲ—ನೀ ತಂದು
ತಂಗಿಯರಿಗೆಲ್ಲಾ ಹಗೆಯಾದೆ.

ತಾಟಗಿತ್ತಿ ತಂದೆ ತೋಟ್ದ ಬಸವಿ ತಂದೆ
ಮಾಟದ ಮಾರಿ ನೀ ತಂದೆ—ಅಣ್ಣಯ್ಯ
ತಂಗ್ಯೋರಿಗೆಲ್ಲ ಹಗೆಯಾದೆ.

ಸರಿ. ಆ "ಮಾಟದ ಮಾರಿಗೆ" ಸಿಟ್ಟು ಹತ್ತಿತು. ಅವಳು "ಕುಟ್ಟಲಾರದ ಕುರುಡಿ ಬೀಸಲಾರದ ಬೆಡಗಿ ಅಟ್ಟುಣ್ಣಲಾರದ ಅರೆಬೆಡಗಿ ಬಟ್ಟಲು ಕೊಟ್ಟೇಸು ತಿರಿದುಣ್ಣಿ" ಎಂದು ಮನೆಬಿಟ್ಟು ಹೊರಡಿಸಿದಳು. ಕೊನೆಗೆ ಅಣ್ಣಾನು ಏನು ಮಾಡುವುದಕ್ಕೂ ತೋರದೆ, ಹೋಗಿಬಾರವ್ವ ನಿನ್ನೂರ್ಗೆ ಎಂದನು. ತಂಗಿಯೂ ಬಂದ ಸಿಟ್ಟಿನಲ್ಲಿಯೇ ಹಿಂದಕ್ಕೆ ಹೊರಟಳು. "ಹಡೆದಮ್ಮ ಇದ್ದರೆ ಮಡಲಿಗೆ ಅಕ್ಕಿ ಹುಯ್ದು ಹರಿದಾರಿ ತನಕ ಕಳುಹೋಳು. ಆದರೆ ಅತ್ತಿಗೆ ಬಾಗಿಲು ಬಿಟ್ಟು ಇಳಿಯಾಳು" ಎಂದುಕೊಂಡಳು. ಆದರೂ ತವರಿನ ಮಮತೆ ತಡೆಯಿತು. "ಹೆಣ್ಣಿಗೆ ತವರಿಗಿಂತ ಹಿರಿದು ಇರುವೋದೆ." ಅಣ್ಣಯ್ಯನು ಹೋಗೆಂದ ಮಾತಿಗೆ, "ಹೋದೆಯ ತಂಗ್ಯವ್ವ ಮೂರು ಕಾಸಿನ ಮಟ್ಗಾರಿ ಮಾತಿಗೆ ಹಾಲ್ನಂತ ತವರ ತೊರೆದೆಯ?" ಎಂದು ಕೊರಗಿದನು. ತಂಗಿಗೆ ತವರ ಮಮತೆ ಬಿಡಲಿಲ್ಲ.

ಹುಟ್ಟಿದ ಮನೆಯನ್ನು ನಾನೆಲ್ಲಿ ತೊರೆದೇನು
ನಡುಮನೆ ಜ್ಯೋತಿ ಇರೋಗಂಟ—ಅಣ್ಣಯ್ಯ
ಅಲ್ಲಿಗಿಲ್ಲಿಗೆ ನಡೆವಾಡು.

ಅತ್ತಿಗೆ ಬಸುರಾಗ್ಲಿ ಹತ್ತೆಮ್ಮೆ ಕರೆಯಲಿ
ಅತ್ಯಮ್ಮ ಎಂದು ಕರೆಯಲಿ—ಅಣ್ಣಯ್ಯ
ಹೆಚ್ಚು ಸುಖಿಯಾಗಿ ನೀ ಬಾಳು.

ಎಂದು ಹೇಳಿ, "ಅಣ್ಣಯ್ಯ ನಾನು ಹೋದಮೇಲೆ ಏನಾದರೂ ಹೊಡೆದೀರ" ಎಂದು ಹೇಳಿ ಹೊರಟುಹೋದಳು. ಅತ್ತೆಮನೆಯವರು "ಬಂದಿತೋಳಿನ ಸೊಸೆಮಗಳೆ ಇದೇನು ಇಷ್ಟುಬೇಗ ಹಿಂದಿರುಗಿದೆ" ಎಂದು ಕೇಳಿದುದಕ್ಕೆ

ಹೋಗ್ವಾಗ ಹುಲ್ಲೆ ಕಂಡೆ ಬರ‍್ವಾಗ ಬಸ್ವನ್ಕಂಡೆ
ತವರೂರು ದಾರೀಲಿ ಏಳ್ಹಾತ್ವ—ಸರ್ಪಾ ಕಂಡೆ
ಹಿಂದಿರುಗಿ ಬಂದೆ ಅತ್ಯಮ್ಮ.

ಎಂದಳು. ಇಲ್ಲದೆ ಅತ್ತಿಗೆ ಮನೆಗೆ ಸೇರಿಸಲಿಲ್ಲ, ಬಂದೆ ಎನ್ನುವುದಕ್ಕೆ ಆಗುತ್ತದೆಯೆ?

ಹೀಗೆ ಅತ್ತಿಗೆಗೂ ನಾದಿನಿಗೂ ವಿರಸವಾಯಿತು. ಹಿಂದೆ, ಅಣ್ಣನ ಹೆಂಡತಿ 'ಬಿಮ್ಮನ್ಸಿ'ಯಾಗಿ ಹೆಣ್ಣುಹೆತ್ತರೆ ತಂಗಿಯ ಮಗನಿಗೆ ಆ ಹೆಣ್ಣು ಕೊಡಬೇಕೆಂದು ತೀರ್ಮಾನವಾಗಿತ್ತು.

ಹೆಣ್ಣುಹೆತ್ತಾರೆ ನಮಗೊಂದು ಊರ‍್ಮಂದಲ
ಹೊನ್ನ ೨ಳಿ ಮರವೆ ಹೊಣೆಯಾಗೊ—ಗೋಣಿ ಮರವೆ
ನಾವ್ಹೆಣ್ಣಿಗೆ ಬರ‍್ತೀವಿ ಹೊಣೆಯಾಗು—ನೀ ನೆರಳಾಗು.

ಎಂದು ಹೇಳಿ ಮರವನ್ನೇ ಸಾಕ್ಷಿಮಾಡಿದ್ದುದು ಹೆಣ್ಣಿನ ತಾಯಿಗೆ ಮರೆತೇ ಹೋಯಿತು.

ಅಣ್ಣನಾ ಮನೆಗೆ ಹೆಣ್ಣಿಗ್ಹೋದಳು ತಂಗಿ
ಸುಣ್ಣದ ಗೋಡೆ ಒರಗಿದ್ಲು—ಅಣ್ಣಯ್ಯ
ಹೆಣ್ಣು ಕೊಡಬಾರೊ ಮಗನೀಗೆ.

"ಹನ್ನೆರಡು ಅಂಕಣದ ಗರಡೀಲಿ ಇರುವೋರೆ ಬಿಂಕಾದ ನಡೆಯೋರೆ ಚಿನ್ನದ ಹೊದ್ಕೆ ಕೊಡೆಯೋರೆ," ಹೆಣ್ಣು ಕೊಡಿ ಎಂದಳು. ಆಗ ಅತ್ತಿಗೆ ಕಣ್ಣು ಚಿವುಟಿದಳು. ತಂಗಿ "ಕಣ್ಣು ಚಿವುಟಲು ನಾನು ಅನ್ಯರ ಮಗಳಲ್ಲ ನಿಮ್ಮ ರಾಯನಿಗೆ ತಂಗಿ" ಎಂದಳು. ಹೆಂಡತಿಯ ಮಾತನ್ನು ಕೇಳಿಕೊಂಡು ಅಣ್ಣ ಹೆಣ್ಣುಕೊಡಲು ಒಪ್ಪಲಿಲ್ಲ.

ಹೆಣ್ಗೆ ಬರುವ ತಂಗಿ ನೆನ್ನೆ ಮೊನ್ನೆ ಬರುವಿರಿ
ನೆನ್ನೊಂದು ಪಟ್ಣದೊರೆಗೋಳು—(ಬಂದು) ನಮ್ಹೆಣ್ಗೆ
ಹೊನ್ನ ಕಂಕಣ ತೊಡಿಸ್ಹೋದ.

ಎಂದ. ತಂಗಿಗೆ ಸಿಟ್ಟುಬಂತು. "ಒಳ್ಳೆಯದು ನೀನು ಒಬ್ಬನೇ ಹೆಣ್ಣು ಹೆತ್ತವನಲ್ಲ. ಹೆಣ್ಣ ಕೊಡದಿದ್ರೆ ಸಿಟ್ಟಿಲ್ಲ. ನಿನ್ನೂರ ಮೇಲೆ ಬರತೀನಿ. ಆನೆ ಮೇಗಳ ಹಣವ ದಾನಮಾಡುತ ಬರುವೆ ಒಂಟಿ ಮೇಗಳ ಹಣವ ವೆಚ್ಚ ಮಾಡುತ ಬರುವೆ, ಆಗ ನೀನು ಬಾಯಿ ಬಿಡುತಿರಿ" ಎಂದು ಹೇಳಿ ಹೊರಟುಹೋದಳು. ಅತ್ತಿಗೆ ಒಂದೆರಡು ಮಾತನ್ನು ಹೆಚ್ಚಾಗಿ ಹೇಳಿದಾಗ ನಾದಿನಿ ಸಿಟ್ಟಿನಿಂದ

ಅತ್ತಿಗೆ ನಿನ ಕುಲವ ಒತ್ತರಿಸಿ ಕೇಳಾಳೆ
ಹತ್ತು ಸಾವಿರದ ಹಡಗೀನ—ಮೇಲ್ಬರುವ
ಮುತ್ತಿಗಿಂತ ನನ ಕುಲ ಮೇಲು.

೧೧

ಹೆಣ್ಣುಗಳಿಗೆಲ್ಲಾ ಮಕ್ಕಳ ಆಸೆ. ಮಕ್ಕಳೇ ಅವರ ಪ್ರಾಣ. ಮಕ್ಕಳಾಗದವಳ ಬಾಳು ವ್ಯರ್ಥ. ಮಕ್ಕಳಾದ ಕೂಡಲೆ ಹೆಣ್ಣಿಗೆ ಮನೆಯ ಯಜಮಾನಿಕೆ ಖಂಡಿತವಾಯಿತು. ಅವಳು ಮನೆಯ ರಾಣಿಯಾದಳು. ಆಗ ಎಲ್ಲರೂ ಅವಳನ್ನು ಗೌರವಿಸಲೇ ಬೇಕು. ತಾಯ್ತನದ ಜವಾಬ್ದಾರಿ ಅವಳಿಗೆ ಮಹತ್ವವನ್ನು ಕೊಡುತ್ತದೆ. ಆದುದರಿಂದ "ಹೊಟ್ಟೇಲಿ ಮಕ್ಕಳ ಕೊಡು ಶಿವನೇ" ಎಂಬುದೇ ಹೆಣ್ಣುಮಕ್ಕಳ ಬಯಕೆಯಾಗಿರುತ್ತದೆ. ವೈಧವ್ಯ ಹೆಣ್ಣಿಗೆ ಹೇಗೆ ನರಕವೋ ಮಕ್ಕಳಿಲ್ಲದ ಬಾಳೂ ಅಷ್ಟೇ ಭಯಂಕರ. "ಬಾಲಕರಿಲ್ಲದ ಬಾಲೆಯುದು ಯಾತರ ಜನ್ಮ; ಬಾಡಿಗೆ ಎತ್ತು ದುಡಿದಹಾಗೆ, ಬಾಳೆ ಎಲೆಯು ಹಾಸಿ ಉಂಡು ಒಗೆದ್ಹಂಗೆ." ಮಕ್ಕಳಿಲ್ಲದ ಮೇಲೆ ಯಾವ ವೈಭವವಿದ್ದರೆ ತಾನೆ ಫಲವೇನು ? "ಪಟ್ಟೆಯ ಉಟ್ಟರೇನು ಮುತ್ತು ಕಟ್ಟಿದರೇನು ಹೊಟ್ಟೇಲಿ ಫಲವಿಲ್ಲದ ಮೇಲೆ ಪಟ್ಟೆ ಉಟ್ಟು ಫಲವೇನು ? ಬಂಜೆಯ ಬಾಗಿಲ ಮುಂದೆ ಭಂಗಾರದ ಒರಳಕಲ್ಲು; ಬಂದು ಕುಟ್ಟುವ ಸೊಸೆಯಿಲ್ಲ, ಮಹಾನವಮಿಯ ಬನ್ನಿ ಚಿಗುರು ಮುಡಿಯುವ ಮಗ ಇಲ್ಲ." ಬಂಜೆ ಆದ

ವಳಿಗೆ ಎಲ್ಲೆಲ್ಲೂ ಯಾವ ಯಾವುದೂ ತನ್ನ ಬಂಜೆತನವನ್ನೇ ಜ್ಞಾಪಿಸು ತ್ತದೆ. ಅವಳ ಬಾಳು ವ್ಯರ್ಥ. ಪ್ರಕೃತಿ ಅವಳನ್ನು ಹಾಸ್ಯಮಾಡುತ್ತದೆ. ಬಂಜೆ ಬಾಗಿಲ ಮುಂದೆ ಅಂಜೂರ ಗಿಡಹುಟ್ಟಿ ಎಲೆಎಲೆಗೆ ಒಂದು ಗಿಣಿ ಕೂತು 'ಬಂಜೆ ನಿನ್ನ ಬದುಕು ಹೆರವರಿಗೆ' ಎಂದು ಹೇಳುತ್ತವೆ. ಮಕ್ಕಳಿ ದ್ದರೆ ತಾಯಿ ಬಡತನಕ್ಕೆ ಹೆದರುವುದಿಲ್ಲ. "ಬಡತನ ನನಗಿರಲಿ, ಬಹಳ ಮಕ್ಕಳಿರಲಿ, ನನ್ನ ಗುರುವೆ ನಿನ್ನ ದಯ ನನ್ನಮೇಲಿರ್ಲಿ; ಮಕ್ಕಳ ಚಿಂತೆ ನಿನಗಿರಲಿ" ಎಂದು ಬೇಡುತ್ತಾಳೆ. "ಟೊಪ್ಪಿಗೆ ಮಗನ ದಯಮಾಡೊ" ಎಂಬುದೇ ಎಲ್ಲಾ ದೇವರ ಮುಂದೆಯೂ ಹೆಣ್ಣು ಹೊರುವ ಹರಕೆ ಯಾಗಿರುತ್ತದೆ.

ಲೋಕದಲ್ಲಿ ಮಕ್ಕಳನ್ನು ಮುದ್ದಾಡದ, ಮುದ್ದಾಡಿ ತೃಪ್ತಳಾದ ತಾಯಿ ಯಾರು? ಮಕ್ಕಳು ಎಂದರೆ ತಾಯಿಗೆ ಸಾಮ್ರಾಜ್ಯ. ಮಕ್ಕ ಳನ್ನು ಹೆರುವ ಬೇನೆಯೇ ತಾಯಿಗೆ ಸೌಭಾಗ್ಯ. ಈ ಮುದ್ದು ಶ್ರೀರಾಮ ಚಂದ್ರನಲ್ಲಿ ಕೌಸಲ್ಯೆಗೆ ಹೇಗೋ, ಹೊಟ್ಟೆಗಿಲ್ಲದ ಬಡವಿಗೂ ತನ್ನ ಮಗುವಿ ನಲ್ಲಿ ಹಾಗೆಯೇ. ಬಡತನವಾದರೆ ಪ್ರೇಮಕ್ಕೆ ಕೊರತೆ ಇಲ್ಲ. ಬಸುರಿಯಾಗು ವುದೇ ತಡ; ಹೆಣ್ಣಿಗೆ ತನ್ನ ಮಗುವಿನ ಮಹಿಮೆಗಳು ಪ್ರಾರಂಭವಾಗು ತ್ತವೆ. ಬಸುರಿಯಾಬಾಗಿನಿಂದಲೇ ಹೆಣ್ಣಿನ ಸೌಭಾಗ್ಯ ಪ್ರಾರಂಭವಾಗು ತ್ತದೆ. "ಮೂರು ತಿಂಗಳಿಗೆ ಮುಖ ಬೆಳ್ಳಗಾಯಿತು." ಗೆಳತಿಯರು "ಹುಸಿ ಯಿಲ್ಲದೆ ಹೇಳು" ಎಂದು ಹಾಸ್ಯಮಾಡುತ್ತಾರೆ. "ಮುಖ ಹಸನಾಗಿ ಚಿನ್ನ ಎಸೆದಂತೆ." ಬಸುರಿಯಾದವಳಿಗೆ ಹೆಚ್ಚು ಒಡವೆ ಇಟ್ಟುಕೊಳ್ಳುವುದು ಸಾಧ್ಯ ವಿಲ್ಲ. ಅದರ ಭಾರವನ್ನು ಅವಳು ಹೊರಲಾರಳು. "ಮೂಗುತಿ ಮುಂಭಾರ ಎಣೆಗಂಟು ಹಿಂಭಾರ, ನನ ಗೆಣೆಯ ನೀ ತಂದ ಬಣ್ಣ ನೆರಿ ಬಾರ ಮೂರೆಳೆ ಗುಂಡು ಎದೆ ಭಾರ. ಸಣ್ಣನೆಯ ನಡುವಿಗೆ ಬಣ್ಣ ಉಟ್ಟರು ಭಾರ ಕೆನ್ನೆಗೆ ಭಾರ ಹರಳೋಲೆ ನನ ನಲ್ಲ ಬೆನ್ನೀಗೆ ಭಾರ ಶಿವದಾರ. ಎಲ್ಲರಿಗೂ ನಡಗರ. ಮಾಪ ಹೂವು ಮುಡಿಸಿದ. ಹಿಗ್ಗಿನಲ್ಲಿ ಹರಕೆಕೊಟ್ಟ. ಹೆಣ್ಣು "ಹೊಟ್ಟೆ ನೋವು ಎಂದಳು. ಪಟ್ಟೆ ಜವಳಿ ತೆಗೆದಳು, ಹಟ್ಟಿಗು ಹೊಲಕು ಓಡಾಡಿ ಪುಟ್ಟ ಬಾಲಕನ ಪಡೆದಳು."

ಈ ಕಂದನಿಗೆ, ಅನಂತರ ತೀರ್ಥಂಕರನಾಗುವ ಜಿನಶಿಶುವಿಗೆ ಆಗುವಂತೆ, ಅಭಿಷೇಕ ಎಣ್ಣೆಮಜ್ಜನ ನಡೆಯುತ್ತದೆ. ಅವನು ಲೋಕಪಾಲಕರ ಮಗು. ಪಾರುವತಿ ಪಡೆದ ಆ ಮಗನಿಗೆ ಅಚ್ಚಮುತ್ತೈದೇರು ಐವರು ಅಕ್ಷತೆ ಇಕ್ಕುತ್ತಾರೆ. ಆ "ರಾಜ್ಯವಾಳೋರ ಮಗನಿಗೆ ಆರೆಣ್ಣೆ ತೂರೆಣ್ಣೆ ಆರ್ಮಾ ನದ ಒಳ್ಳೆಣ್ಣೆ. ಪಟ್ಣವಾಳುವರ ಮಗನೀಗೆ ಹತ್ತೆಣ್ಣೆ ಒತ್ತೆಣ್ಣೆ ಹತ್ತುಮಾಸದ ಹರಳೆಣ್ಣೆ—ಹರಳೆಣ್ಣೆ ತಂಪು—ನಿಸ್ತ್ರೀರ ಕೈಯ ಉಗುರೆಣ್ಣೆ" ಒತ್ತುತ್ತಾರೆ. ಚಿನ್ನದ ದಾನಿಯ ಘಮ್ಮೆನ್ನುವ ಪನ್ನೀರನ್ನು ಚೆನ್ನೇರು ಐವರು ಬಾಳ್ವಂತರ ಮಗನಿಗೆ ಎರೆಯುತ್ತಾರೆ. ಐವರು ಚೆಲುವೆಯರು ಐವತ್ತು ವರಹ ತೊಡುಗೆಯ ತೊಟ್ಕೊಂಡು ಐರಣಕೆ ಹೊರಟು ನೀರು ತರುತ್ತಾರೆ. ಚೆನ್ನೇರು ಚಿನ್ನದ ಕಡಗಗಳ, ಚಿನ್ನದಾಭರಣಗಳ ಇಟ್ಟುಕೊಂಡು ನಡು ಬಾಗಿ ಮುಡಿ ಜೋಲಿ ಅಗ್ಗಿಣಿ ಎರೆಯುತ್ತಾರೆ. "ತೆಂಗಿನ ಮರಕ್ಕೆ ತಿಂಗಳಿಂದ ನೀರಿಲ್ಲ. ತಿಂಗಳ ಬಾಣಂತಿ ತಂಗ್ಯಮ್ಮ ಮಿಾದ ನೀರು ತೆಂಗಿನ ಮರಕೆ ಹರಿಯಿತು. ಮಿಾದ ನೀರು ಸೇತುವೆ ಕಟ್ಟಿ ಹರಿದಾವು."

ಇಂತಹ ಕೂಸು ಸಾಮಾನ್ಯವಾದುದಲ್ಲ. "ಎಲ್ಲರ ಮಕ್ಕಳಂತೆ ಅಲ್ಲ ನನ್ನ ಮಗ, ನಲ್ಲರಳಗಣ್ಣು ನಗೆಮುಖ ಕುಡಿಹುಬ್ಬು ಕಾಮನ ಬಿಲ್ಲಿನಂತೆ." ಆ ಬಾಲಕನ ಆಟ ಅಂಗಳದಾಗಿನ ನವಿಲಾಟ. ಚಿನ್ನದ ಉಂಗುರದವನು ಬೆಳ್ಳಿಯ ಗೆಜ್ಜೆ ಬೆಳಗೋನು.

ಮಲ್ಲಿಗೆ ಹೂವೆ ಇಲ್ಯಾಕೆ ನಿಂತಿದ್ದೆ
ಎಲ್ಲಾರ ಕಣ್ಣು ನಿನ ಮೇಲೆ—ಕಂದಯ್ಯ
ವಲ್ಲಿ ಸೆರಗೆಲ್ಲ ಪರಿಮಳ.

ಹಸುಮೊಗುವೆ ಚಿನ್ನಾವೆ ಮಿಸುನಿ ಹೊಂಬಣ್ಣಾವೆ
ಬಸುರೇರ ಹಣೆಯ ತಿಲಕಾವೆ—ನನ್ನಯ್ಯ
ಹೊಸ ಮುತ್ತ ಹೊನ್ನ ಕಲಶಾವೆ.

ಇಂತಹ ಕೂಸಿನ ಬಾಲಕೇಳಿಗಳಿಗೆ ಕೊನೆಮೊದಲು ಇಲ್ಲ. "ಕಾಯದ ಪಾಲ ಕೆನೆಬೇಡಿ" ಅಳುತ್ತಾನೆ. "ಕಾಡಿಗೆ ಹಚ್ಚಿದ ಕಣ್ಣು ತಿದ್ದಿಮಾಡಿದ ಹುಬ್ಬು; ಮಾವಿನ ಹೋಳಿನಂತೆ ಕಣ್ಣು. ಆಡಿ ಬಾ ನನ್ನ ಅಪರಂಜಿ ಚಿನ್ನಾವೆ.

ಯಾತ ಯಾತರ ಗಾಳಿ, ಎಲೆಯ ತೋಟದ ಗಾಳಿ ಸುಳಿಗಾಳಿ ನನ್ನಯ್ಯ ತೊಟ್ಟಿಲ ಗಾಳಿ ಮನೆತುಂಬ. ಅಂಬೆಗಾಲಿಕ್ಕುತ ದುಂಬಿಯು ಕರೆವನು, ಹಂಬಲಿಸಿ ತಾಯ ಮೊಲೆಯನ್ನು ತುಯ್ದಾಡಿ ಬೆಂಬಿಡದೆ ಹಾಲ ಕುಡಿವನು. ಆಡಿ ಬಾ ನನ ಕಂದ ಅಂಗಾಲು ತೊಳೆದೇನು, ತೆಂಗಿನಕಾಯ ತಿಳಿನೀರ ತಕ್ಕೊಂಡು ಭಂಗಾರ ಮೋರೆ ತೊಳೆದೇನು.'' ಇಂತಹ ಕೂಸು ಅತ್ತರೆ ಅಳಲಿ, ಕಷ್ಟವಿಲ್ಲ. "ಅತ್ತರೆ ಅಳಲವ್ವ ಈ ಕೂಸು ನನಗಿರಲಿ ಕೆಟ್ಟರೆ ಕೆಡಲಿ ಮನೆಗೆಲಸ, ಕಂದಸಂಥ ಮಕ್ಕಳಿರಲವ್ವ ಮನೆತುಂಬ.'' ಇಂಥ ಮಗು ಆದ ಮೇಲೆ ಗಂಡನ ಚಿಂತೆ ಹೆಂಡತಿಗೆ ಯಾಕೆ?

ತೋಳುದ್ದ ತಲೆದಿಂಬು ಮಾರುದ್ದ ಹಾಸಿಗೆ
ಮಾಣಿಕದಂಥ ಮಗ ಮುಂದೆ—ಮಲಗಿದರೆ
ಮಾರಾಯ್ರ ಗೊಡವಿ ನನಗೇನು.

ಬಂಜೆತನದ ಭಯದಿಂದಿದ್ದವಳು ಮಗುವಾದ ಮೇಲೆ ಯಾವ ದಾಯಾದಿಗಳಿಗೂ ಹೆದರುವುದಿಲ್ಲ.

ಬಾಣಂತಿ ಮನೆ ಮುಂದೆ ಹೋಗಿ ಬಾ ಅಣ್ಣಯ್ಯ
ಮತ್ತೊಂದು ತಮಟೇಯ ಹೊಯ್ಸೀವೆ—ನಿನ ಕಂಡು
ಬಾಗಾದಿ ಬಾಯ ಬಿಡುವಾಳು.

ಭಾಗಾದಿ ಬಾಯ ಬಿಟ್ಟುದನ್ನು ಕಂಡು ಮಗುವಿನ ಅಮ್ಮನೂ ಮರುಗುತ್ತಾಳೆ. ಭಾಗಾದಿಯಲ್ಲದೆ, ಮಕ್ಕಳಿಲ್ಲದ ಅಮ್ಮನೂ ಇಂತಹ ಗಂಡಿಗೆ ಕೊಡಲು ಹೆಣ್ಣು ತನಗೆ ಇಲ್ಲವಲ್ಲ ಎಂದು ಕೊರಗುತ್ತಾಳೆ.

ಸಣ್ಣಂಗಿ ತೊಡದೀರೊ ಸರಪಳಿ ಹಾಕದಿರೊ
ಚೆನ್ನಿಗ ನೀ ಇಲ್ಲಿ ಬರದೀರೋ—ನಿನ ಕಂಡು
ಹೆಣ್ಣಿಲ್ದ ಅಮ್ಮ ಮರುಗ್ಯಾಳು.

ತನ್ನ ಮಗುವನ್ನು ಕುರಿತು ಹಾಡುವಾಗ ಯಾವ ತಾಯಿಯೂ ಕವಯತ್ರಿಯೇ ಆಗುತ್ತಾಳೆ. ಪ್ರೇಮ ಅವಳ ಮಾತಿಗೆ ಆ ರಂಗನ್ನು ಕೊಡುತ್ತದೆ. ಹರಳು ಎಲೆ ಮುದ್ದು "ಬೆಳ್ಳಿ ತಾವರೆ ಮುದ್ದು ಹಣ್ಣುಳ್ಳ ಮರಕೆ ಗಿಣಿ ಮುದ್ದು; ಕಂದಯ್ಯ ನಮ್ಮ ಮನೆಗೆ ನೀ ಮುದ್ದು. ನನ್ನಯ್ಯ

ಜಾರೊ ಚಿನ್ನದ ಉಂಗುರದವನೆ ಬೆಳ್ಳಿಯ ಗೆಜ್ಜೆಯವನೆ ನಿನ್ನ ಜಡೆಯಲ್ಲಿ ಸಂಜೆ ಸಂಪಿಗೆ ಉದಯಾದ ಮಲ್ಲಿಗೆ ಮಧ್ಯಾಹ್ನದ ಮಡಿವಾಳ. ನಿನ್ನಮ್ಮ ಗಿಳಿಯ ಸಂತೈಸಿ ಬರುತಾಳೆ. ಹೊಳೆಯಿಂದು ಗಂಗೆ ತರುತಾಳೆ. ಅತ್ತಿಗವ್ವ ತಮ್ಮನ ತೊಟ್ಟಿಲ ಬಂದು ತೂಗು. ಕೊರಳ ಪದಕವ ಮುಚ್ಚಿಕೊ; ಬೆಳ್ಳಿಯ ಬೆಳಕಿಗೆ ಬೆಚ್ಚುತಾನೆ. ಸೀಗೆಮೆಳೆಯಲ್ಲಿ ಸಿಕ್ಕಿತು ಅರಗಿಣಿ ಕೊಕ್ಕೆಲ್ಲ ಮುತ್ತು ನವರತ್ನ. ತೊಟ್ಟಿಲ ಒಳಗೆ ಒಂದು ತೊಳೆದ ಮುತ್ತ್ನಸು ಕಂಡೆ ಹೊಟ್ಟೆ ಅಕ್ಕಳಿಸಿ ನಗುವವನ. ಅಂಬೆಗಾಲಿಕ್ಕುತ ತುಂಬಿಯ ಕರೆವನು, ಹಂಬಲಿಸಿ ತಾಯ ಮೊಲೆಯನ್ನು ತುಯ್ದಾಡಿ ಬೆಂಬಿಡದೆ ಹಾಲಕುಡಿವಾನು. ಜೀರಿಗೆ ನ್ಯೆಯವನು ಈರುಳ್ಳಿ ಮುಖದವನು, ಜಾಣಜಾಣರಿಗಿಂತ ಜಾಣ. ಜಾಜಿ ಹೂವಲ್ಲಿ ಗಿಣಿಮಾಡಿ ಜಾಣೆ ಅಕ್ಕಯ್ಯಗೆ ಕಳುಹೀದ. ಅಳುವ ಕಂದನ ತುಟಿ ಹವಳದ ಕುಡಿಹಾಗೆ, ಕುಡಿಹುಬ್ಬು ಬೇವಿನ ಎಸಳಿನ ಹಾಗೆ, ಕಣ್ಣು ನೋಟ ಶಿವನ ಕೈ ಅಲಗಿನ ಹಾಗೆ. ನನ್ನ ಬಾಲಚಕ್ರವರ್ತಿ ನಾಲಗೆ ಮೇಲೆ ಸರಸೋತಿ ಇರುವಂಥವನೆ. ಹಿಂಡುಮಕ್ಕಳ ಒಳಗೆ ನನ ಕಂದ ಪುಂಡು, ದುಂಡುಮಲ್ಲಿಗೆ ಮರನೇರಿ ಗಂಡುಳ್ಳ ಬಾಲೆ ತುರುಬೀಗೆ ಹೂಕೊಯ್ದ. ಗಾಳಿದೇವರ ಜತೆ ಗೂಳಿದೇವರು ಬಂದ, ಆಕಳ ಹಿಂದೆ ಕರ ಬಂದೊ, ನಲ್ಲನ ಹಿಂದೆ ಮಗ ಬಂದ. ಕೂಸು ಇದ್ದಮನೆಗೆ ಬೀಸಣಿಗೆ ಯಾತಕೆ? ಕೂಸು ಒಳಗೆ ಹೊರಗೆ ಆಡಿದರೆ ಬೀಸಣಿಗೆ ಗಾಳಿ ಸುಳಿದಾವು. ಕೂಸಲ್ಲ ಕುಂದಣ. ಸಂಜೆಯಾಯಿತು, ನಮ್ಮ ಸೌಭಾಗ್ಯದ ಸಂಜೆ, ದನ ಬಂದವು ಕರ ಬಂದವು ಸಿರಿಯ ತುಳಕೂತ ನಮ್ಮ ಬಾಲ ಬಂದ. ಹಲಗೆ ತೊಟ್ಟಿಲಲ್ಲಿ ಹವಳದ ಹಾಸಿಗೆ ಹಾಸಿ ಗುಲಗಂಜಿ ಚೆಂಡು ನಡುವಿಟ್ಟರೆ ಕಂದ ನ್ಮನ ಬಂದಂತೆ ನವಿಲಾಟವಾಡುತಾನೆ. ನೀರಿಲ್ಲದ ಊರು ನರಗುಂದ, ಕಂದಗೆ ಹಾಲಲ್ಲೆ ಮೊಕ ತೊಳೆದೆ. ತಲೆಬಾಗಿ ಎದ್ದ ನವಿಲುಪಕ್ಷಿ ಸಹ ಕಂದನ ಚೆಲುವೀಕೆ ನೋಡಿ ನಗುತಿತ್ತು." ಇಂತಹ ಮಗನನ್ನು ಕಂಡ ಮಹಿಳೆಯರೆಲ್ಲಾ ಬಸುರನ್ನು ಬಯಸಿದರು.

ತಾಯಿ ಗಂಡನನ್ನು ಮಾತ್ರ ಪ್ರೀತಿಸುತ್ತಾಳೆಂದಲ್ಲ. "ಹೆಣ್ಣು ನೆರೆಮನೆಯ ಸಿರಿದೇವಿ ಗಂಡು ಮನೆಯ ತೊಲೆಗಂಭ." ಆದರೂ ಇಬ್ಬರೂ ಒಂದೇ.

ಕಂದಾನ ಕರೆಯಮ್ಮ ಚೆಂದನದ ಗೊಂಬಿಯ
ಚೆಂದುಳ್ಳ ಅರಸಿ ಚೆಲುವೇಯ—ಕಂದನ
ಬಿಂದಿಗೇಲಿ ನೀರ ತರುವವಳ.

ಮಗು ಅತ್ತರೆ ಅದೂ ಸಂತೋಷವೇ. ಮಗು ಹೇಗೆ ಇದ್ದರೂ ತಾಯಿಗೆ ಬೇಸರಿಕೆ ಇಲ್ಲ.

ಕಂದಯ್ಯ ಅತ್ತಾರೆ ಕಣಗೀಲು ಚಿಗತಾವು
ಒಣಗಿದ್ದ ಬಾಳೆ ಚಿಗತಾವು—ಬಾಲನ
ಬರಡಾಕಳೆಲ್ಲ ಹೈನಾಗೆ.

ಇಂತಹ ಹುಡುಗನ ಆಟ

ಬಾಳೆಹಣ್ಣಿನ ಮಾಟ ಬಾದಾಮಿ ಎಲೆ ತೋಟ
ಬಾಗಿಲಾಗಾಡು ಮಗನಾಟ—ಕಲಕೇರಿ
ತೇರಿನ ಮಾಟ ಬಲು ಮಾಟ.

೧೨

ಮುತ್ತೈದೆತನ ಹೆಣ್ಣುಜೀವನದ ಸೌಭಾಗ್ಯ. ತಾಯ್ತನ ಜೀವನದ ಪರಿಪೂರ್ಣತೆ. ವೈಧವ್ಯ ಸ್ತ್ರೀಯರ ನರಕ. "ಸರದಾರ ನಿನ್ನಿಂದ ಸರುವೆಲ್ಲ ಮರೆತೇನು ಸರುವ ಬಳಗವ ಮರೆತೇನು" ಎಂದುಕೊಂಡು ಗಂಡನನ್ನೇ ನಂಬಿದ್ದ ಬಾಳಿಗೆ ಗಂಡನಿಲ್ಲದ ಬಾಳು ಬರಿಬಾಳಾಗಿ ತೋರುವುದು. ವಿಧವೆಯ ಬಾಳು "ಮಲ್ಲಿಗೆ ಮುಡಿದು ಅಂಗಳಕೆ ಒಗೆದಂತೆ" ವ್ಯರ್ಥವಾಗಿ ತೋರುವುದು. "ವಜ್ಜರ ಹಚ್ಚಿದ ವಾಲೆ ಗೆಜ್ಜೆಹಚ್ಚಿದ ಪಿಲ್ಲೆ ಹೆಜ್ಜೆ ಹೆಜ್ಜೆಗೆ ನಗಿಸುವ ರಾಯರೊಡನೆ ಮಾಡಿದ ಬಾಳು" ನಿತ್ಯಾನಿತ್ಯಾ ಜ್ಞಾಪಕ ಬಂದು ವಿಧವೆಗೆ ಜೀವನದಲ್ಲಿ ಬೇಸರಿಕೆಯನ್ನು ಹುಟ್ಟಿಸುವುದು. ಜೀವ ಏಕೆ ಉಳಿದಿದೆ? ಸಾವು ಏಕೆ ಬರಲೊಲ್ಲದು? "ಗಂಡ ಸತ್ತಮೇಲೆ ಇನ್ನು ಗಂಧ ಕುಂಕುಮವ್ಯಾಕೆ ಭಂಗಾರವ್ಯಾಕೆ ಬಳೆಯಾಕೆ ಕೊರಳಿನ ಸಿಂಗಾರ ಶಿವನೆ ಕಸಕೊಂಡ." ಒಂದು ಮಗುವಾದರೂ ಇದ್ದರೆ ಆ ಕುಡಿಯನ್ನು ನೋಡಿ ತಾಯಿ ತನ್ನ ದುಃಖವನ್ನು ನುಂಗುವಳು. ಇಲ್ಲದಿದ್ದರೆ ಅವಳ ಪಾಡು ನಾಯಿಪಾಡು. ಕಂದನ್ನೆತ್ತಲಿಲ್ಲ. ಕೈಬೀಸಿ ನಡೆಯಲಿಲ್ಲ, ಗಂಡನ

ಪುಣ್ಯ ಉಳಲಿಲ್ಲ. ಶಿವರಾಯ ರಂಡೆತನಕೆ ಹೀಗೆ ಗುರಿಯಾದೆ'' ಎಂದು ಕೊರಗುವುದೇ ಅವಳ ಪಾಲಿನ ಭಾಗ್ಯ.

ರೈತರಲ್ಲಿ ಸಾಮಾನ್ಯವಾಗಿ ಸಮಾಧಿಮಾಡುವುದೇ ಹೆಚ್ಚು. ಕುಳವಾಡಿಗೆ ಶ್ಮಶಾನದ ಯಜಮಾನಿಕೆಗಾಗಿ, ಹೆಣದ ಗುಂಡಿಯನ್ನು ತೆಗೆಯುವುದಕ್ಕೆ ಮಿರಾಸೆ ದೊರೆಯುತ್ತದೆ. ಸತ್ತವನಿಗೆ ಬಟ್ಟೆಯುಡಿಸಿ ಸಿಂಗರಿಸಿ ಶ್ಮಶಾನಕ್ಕೆ ತೆಗೆದುಕೊಂಡು ಹೋಗಿ ಗುಂಡಿಯಲ್ಲಿ ಮಲಗಿಸಿ ಮೇಲೆ ಉದ್ದವಾದ ಗರಿಬಾಳೆ ಎಲೆಯನ್ನು ಹೊದಿಸಿ ಮಣ್ಣನ್ನು ಎಳೆದು ಮುಚ್ಚುತ್ತಾರೆ. ದಾಯಾದಿಗಳಾದವರು ಮಾತ್ರ ನದಿಯಲ್ಲಿ—ಅಥವಾ ಕೆರೆಯಲ್ಲಿ ಸ್ನಾನಮಾಡಿ ಅಲ್ಲೇ ಅಗಸನು ತಂದುಕೊಡುವ ಮಡಿಯಾದ ಬಟ್ಟೆಯನ್ನು ಧರಿಸುತ್ತಾರೆ. ಸತ್ತ ಮರುದಿನ ನೆಂಟರಿಷ್ಟರೆಲ್ಲಾ ನೆರೆದು ಶವದ ಗೋರಿಯ ಮೇಲೆ ಮಣ್ಣನ್ನು ತಿದ್ದಿ ಹಾಲು ಮೊಸರು ಎಳನೀರು ಬಾಳೆಹಣ್ಣು ಇವುಗಳನ್ನು ಸತ್ತವರ ತೃಪ್ತಿಗಾಗಿ ಸಲ್ಲಿಸುತ್ತಾರೆ. ಸತ್ತವನ ದೂರದ ಎಲ್ಲಾ ನೆಂಟರೂ ಈ ಸೇವೆಯ ವೇಳೆಗೆ ಬಂದೇ ಬರುತ್ತಾರೆ. ಆತ್ಮಹತ್ಯ ಮಾಡಿಕೊಂಡಾಗಲಿ ಹಾವು ಚೇಳುಗಳಿಂದ ಕಡಿಸಿಕೊಂಡಾಗಲಿ ಸತ್ತವರಿಗೆ ಹತ್ತುದಿನದ ಮೇಲೆ ಹಾಲುತುಪ್ಪ ಬಿಡುತ್ತಾರೆ. ಅನಂತರ, ಸತ್ತವನ ಮಗನಾಗಲಿ, ಕರ್ಮಮಾಡುವ ಸಮೀಪದ ಬಂಧುವಾಗಲಿ ಅಥವಾ ತಲೆ ಬೋಳಿಸಿಕೊಂಡ ವಾರಸುದಾರನಾಗಲಿ ಬೆಣ್ಣೆಯ ಉಂಡೆ, ಅರಿಸಿನದ ಉಂಡೆ, ಸೀಗೆಕಾಯಿ ಉಂಡೆ ಇವುಗಳನ್ನು ಕೈಯಲ್ಲಿ ಹಿಡಿದುಕೊಂಡು ದೇವಸ್ಥಾನದ ಎದುರಿಗೆ ಬಂದು ಉಂಡೆಗಳಿಂದ ದೇವಸ್ಥಾನದ ಬಾಗಿಲಿಗೆ ಹೊಡೆದು ಸ್ವರ್ಗದ ಬಾಗಿಲನ್ನು ತೆರೆಯುವಂತೆ ಪ್ರಾರ್ಥಿಸುತ್ತಾರೆ. ಸೇವೆಮಾಡಿಕೊಂಡು ಮನೆ ಸೇರಿದ ಮೇಲೆ ತಿಥಿಯ ದಿನ ಮನೆಯನ್ನೆಲ್ಲಾ ಸಾರಿಸಿ, ರಂಗೋಲಿ ಇಕ್ಕಿ, ಹಳೆಕುಡಿಕೆ ಮಡಕೆ ಮೈಲಿಗೆ ಮುಸುರೆಗಳನ್ನೆಲ್ಲಾ ಬೀದಿಗೆ ಎಸೆದು, ಮನೆಯೊಳಗೆ ಶುದ್ಧವಾದ ಜಾಗದಲ್ಲಿ ಕಲಶವನ್ನಿಟ್ಟು, ಅದಕ್ಕೆ ವಸ್ತ್ರಾಭರಣಗಳನ್ನು ತೊಡಿಸಿ ಅದರ ಮುಂದೆ ಎಡೆ ಇಕ್ಕುತ್ತಾರೆ. ದೇವರಿಗೆ, ದೀಪದ ಗೂಡಿಗೆ, ಸೂರ್ಯ ಭಗವಂತನಿಗೆ ಕರ್ಪೂರ ಸಾಮ್ರಾಣಿ ಊದುಕಡ್ಡಿ ಇವುಗಳಿಂದ ಪೂಜೆಸಲ್ಲಿಸಿ ದಾಸನನ್ನು

ಕರೆದು ಆ ಎಡೆಯನ್ನು ಕೊಡುತ್ತಾರೆ. ದಾಸನು ದೇವರ ಪೂಜೆಯಾದ ನಂತರ ಯಜಮಾನನಿಗೆ ನಾಮವನ್ನು ಇಟ್ಟು ತೀರ್ಥವನ್ನು ಕೊಡುತ್ತಾನೆ. ಪುರುಷನಾದರೆ ವಿಭೂತಿ ಇಟ್ಟು ತೀರ್ಥವನ್ನು ಕೊಡುತ್ತಾನೆ. ಹೀಗೆ ಎಲ್ಲಾ ವಿಧದಲ್ಲಿಯೂ ಮೈಲಿಗೆಯನ್ನು ನಿವೃತ್ತಿಮಾಡಿಕೊಂಡು ಸತ್ತವನ ಬಂಧುಗಳು ಶುದ್ಧರಾಗುವರು. ತಿಥಿಯ ದಿನ ನೆಂಟರಿಷ್ಟರೆಲ್ಲಾ ಸೇರಿ ಮೃತನ ಗುಣಕಥನ ಮಾಡುತ್ತಾರೆ. ಹನ್ನೆರಡನೆಯ ದಿನದ ಬೆಳಗ್ಗೆ ಶವದ ಸಮಾಧಿಯ ಮಗ್ಗುಲಲ್ಲಿ ಎಳನೀರು ಹಾಲು ಹೊಂಬಾಳೆ ಇರಿಸಿ ಪೂಜೆಮಾಡಿ ದಾಸನು, ಸತ್ತವನು ಸ್ವರ್ಗಕ್ಕೆ ಹೋದನೆಂದು ಗಟ್ಟಿಯಾಗಿ ಹೊಗಳುತ್ತಾನೆ. ಹೀಗೆ ಸತ್ತವನ ಕರ್ಮಗಳು ಶಾಂತವಾಗಿ ಸಾಂಗವಾಗಿ ನಡೆಯುತ್ತವೆ. ಹುಟ್ಟಿ ಸಾಯುವವರೆಗೆ ಭೂಮಿತಾಯಿಯ ಸೇವೆಮಾಡಿ, ಲೋಕಕ್ಕೆಲ್ಲಾ ದುಡಿದು ಹಾಕುವ ಆ ಕರ್ಮಯೋಗಿ ಸ್ವರ್ಗಕ್ಕೆ ಹೋಗದೆ ಮತ್ತೆಲ್ಲಿಗೆ ತಾನೆ ಹೋದಾನು! ತೊನ್ನು ಹಿಡಿದವರನ್ನು ಹೂಳಿದರೆ ಪೈರು ಒಣಗಿಹೋಗುವುದೆಂದು ನಂಬಿಕೆ ಇರುವುದರಿಂದ ಅವರನ್ನು ಸುಟ್ಟು ಬಿಡುತ್ತಾರೆ.

ಗಂಡ ಸತ್ತಮೇಲೆ ಅನೇಕ ಹೆಂಗಸರು ವಿಧವೆಯರಾಗಿಯೇ ಇರುತ್ತಾರೆ. ಕೆಲವರು ಬೇರೆ ಗಂಡನನ್ನು ಶಾಸ್ತ್ರ ಮತ್ತು ಪದ್ಧತಿಗಳಿಗನುಸಾರವಾಗಿ ತಾಳಿಕಟ್ಟಿಕೊಳ್ಳುತ್ತಾರೆ. ಗಂಡನಾಗುವವನು ಹೆಣ್ಣಿನ ಊರಿನವರಿಗೆ ಊಟಮಾಡಿಸಿ, ಹೆಣ್ಣನ್ನು ತನ್ನ ಊರಿಗೆ ಕರೆದುಕೊಂಡು ಹೋಗುವಾಗ ದಾರಿಯಲ್ಲಿ ಅವಳಿಗೆ ತಾಳಿಕಟ್ಟಿಬಿಡುವನು. ಹೆಂಗಸು "ತಾಲಿಯನ್ನು ಬಿಟ್ಟಿರಲಾರದೆ ಮತ್ತೆ ಮದುವೆ ಮಾಡಿಕೊಂಡೆ" ಎಂದುಕೊಳ್ಳುವಳು. ಗಂಡನಾಗುವವನು ತಾಲಿಯ ಜತೆಯಲ್ಲಿ ಸೀರೆ ಉಡಿಸುವಾಗ ಅದಕ್ಕೆ ಸೀರುಡಿಕೆ ಎಂದು ಹೆಸರು. ಅಂತೂ ಸಮಾಜದಿಂದ ಅಂಗೀಕಾರವಾದ ರೀತಿಯಲ್ಲಿ ಅಲ್ಲದೆ ಸ್ತ್ರೀಪುರುಷರು ಒಟ್ಟಿಗೆ ಇರಲು ಸಾಧ್ಯವೇ ಇಲ್ಲ. ಹಾಗೆ ಯಾರಾದರೂ ಮೀರಿ ನಡೆದರೆ ಗ್ರಾಮಸ್ಥರು ಅವನನ್ನು ಹಿಡಿದು ವಿಚಾರಣೆಮಾಡಿ ದಂಡವನ್ನು ಹಾಕುತ್ತಾರೆ. ದಂಡವನ್ನು ಕೊಡಲು ಒಪ್ಪದಿದ್ದವರಿಗೆ ಬಹಿಷ್ಕಾರ ಹಾಕಿಸುತ್ತಾರೆ. "ಯಾರೂ ಇವನ ಜತೇಲಿ

ಬಳಕ್ಬೋಜನ ಮಾಡೋಕಾಗ್ದು ಆಳುಕಾಳು ಹೋಗೋಕಾಗ್ದು. ಇವ್ನ ಹತ್ತು ಜನದ ಮಾತ ಮೀರವ್ನೆ. ಹಂಗೇನಾದ್ರು ಮಾಡಿದ್ರೆ ನಿಮ್ನೂ ಬೇರೆಮಾಡ್ತೀವಿ. ನಿಮ್ಗೂ ದಂಡ ಹಾಕ್ತೀವಿ. ಸಾರ್ಲಿಲ್ಲ ಅಂದೀರಿ ಕಣ್ರಯ್ಯ" ಎಂದು ಪ್ರಕಟಿಸುತ್ತಾರೆ. ಅಂತೂ ಒಂದೆರಡು ದಿನದಲ್ಲಿ ತಪ್ಪಿತಸ್ಥನು ದಾರಿಗೆ ಬರುತ್ತಾನೆ.

ರೈತರಲ್ಲಿ ಗಂಡ ಸತ್ತ ಮಾತ್ರಕ್ಕೆ ಸ್ತ್ರೀ ಅನಾಥೆಯಾಗುವುದಿಲ್ಲ. ಹೆಣ್ಣು ಅರೋಗದೃಢಕಾಯಳಾಗಿ ಕಟ್ಟುಮಸ್ತಾಗಿದ್ದರೆ ಯಾರಾದರೂ ಬಂದು ಅವಳನ್ನು ಮದುವೆಯಾಗಿ ಅವಳೊಂದಿಗೆ ಸಂಸಾರಮಾಡುತ್ತಾರೆ. ಗಂಡ ನಿಲ್ಲದ ಹೆಂಡತಿಯೂ ಹೆಂಡತಿಯಿಲ್ಲದ ಗಂಡನೂ ಸೇರಿಕೊಂಡು ಹೊಸ ಸಂಸಾರವನ್ನು ಹೂಡಿ ಹೊಸ ಜೀವನವನ್ನು ಪ್ರಾರಂಭಿಸುತ್ತಾರೆ. ರೈತರು ಅದಕ್ಕೆ ಬೇಕಾದ ರೀತಿಯಲ್ಲಿ ಅನುಕೂಲವನ್ನು ಕಲ್ಪಿಸಿಕೊಳ್ಳುತ್ತಾರೆ. ಮುಖ್ಯ, ಯಾರೂ ಸಮಾಜಕ್ಕೆ ವಿರೋಧವಾಗಿ ಹೋಗಕೂಡದು. ಒಳ್ಳೆಯ ಹೆಣ್ಣು ಇದ್ದರೆ, ಗಂಡ ಸತ್ತವಳಾದರೂ ಜನ ಅವಳನ್ನು ಔದಾಸೀನ್ಯದಿಂದ ಬಿಡುವುದಿಲ್ಲ.

ಹಾಕಿದ ಮಲ್ಲಿಗೆ ಹಾಕಿದ್ಹಂಗೆ ಇದ್ದಾದ
ಆಕಾಶಕ್ಹಬ್ಬಿ ಕುಡಿ ಒಡೆದು—ಹೂ ಬಿಟ್ಟು
ಬೇಕಾದ ದೊರೆಗೊಳು ಮುಡಿವಾರು.

ಆದರೆ ತಾಲಿ ಕಟ್ಟಿಕೊಳ್ಳದಿದ್ದರೆ ಜನ ಹೆಣ್ಣಿನ ಅಂದವನ್ನು ಒಪ್ಪುವುದೇ ಇಲ್ಲ. "ಗಂಡ ಸತ್ತವಳಿಗೆ ಎಂಟೆಂಟು ದಿನ ಸಂತೆ, ಹಣತೆಯ ಎಣ್ಣೆ, ಬೊಕ್ಕತಲೆ ತಕ್ಕೊಂಡು ಬಾಳೊ ಹುಡುಗರ ಬಾಳ ಹರಿದಾಳು" ಎಂದು ಜನ ಆಕ್ಷೇಪಿಸುವರು. ರೈತರ ಸಮಾಜದ ಕಟ್ಟುಗಳು ಉಕ್ಕಿನ ಕಟ್ಟುಗಳಲ್ಲ. ಮನುಷ್ಯ ಸ್ವಭಾವಕ್ಕೆ ಅನುಸಾರವಾಗಿವೆ. ಮದುವೆಯಾಗದಿದ್ದರೆ ತಾಲಿ ಕಟ್ಟಿಕೊಳ್ಳಲಿ. ಅದೂ ಆಗದಿದ್ದರೆ ಸೀರುಡಿಕೆ ಮಾಡಿಕೊಳ್ಳಲಿ. ಅಂತೂ ಸಮಾಜವನ್ನು ಒಪ್ಪಿಸಿ ಹೆಣ್ಣು ಗಂಡು ಸುಖವಾಗಿ ಬಾಳಲಿ, ಎಂಬುದೇ ಅವರ ಸಂಸ್ಕೃತಿಯ ಗುರಿ. ಈ ಸಡಿಲವಾದ ಕಟ್ಟಿನಿಂದ ಎಷ್ಟೋ ಸಂಸಾರಗಳ ಉದ್ಧಾರವಾಗಿದೆ.

೬. ಈ ಸಾಹಿತ್ಯದ ಸೊಗಸು

೧

ಬಾಳನ್ನು ತಿದ್ದುವ ಈ ಸಾಹಿತ್ಯ ಅನೂಚೀನವಾಗಿ ಬೆಳೆದು ಬಂದಿದೆ. ಜೀವನದ ಹೋರಾಟ ಇಷ್ಟು ಪ್ರಬಲವಾಗಿ ಇರದೆ ಇದ್ದಿದ್ದರೆ ಈಗಲೂ ಆ ಸಾಹಿತ್ಯದ ಕುಡಿಗಳು ಚಿಗುರುತ್ತಿದ್ದುವೆಂಬುದರಲ್ಲಿ ಸಂದೇಹವಿಲ್ಲ. ಈಗ ದೊರೆತಿರುವಷ್ಟರಿಂದಲೇ, ರೈತನ ಜೀವನ ಎಷ್ಟು ಅನುಭವಪೂರ್ಣವಾದುದು, ಕೂರಾದುದು, ಕಾವುಳ್ಳುದು ಎಂಬುದು ಗೊತ್ತಾಗುತ್ತದೆ. ಜೀವನವನ್ನು ಅದರ ಉಚ್ಚ ನೀಚದಲ್ಲಿ ಕಷ್ಟಸುಖದಲ್ಲಿ ಆಳಅಗಲದಲ್ಲಿ ಚೆನ್ನಾಗಿ ಅನುಭವಿಸಿ ರೈತ ಮನಸ್ಸನ್ನು ಪರಿಪಕ್ವತೆಗೆ ತಂದುಕೊಂಡಿರುತ್ತಾನೆ. ಅತಿಯಾದ ತರ್ಕದ ಗೊಡವೆಯೂ ವಾದವಿವಾದದ ಜಟಿಲತೆಯೂ ಅವನಿಗೆ ಬೇಕಿಲ್ಲ. ಅವನು ಅನುಸರಿಸುವ ನೀತಿಯ ಮಾರ್ಗ ಅವನಿಗೆ ಸ್ಪಷ್ಟವಾಗಿದೆ. ಸತ್ಯಕ್ಕೆ ಎಂದಿಗೂ ಸಾವಿಲ್ಲ ಎಂದು ತಿಳಿದ ಮೇಲೆ, ಒಂದೊಂದು ವೇಳೆ ಸುಳ್ಳಿಗೂ ಸಾವಿಲ್ಲವೆಂಬ ಮಾತಿನಿಂದ ಸತ್ಯದ ಅಮೃತತ್ವದಲ್ಲಿ ಅವನ ನಂಬಿಕೆ ಕಡಿಮೆಯಾಗುವುದಿಲ್ಲ.

ಸತ್ಯವುಳ್ಳ ಪಾಂಡವರು ಸತ್ತಾರೆಂದು ಎನಬೇಡ ಸತ್ತಾರೆ ಲೋಕ ಉಳಿಯದೋ
ಮಂಟಪದ ಮನೆಕಟ್ಟಿ ಪಾಂಡವರು ಲೆತ್ತನಾಡಿ ಮತ್ತೆ ಸೋತರೊ
ಇಂಬೀಯ ವನದಲ್ಲಿ ತಳಗಿದ್ದ ಇವನ್ಯಾರೊ ಇಂಬೀಯ ಹಣ್ಣ ಒಲೆಹೂಡಿ
ಇಂಬಿಯ ಹಣ್ಣ ಒಲೆಹೂಡಿ ಅಟ್ಟುಂಡು ಮೂಡ ಹೋಗವ್ರೆ ವನದೇಶ
ಬಡಗ ಹೋಗವ್ರೆ ವನದೇಶ.

ಪಾಂಡವರ ಎತ್ತು ಹೋಗಿ ಕಾಡ ಮೊಲವಾದೊ
ಎತ್ತು ಹೋಗಿ ಕಾಡ ಮೊಲವಾದೊ ಪಾಂಡವರ ಎಮ್ಮೆ ಹೋಗಿ ಕಾಡ ಕಡಬ್ಯಾದೊ
ಕುರಿ ಹೋಗಿ ಕಾಡ ಇರುವ್ಯಾದೊ ಪಾಂಡವರ ಗಂಗಳಾ ಹೋಗಿ ತಾವರೆ ಎಲೆ ಆದೊ
ಚೆಂಬು ಹೋಗಿ ಅವರ ತುಂಬೆಗಿಡವಾದೊ ಎಣ್ಣೆ ಹೋಗಿ ಕಾಡ ಗೊರವ್ಯಾದೊ
ಸತ್ಯವುಳ್ಳ ಪಾಂಡವರು ಸತ್ತಾರೆಂದೆನಬೇಡ ಸತ್ತಾರೆ ಲೋಕ ಉಳಿಯಾದೊ
ಸತ್ತಾರೆ ಲೋಕ ಉಳಿಯಾದು ಪಾಂಡವರು ಬಿತ್ತಿ ಹೋಗವ್ರೆ ಅವರೇಯ.

ಪಾಂಡವರ ಎಣ್ಣೆಹೋಗಿ ಕಾಡಗೊರವಿ ಆಯಿತು. ಆ ರೂಪದ ಸತ್ವ ಹೋಗಿ ಈ ರೂಪದಲ್ಲಿ ಉಳಿಯಿತು.

ರೈತನ ಜೀವನದಲ್ಲಿ ಶಿಸ್ತು ಇರುವುದರಿಂದ ಅವನು ಯಾವ ಕೆಲಸವನ್ನೂ ಚೆನ್ನಾಗಿ ಮಾಡುತ್ತಾನೆ.

ನಾಮಾನಿಕ್ಕಿದ್ರೆ ನೇಮದಿಂದಿಕ್ಕಬೇಕು ನಾಲ್ವರ ಎಂಜಲ ಬಿಡಬೇಕು
ಗಂಧನಿಕ್ಕಿದ್ರೆ ಚೆಂದಾದಿಂದಿಕ್ಕಬೇಕು ಕಂಡೋಲ ಎಂಜಲ ಬಿಡಬೇಕು.

ಈ ಜೀವದ ಆಸೆ ಬಯಕೆ ನೆಚ್ಚು ಕೆಚ್ಚು ಭಯ ನಯ ರಾಗ ದ್ವೇಷ ಕಾವು ಇವುಗಳನ್ನು ವರ್ಣಿಸುವ ಮಾತುಗಳಾದರೂ ರೈತನ ಬಾಳಿನಂತೆಯೇ ಸರಳವೂ ನೇರವೂ ಆಗಿವೆ. ಇವುಗಳಲ್ಲಿ ಮಾತಿನ ಆಡಂಬರವಿಲ್ಲ. ವರ್ಣನೆಯಲ್ಲಿ ಕಣ್ಣಿಗೆ ಕಾಣದ ದೂರದ ಹೋಲಿಕೆಯಿಲ್ಲ. ಮಾತುಗಳು ನೇರವಾಗಿ ಹೃದಯದಿಂದ ಹೊರಟು ಹೃದಯವನ್ನೇ ಮುಟ್ಟುತ್ತವೆ. ಅಲಂಕಾರ ಕವಿಸಮಯ ಇವುಗಳ ರಹಸ್ಯಗಳಿಲ್ಲ. ರೈತ ವರ್ಣನೆಯಲ್ಲಿ ಕಣ್ಣಿಗೆ ಕಾಣದುದಾವುದನ್ನೂ ಹೇಳುವುದಿಲ್ಲ. ನಿತ್ಯಜೀವನದಲ್ಲಿ ಅವನ ಕಣ್ಣಿಗೆ ಕಾಣುವುದನ್ನೇ ಹೇಳುತ್ತಾನೆ. ಅವನು ಹೇಳುವುದು ಕಾವ್ಯವೇ ಆದರೂ ಮಾತುಗಳಿಗಾಗಿ ಅವನು ಹುಡುಕಬೇಕಾದುದಿಲ್ಲ.

ಮುತ್ತಿಗೆರೆ ಎಂಬುದು ಮೇಲುಕೋಟೆಗೆ ಏಳೆಂಟು ಮೈಲಿ ದೂರದಲ್ಲಿರುವ ಸಣ್ಣಹಳ್ಳಿ. ಅದರ ಕೆರೆ ಬಲುಭಾರಿ. ಅದರ ವರ್ಣನೆ ಸುಲಭ.

ಮೂಡಲ್ಮುತ್ತಿನ್ಕೆರೆ ನೋಡೋರಿಗೊಂದ್ವೈಭೋಗ
ಮೂಡಿ ಬರ್‍ತಾನೆ ಚಂದ್ರಾಮ—ತಾ ನಂದನ
ಮೂಡಿ ಬರ್‍ತಾನೆ ಚಂದ್ರಾಮ.

ಬಾಳೆಯ ಗಿಡದ್ಹಂಗೆ ಬಾಗಿದ್ಮುತ್ತಿನ ಕೆರೆ
ಭಾವಾ ತಂದಾನೆ ಬಣ್ಣದ ಸೀರೆ—ತಾ ನಂದನ
ಭಾವಾ ತಂದನೆ ಬಣ್ಣದ ಸೀರೆ.

ನಿಂಬೆಹಣ್ಣಿನಂತೆ ತುಂಬಿದ್ಮುತ್ತಿನಕೆರೆ
ಅಂದ ನೋಡೋಕೆ ಶಿವ ಬಂದ್ರು— ತಾ ನಂದನ
ಅಂದ ನೋಡೋಕೆ ಶಿವಬಂದ್ರು.

ಅಂದಾ ನೋಡೋಕೆ ಶಿವ ಬಂದ್ರು ಶಿವಮುಗ್ಗಿ
ಕಬ್ಬಕ್ಕಿ ಬಾಯ ಬಿಡುತಾವೆ—ತಾ ನಂದನ
ಕಬ್ಬಕ್ಕಿ ಬಾಯ ಬಿಡುತಾವೆ.

ಹಾಕೋಕೊಂದಾರುಗೋಲು ನೂಕೋಕೊಂದೂರುಗೋಲು
ಬೊಬ್ಬೆಯಾಡ್ತಾವೆ ಬಾಳೆಮೀನು—ತಾ ನಂದನ
ಬೊಬ್ಬೆಯಾಡ್ತಾವೆ ಬಾಳೆಮೀನು.

ಬೊಬ್ಬೆ ಹೊಡೆದಾವು ಬಾಳೆಮೀನ್ಕೆರೆಯಾಗೆ
ಗುಬ್ಬಿ ಸಾರಂಗ ನಗುತಾವೆ—ತಾ ನಂದನ
ಗುಬ್ಬಿ ಸಾರಂಗ ನಗುತಾವೆ.

ಭಾವಗಳು ಆಳವಾದುವು. ಮಾತು ಸರಳವಾದುದು. ಹೀಗೆ ಹೇಳಬೇಕಾದುದನ್ನು ನೇರವಾಗಿ ಹೇಳುವುದರ ಫಲವಾಗಿ ರೈತನ ಮಾತಿನಲ್ಲಿ ಒಂದು ಅಕ್ಷರವೂ ಹೆಚ್ಚಾಗಿ ಸೇರುವುದಿಲ್ಲ. ಒಂದು "ಪದ"ವೇ ಕಾವ್ಯ ಅಥವಾ ನಾಟಕದ ಸೂಚನೆಯಂತೆ ಆಗುತ್ತದೆ. ಅದರ ಮೇಲೆ ಎಷ್ಟು ಬೇಕಾದರೂ ಕಟ್ಟಬಹುದು.

ಸೂಳೆಗೆ ಹೋದವನು ಏನಾದ ಎಂತಾದ
ಕಾಡುನಾಯಾದ ಕಪಿಯಾದ—ಆ ಮುರವ
ಸೂಳೆ ಕಾಲಿಗೆ ಕೆರವಾದ.

ಈ ಒಂದು ಸೂಚನೆಯಲ್ಲಿ ಒಂದು ದೊಡ್ಡ ನಾಟಕದ ತಿರುಳನ್ನೆಲ್ಲಾ ಹೇಳಿದ್ದಾನೆ. ಇದರ ಮೇಲೆ ಒಂದು ಕಾವ್ಯವನ್ನೇ ಬರೆಯಬಹುದು.

೨

ನಮ್ಮ ರೈತನ ಬಾಳನ್ನು ಬೆಳಗುವ ಸಾಹಿತ್ಯ ವಿದ್ಯೆ ಸಂಸ್ಕೃತಿ ಎಲ್ಲಾ ಇದೇಯೆ. ಇದೇ ಆವನ ಸಂಸ್ಕೃತಿಯ ಮೂಲ. ರೈತ ಈ ಸಾಹಿತ್ಯದಲ್ಲಿ ತನ್ನ ಬಾಳಿನ ಬಗೆಬಗೆಯ ಅವಸ್ಥೆಗಳನ್ನು ಹಾಡಿ ತೋರಿಸಿದ್ದಾನೆ. ಮಾತುಗಳು ಸೂಕ್ಷ್ಮವಾದರೂ ಸ್ಪಷ್ಟವಾಗಿವೆ. ಹೇಳಬೇಕಾದ ಭಾವಗಳೆಲ್ಲಾ ಆ ಮಾತುಗಳಲ್ಲಿ ಅಡಕವಾಗಿವೆ. "ಬುದ್ಧಿವಂತನ ಮಡದಿ ಇದ್ದಳು ಗದ್ದುಗೆ ಮೇಲೆ, ಬುದ್ಧಿಯಿಲ್ಲದ ಪೆದ್ದನಿನ ಮಡದಿ ಬಡ್ಡಿಗೆ ನೀರು ಹೊರು

ತಾಳೆ. ಸಾಲ ಎಂಬುದು ಬಹಳ ಕೆಟ್ಟದು. ಕಡಹುಟ್ಟಿ ಬಡವ ಕೆಟ್ಟ ಎಂಬ ಗಾದೆ. ಕಡ ಅಂದ್ರೆ ಹೊಡಿ ನನ್ನ ಮನೆಗಂಟ ಎಂದ. ಕಡ ಸಿಕ್ಕಿದ ಮೇಲೆ ಕದಿಯುವುದು ಯಾಕೆ? ಸಾಲ ಮಾಡಿದವನು ಎಷ್ಟೇ ದೊಡ್ಡವ ನಾದರೂ ಅವನ ಮಾನ ಉಳಿಯುವುದಿಲ್ಲ. ಸರಿಗೆ ಪಂಚೆ ಉಟ್ಟು ಬೆರಳಿಗೆ ಉಂಗುರ ಧರಿಸಿ ಸರಿಯವರ ಕೂಡ ಬರುವಾಗ ಸಾಲಗಾರ ಸೆರಗಹಿಡಿದು ನಿಲಿಸಿಬಿಡುವನು. ಸೂಳೆಗಾರಿಕೆ ಮಾಡಬಾರದು. ತಂಬಿಟ್ಟಿಗೆ ಉಪ್ಪುಂಟೆ ತವರಿಗೆ ಮುಪ್ಪುಂಟೆ ದೊಂಬನ ಮನೆಗೆ ಕದವುಂಟೆ; ಸೂಳೆ ಸಂಜಿದವನಿಗೆ ಸಂಸಾರವುಂಟೆ? ಸಾಲಸೋಲಮಾಡಿ ಸೂಳೆಯ ಮನೆಗೆ ಹೋದ; ಸಾಲಿ ಗನು ಬಂದು ಕೈಕಟ್ಟಿ ಹೊಡೆವಾಗ ಸೂಳೆ ದಮ್ಮಯ್ಯ ಹೊಣೆಯಾಗು ಎಂದು ಅಂಗಲಾಚಿದ. ಆದರೆ ಸೂಳೆ ಎಂದಿಗಾದರೂ ಹೊಣೆಯಾಗು ತ್ತಾಳೆಯೆ? ನಾನು ಹೊಣೆಯಾಗೋಕೆ ನಾನು ಯಾರು ನೀನು ಯಾರು? ನಾನೇನು ನಿನ್ನ ಹೆಂಡತಿಯೆ? ಸಾವಿರಮುಟ್ಟಿ ಹಣಮುಟ್ಟಿ ತಂದವಳ ಹೊಣೆ ಮಾಡು ಎಂದಳು. ವಯಸ್ಸಾದ ಮೇಲೆ ಹುಡುಗಾಟ ಇರಬಾರದು. ಗಂಭೀರವಾಗಿ ಇರಬೇಕು. ಕಾಳಿಗೆ ಒಡವೆ ಏಕೆ ಬೋಳಿಗೆ ತುರುಬೇಕೆ ಬಡವನ ಮಡದಿಗೆ ಬೆಡಗೇಕೆ?"

ಈ ಮಾತುಗಳೆಲ್ಲಾ ಲೋಕಾನುಭವಪೂರ್ಣವಾಗಿವೆ. ಸಾಲಕ್ಕೆ ಕೊನೆಯಿಲ್ಲ ಆಲಕ್ಕೆ ಹೂವಿಲ್ಲ ತವರಿಗೆ ಮಾತು ತಂದವಳು ಮಗಳಲ್ಲ. ಹೆಣ್ಣು ನಾಲಗೆಯನ್ನು ಬಹಳ ಹಿಡಿತದಲ್ಲಿ ಇಟ್ಟಿರಬೇಕು, ಅತಿಯಾಗಿ ಮಾತನಾಡಬಾರದು. ಮಾತ್ಗಂಟಿ ಮಗಳಲ್ಲ ತಾಟ್ಗಿತ್ತಿ ಸೊಸೆಯಲ್ಲ, ತೂಪರದ ಚೆಕ್ಕೆ ಒಲೆಗಲ್ಲ. ಮನುಷ್ಯ ಮದುವೆಯಾಗಿ ಗಂಭೀರವಾಗಿ ಸಂಸಾರ ನಡೆಸಬೇಕು. ಸೂಳೆಯೊಂದಿಗೆ ಸಂಸಾರ ಮಾಡಿದರೆ ಏನು ಪ್ರಯೋಜನ? ಮಂಜು ಮರಳಲ್ಲ, ಮರಳು ಸಕ್ಕರೆಯಲ್ಲ ಮಡಗಿದ್ದ ಸೂಳೆ ಸ್ಥಿರವಲ್ಲ. ಹೆಣ್ಣಿಗೆ ತಾಯಿಗಿಂತ ಬೇರೆ ಹಿತವಿಲ್ಲ; ಹಣ್ಣು ಹಾಲಿಗಿಂತ ಬೆಣ್ಣೆ ಸಕ್ಕರೆಗಿಂತ ಚೆನ್ನಾಗಿ ಕಳಿತ ರಸಬಾಳೆ ಹಣ್ಣಿಗಿಂತ ತಾಯ ಎದೆ ಹಾಲು ಚೆನ್ನ. ಸಾವಿರ ಸೌದೆ ಒಲೆಯಲ್ಲಿ ಉರಿದರೂ ದೀವಿಗೆಯಂತ ಬೆಳಕುಂಟೆ? ಹಾಗೆಯೇ ನೂರಾರು ಹಿತವಂತರಿದ್ದರೂ ತಾಯಿಯಿದ್ದಂತೆ

ಆಯಿತೆ? ಹೆಣ್ಣಿಗೆ ತಾಯಿಯ ಆಸೆ ಸ್ವಾಭಾವಿಕ. ಕಣ್ಣಿಗೆ ಕಪ್ಪಿನ ಆಸೆ ಬಣ್ಣಕ್ಕೆ ಸೆರಗಿನ ಆಸೆ ಹೇಗೋ ಹಾಗೆ. ತಾಯಿ ಇದ್ದ ಮೇಲೆ ಉಳಿದವರ ಹಂಗು ಯಾಕೆ? ಅಚ್ಚಕ್ಕಿ ಇದ್ದಾಗ ನುಚ್ಚಕ್ಕಿ ಹಂಗೇಸು; ತಾಯಮ್ಮ ಇದ್ದಾಗ ಉಳಿದವರ ಸಂಗ ನಮಗೇಸು? ಆದರೆ ಲೋಕದಲ್ಲಿ ಯಾವುದೂ ಸ್ಥಿರವಲ್ಲ. ಈ ನಿಯಮಕ್ಕೆ ತಾಯಿಯ ಮನೆಯೂ ಹೊರಗಲ್ಲ; ಜಾಲಿಯ ಮರ ನೆರಳಲ್ಲ. ತಾಯಿಯಿಲ್ಲದ ತವರಿಗೆ ಹೋಗುವುದು ಕಷ್ಟ. ನೀರಿಲ್ದ ಕೆರೆಗೆ ಕರ ಬಂದು ತಿರುಗಿದಂತೆ; ತಾಯಿಯಿಲ್ದ ಮೇಲೆ ತವರು ತವರಾದೀತೆ? ನಾದಿನಿಯು ತವರಲ್ಲ, ಬೇಗಡೆ ಕೊಪ್ಪಲ್ಲ, ಒಣಗಿದ್ದ ಮರ ನೆರಳಲ್ಲ.

ಹೀಗೆ ರೈತ ಹೇಳುವ ಮಾತುಗಳಿಗೆಲ್ಲಾ ಸಾಮ್ಯಗಳನ್ನು ಹೋಲಿಕೆ ಗಳನ್ನು ಉದಾಹರಣೆಗಳನ್ನು ಕೊಟ್ಟುಕೊಂಡು ಚೆನ್ನಾಗಿ ಮನಸ್ಸಿಗೆ ಹತ್ತುವಂತೆ ಮಾಡುತ್ತಾನೆ. ಹೆಣ್ಣುಮಕ್ಕಳೇ ಹೆಚ್ಚಾಗಿ ಬರೆದ ಈ ತ್ರಿಪದಿಗಳಲ್ಲಿ ಸಂಸಾರದ ಅನುಭವಗಳೇ ಹೆಚ್ಚು. ಮಗುವಿನ ಆಟವನ್ನು ಕುರಿತು ಬೆಳದಿಂಗಳು ಎಲ್ಲರಂಗಳಕೆ ಹರಿದಾವು ಎಂದಿದ್ದಾಳೆ. ಮಗುವಿನ ಕುಡಿಹುಬ್ಬನ್ನು ಬೇವಿನ ಎಸಳಿಗೆ ಹೋಲಿಸುತ್ತಾಳೆ. ಸಂಗಾತಿ ಹೆಣ್ಣು ಜಂಬು ನೇರಿಳೆ ಹಣ್ಣು ಮುಂಗೈಯ ಹಿಡಿದು ನಗಿಸುವಳ ಮುಖಭಾವ ಮುಂಗಾರ ಮಿಂಚು ಹೊಳೆದ್ಹಂಗೆ ಎನ್ನುತ್ತಾಳೆ. ಸಂಗಾತಿ ಹುಬ್ಬು ಕಣ್ಣಿನ ಭಾವ ಹೊಸ ಮನೆಗೆ ರೇಖೆ ಎಳೆದಂತೆ ಎಂದಿದ್ದಾಳೆ. ಕಡಗ ಇಲ್ಲದ ಕೈ ಕರುಣ ಇಲ್ಲದ ಪುರುಷ ಎರಡೂ ಒಂದೇ ಎನ್ನುತ್ತಾಳೆ. ನೆರಿಗೆ ಯನ್ನು ಬೀಸಣಿಗೆಗೆ ಗುಲಗಂಜಿಗೆ ಹೋಲಿಸುತ್ತಾಳೆ. ಜಡೆಯನ್ನು ಜಾಲದ ಹೂವಿಗೆ ಹೋಲಿಸುತ್ತಾಳೆ. ಸೀರೆಯನ್ನು ಎಳ್ಳುಹೂವಿಗೂ ಬಾಳೆಪಟ್ಟೆಗೂ ಹೋಲಿಸುತ್ತಾಳೆ. ರವಿಕೆಯನ್ನು ಸೀರೆ ಮಗ್ಗಿಗೆ ಹೋಲಿಸು ತ್ತಾಳೆ. ಬೆಳ್ಳಿಯ ಕಾಲುಂಗರ, ಕೂಡಿದ ಕುಡಿಹುಬ್ಬು, ತೀಡಿದ ಬೈತಲೆ ಕಾಡಿಗೆಗಣ್ಣು ರಸಗೆಂಪು ತಂಬೂಲತುಟಿ; ಜಡೆಯನ್ನು ನಾಗರಹೆಡೆಗೆ ಹೋಲಿಸುತ್ತಾಳೆ. ಹುಡುಗಿಯ ಮುಖ ಸೂಜಿಮೊಸರಿಯಂತೆ, ಹುಡುಗ ಮೆಣಸಿನಕಾಯಿ; ಮೈಬಣ್ಣ ಇಂಬೀ ಹಣ್ಣಿನಂಗೆ ತುಂಬಿತು; ಮಾವನ ಮಗಳು ಗಾಳಿಬಂದರೆ ಬಳುಕುವವಳು ಎನ್ನುತ್ತಾಳೆ. ಹಳ್ಳದ ನೀರು ತರು

ತಾಳೆ ಎಂದು ಒಂದು ಸ್ವಾಭಾವಿಕ ಅಲಂಕಾರವನ್ನೇ ಹೇಳುತ್ತಾಳೆ. ಮಹವೀರ ಎಳೆಯ ಕೋಗಿಲೆಯ ಬಣ್ಣದ ಕವಚವನ್ನು ಧರಿಸಿದ್ದಾನೆ. ಹುಡುಗಿಯನ್ನು ವರ್ಣಿಸಬೇಕಾದರೆ, ನೋಡವಳಂದವ ಹೂವಿನ ಮಾಲೆ ಚಂದಾವ ಎನ್ನುತ್ತಾಳೆ. ಬಗ್ಗಿ ಸಣ್ಣಕ್ಕಿ ಅಳೆವವಳ ಮಡಲಲ್ಲಿ ಹುಬ್ಬು ಹಾಕವೆ ಚಿಗುರೆಲೆ. ಅತ್ತೆಮನೆ ಬೆಳದಿಂಗಳು ಬಿಸಿಲಾಯ್ತು ಎನ್ನುತ್ತಾಳೆ. ಕೆಟ್ಟ ದಾಂಪತ್ಯವನ್ನು ವರ್ಣಿಸಲು ಹೆಸರುಬೇಳೆಯನ್ನು ಕೆಸರಿನಲ್ಲಿ ಕಲಸಿ ದಂತೆ ಎನ್ನುತ್ತಾಳೆ. ಹೆಣ್ಣಿಗೆ ಕುಸುಮಾಲೆ ಎನ್ನುತ್ತಾಳೆ.

ವರ್ಣನೆಯಲ್ಲಿ ಈ ರೀತಿ ಪೂರ್ಣವಾಗಿರುವ ಈ "ತ್ರಿಪದಿ"ಗಳಲ್ಲಿ ವಿವೇಕವೂ ಸಂಸಾರಿಗಳಿಗೆ ಬೇಕಾದ ಜ್ಞಾನವೂ ತುಂಬಿದೆ. ಜಾಗರದ ನವಿಲಂತೆ ಬಾಗುತ್ತ ಬಳುಕುವ ಬಾಲೆಯ ಕಂಡು ಭ್ರಮಿಸಾದೆ ನಿನ್ನ ಮಡದಿಯನ್ನು ಹೊಂದಿ ಸುಖಿಯಾಗು. ನಾಯಿನೇರಿಲೆ ಹಣ್ಣು ನಾಲಗೆಗೆ ಕಡುರುಚಿ ಕೊಂಬೆ ಜಾರಿದರೆ ದುಸ್ಮಾನ; ಮೇಗಳ ಕೇರಿ ರಂಭೆಗಾಡಿದವನ ತಲೆ ಎರವು. ಕಂಡವರ ಹೆಣ್ಣಿಗೆ ಆಶಿಸುವನಿಗೆ ಸುಖವಿಲ್ಲ. ಕಂಡವರ ಹೆಣ್ಣನ್ನು ದಿಟ್ಟಿಸಿ ನೋಡುವುದರಿಂದ ಪ್ರಯೋಜನವೇನು? ಕಂಡವರ ಹೆಣ್ಣನ್ನು ಆಶಿಸುವವನು ಕಾರೆಕಾಯಿನ ಹಾಗೆ ಮೋರೆಬತ್ತಿ ಕೋರಿಯು ನೋಡಿ ಅಳಬೇಕಾಗುತ್ತದೆ. ಗಂಡಸು ಕಂಡವರ ಹೆಣ್ಣಿಗೆ ತನ್ನಲ್ಲಿ ಆಸೆ ಬರುವಂತೆ ಮಾಡಬಾರದು. "ನೀರಲ್ಲಿ ನಿಂತಿರುವ ನೀಲಿ ಪಾವಡದಣ್ಣ ನೀರು ಕೆಟ್ಟಾವು ಬದಿಗಾಗೊ; ಗಂಡುಳ್ಳ ಬಾಲೆ ಕೆಟ್ಟಾಳು ನಿನಗಾಗಿ." ಹೆಂಡತಿಯನ್ನು ಮದುವೆಯಾಗಿ ಸರಿಯಾಗಿ ಸಾಕದವನಿಗೆ, ಕರಿಯ ಕಂಬಳಿ ತಂದು ಹೊದೆಯಲಾರದ ಮೇಲೆ ಅದ ಯಾಕೆ ತಂದೆ ದರವೇಸಿ; ಕಂಡೋರ ಹೆಣ್ಣಮದುವ್ಯಾಗಿ ಗೋಳ ಹುಯ್ಕೊಂಡ್ಯ—ಎಂದು ತಿರಸ್ಕಾರ. ಅತ್ತಿಗೆ ಅಣ್ಣನನ್ನು ಕುಣಿಸುವುದನ್ನು ಹಳ್ಳದ ದಂಡೇಲಿ ಗಿಣಿಗಳು ಹಸುರು ಮೆಣಸಿನ ಕಾಯಿ ಕುಯ್ಯುವುದಕ್ಕೆ ಹೋಲಿಸಿದೆ. ಬಂಜೆಯ ಬಾಳನ್ನು ಬಾಡಿಗೆ ಎತ್ತಿಗೆ ಹೋಲಿಸಿದೆ. ಗಂಡನಿಲ್ಲದ ಬಾಳನ್ನು ಸುಣ್ಣವಿಲ್ಲದ ಗೋಡೆಗೂ ದೇವರಿಲ್ಲದ ಗುಡಿಗೂ ಹೋಲಿಸಿದೆ. ಅಣ್ಣತಮ್ಮನನ್ನು ಸೂರ್ಯ ಚಂದ್ರನೆನ್ನುತ್ತಾಳೆ. ತಮ್ಮನನ್ನು ಭೂಮಿತೂಕಕ್ಕೆ ಸಮ ಎನ್ನುತ್ತಾಳೆ.

ಹೆಂಡತಿ ಮೇಲೆ ಹೆಂಡತಿ ತಂದುದಕ್ಕೆ ಅಂಗಿ ಮೇಲೆ ಅಂಗಿ ರಂಭೆಮೇಲೆ ಪ್ರತಿರಂಭೆ ತರಬಹುದೇ ಎನ್ನುತ್ತಾಳೆ. ಮಳೆರಾಯನಿಗೆ, ಅಂಬು ಕೊಡುವವನೆ ಗೊಂಬೆ ಹಚ್ಚಡದವನೆ ರಂಭೆ ತೊಡೆಮೇಲೆ ಮಲಗಿರುವವನೆ ಎನ್ನುತ್ತಾಳೆ. ಮಗುವಿನ ಕಣ್ಣು ಕಾಡಿಗೆ ಹಚ್ಚಿದುದು, ಹುಬ್ಬು ತೀಡಿ ಮಾಡಿದುದು, ಮಾವಿನ ಹೋಳಿನಂತಹ ಕಣ್ಣು. ಮಲ್ಲಿಗೆ ಹೂವೆ ಇಲ್ಲಿ ಯಾಕೆ ನಿಂತೆ ಎಲ್ಲರ ಕಣ್ಣು ನಿನ ಮೇಲೆ—ಎಂದು ಮಗುವನ್ನು ಹೊಗಳುತ್ತಾಳೆ. ಮಗುವನ್ನು ಎತ್ತಿದ ವಲ್ಲಿ ಸೆರಗೆಲ್ಲ ಪರಿಮಳ. ಮಾವಿನ ಮಿಡಿ ಚೆಂದ ಹಾರಾಡಿ ಬರುವ ಗಿಣಿ ಚೆಂದ ಕಂದಯ್ಯ ನಮ್ಮ ಮನೆಗೆಲ್ಲ ನೀ ಚೆಂದ. ತಮ್ಮ ಬಾವುಲಿ ಇಟುಕೊಂಡು ಕಾವುಲಿ ತಿದ್ದುವ ಗಾಳಿ ಬಂದತ್ತ ಬಳುಕುವ ಬಾಳೆ ಎಲೆಗಿಂತ ಚೆಲುವ. ಹೆಣ್ಣಿನ ನಾಜೂಕನ್ನು ವರ್ಣಿಸಬೇಕಾದರೆ, ಅಕ್ಕೀಲಿ ಕುಸುಮವ ತೆಗೆಯುವಳು, ಸೆಲ್ಲಿಕಾಯಲ್ಲಿ ಒಳನಾರ ತೆಗೆವವಳು ಎಲ್ಲಿ ತಂದೆಯಣ್ಣ ಚೆಲುವೇಯ ಎನ್ನುತ್ತಾಳೆ. ಹೆಂಡತಿ ತವರು ಮನೆಗೆ ಹೋಗಿರುವುದನ್ನು ಗಂಡ ಹೇಳಬೇಕಾದರೆ, ಅಡಿಗೆ ಬಾಯಿಗೆ ರುಚಿ ಇಲ್ಲ ಎನ್ನುತ್ತಾನೆ. ಮಗಳನ್ನು, ಹಚ್ಚಿಕೊಂಡ ಅವ್ವನಿಗೆ ಜೊಚ್ಚಲಮಗಳಾದೆ; ಆದರೆ ಬಿಟ್ಟಾಡಿಕೊಳುವ ವೈರಿಗೆ ಬಿಚ್ಚುಕತ್ತಿಯಾಗಿ ಹೊಳೆದೆ ಎನ್ನುತ್ತಾಳೆ. ಮಳೆಯ ಆರ್ಭಟ ತಡೆಯಲು ರಂಭೆ ಕಂಬಿಯ ಸೆರಗ ಮರೆಮಾಡಿದಳು ಎನ್ನುತ್ತಾಳೆ. ಮಳೆ ಬಂದ ಆನಂದವನ್ನು ವರ್ಣಿಸಬೇಕಾದರೆ, ಗೊಂಬೆತೇರಿಗೆ ಹಸಿಬಿದ್ದೊ ರಂಭೆಯುಟ್ಟ ಪಟ್ಟೆ ಸೆರಗ್ಗೆ ಹರಿದಾವು ಎನ್ನುತ್ತಾಳೆ. ಮಳೆ ಹೆಚ್ಚಾಗಿ ಹುಯ್ದುದನ್ನು ತೋರಿಸಲು, ಅಣ್ಣಯ್ಯ ಉಟ್ಟ ಗೊಂಬೆ ಹಚ್ಚಡ ಗೊರೆಯಾದೊ ಎನ್ನುತ್ತಾಳೆ. ರೈತನ ಐಶ್ವರ್ಯವನ್ನು ಹೇಳಬೇಕಾದರೆ ರಾಸಿ ಅಳೆವುದರೊಳಗೆ ಬೆಳಗಾಯ್ತು ಎನ್ನುತ್ತಾಳೆ. ಮದುವೆಯಾಗಬೇಕು ಇಲ್ಲದಿದ್ದರೆ ಏನು ಪ್ರಯೋಜನ. ಹುಣಿಸೆಯ ಎಲೆಗಳ ಎಣಿಸಿ ನೋಡಿದರೇನು. ಹಣ್ಣಿನ ರುಚಿ ತಿಳಿಯಿತೇ. ಹೆಣ್ಣನ್ನು ಒಲಿಸಿಕೊಳ್ಳಬೇಕಾದರೆ, ಕಡಲೆಕಾಯಿನ್ಹಂಗೆ ಹಡಿಮುತ್ತ ಕಟ್ಟಿ ಸೇಸು ಕಡೆದ ಮಾಳಿಗೇಲಿ ಇರಿಸೇನು ಬೀದೀಲಿ ನಿಂತು ಬಿಡಿಮುತ್ತು ಕೇರೋಳೆ ಎಂದು; ಗುರುವನ್ನು, ಕಿವಿಯಲ್ಲಿ ಕಾಮಾಕ್ಷಿ ಕೊರಳಲ್ಲಿ ರುದ್ರಾಕ್ಷಿ

ನವಿಲುಗರಿ ಕಂತೆ ಹೆಗಲಲ್ಲಿ ಎಂದು ವರ್ಣಿಸುತ್ತಾರೆ. ಮನುಷ್ಯನಿಗೆ ಸಾರವಾದ ವಸ್ತು ಯಾವುದು ಎಂದು ತಿಳಿಯುವುದಿಲ್ಲ. ಸಾರವಾದ ವಸ್ತುವನ್ನು ಬಿಟ್ಟು ನೆಳಲನ್ನು ಆಶಿಸುತ್ತಾನೆ. ಮಾಣಿಕವನ್ನು ಬಿಟ್ಟು ಗಾಜನ್ನು ಆಶಿಸುತ್ತಾನೆ. ಅಳಿಯ ಬಂದ ಎಂದು ಬಿಳಿಯ ಹಚ್ಚಡವನ್ನು ತಂದು ಎಳೆಯ ಪ್ರಾಯದ ಹುಡುಗಿಯನ್ನು ಇತ್ತರು; ಆದರೆ ಹರಳುಂಗುರವಿಲ್ಲ ಎಂದು ಮುನಿದ. ಗೌಡರ ಮಗಳನ್ನು ವರ್ಣಿಸಬೇಕಾದರೆ, ಗೌಡರ ಮಗಳನ್ನ ತವಡ ಚೆಲ್ಲಲಿಬೇಡ. ಕಾಡಿನಾಗಯ್ತೆ ರಸಬೇಳೆ ನಿನ್ನ ಹುಬ್ಬಿನಾಗಯ್ತೆ ದೊರಿತನ ಎನ್ನುತ್ತಾಳೆ. ಮಳೆ ಇಲ್ಲದ ಮಳೆಗಾಲವನ್ನು, ನಾಯಿ ತಿನ್ನುವ ತವಡ ನಾರೀರು ತಿಂದಾರು ಎಂದು ಸೂಚಿಸುತ್ತಾಳೆ. ಗಂಗೆಯಷ್ಟು ಮೌನ ಗೌರಿಗೆ ಇಲ್ಲ; ನಡುನೀರ ತಂಪು ದಡಕಿಲ್ಲ; ಮಗಳ ಮಾಯೆ ಸೊಸೆಗೆ ಇಲ್ಲ. ಸೊಸೆ ಬರುತಾಳೆ ಬರುತಾಳೆ ಅಂತ ಖುಷಿ ಮಾಡಿದಳು; ಸೊಸೆ ಬಂದು ಮಗನ ಕಸುಕೊಂಡಳು; ಈಗ ತಾಯಿ ಬಾಯಿ ಬಿಡುತಾಳೆ. ಗಂಡು ಹಡೆದೆ ಎಂದು ಗರುವಿಕೆ ಪಡಬೇಡ; ಗಂಡೆಂಬ ಪಿಂಡ ಬೆಳೆದರೆ ನಾಳೆ ಹೆಂಡರ ಆಳಾಗಿ ನಡೆನ್ನೋದು. ಬಡವಿ ಆಡಿದ ಮಾತು ಜನಕ್ಕೆ ರುಚಿಸದು; ಒಡವೆ ಇಟ್ಟವ್ವ ಒನಬನದು ಹೇಳಿದರೆ ಜನ ಬಾಯಿ ಬಾಯಿ ಬಿಡುತಾರೆ. ಬಂಗಾರ ಬಳೆ ಇದೆ ಅಂತ ಜನರ ಬಯ್ಯಬೇಡ; ಭಂಗಾರ ನಿನಗೆ ಸ್ಥಿರವಲ್ಲ; ಮಧ್ಯಾಹ್ನದ ಬಿಸಿಲು ಹೊತ್ತು ಮೂಡುವುದು ತಡವಲ್ಲ. ಗಂಡ ಹೆಂಡತಿಯನ್ನು ಸ್ವಲ್ಪ ಹೆದರಿಕೆಯಲ್ಲಿ ಇಟ್ಟಿರಬೇಕು. ಇಲ್ಲದಿದ್ದರೆ ಮುಂದೆ ಗಂಡನ ಮಾತು ನಡೆಯುವುದಿಲ್ಲ. ಮಕ್ಕಳ ಬಯಸುವವರು ಮಕ್ಕಳಲ್ಲಿ ದಯೆಯುಳ್ಳವರಾಗಿರಬೇಕು. ಅತ್ತ ಮಕ್ಕಳ ಕೈಗೆ ತುತ್ತು ರೊಟ್ಟಿ ಕೊಡಲಿಲ್ಲ; ಮಕ್ಕಳನ್ನು ಬೇಡಿ ಪರ್ವತಕ್ಕೆ ಹೋದರೆ ಮುಕ್ಕಣ್ಣ ಶಿವನು ನಗನೆ! ಬೈದಂಥ ಬೈಗಳ ಬೆನ್ಹತ್ತಿ ಬಾರವು; ಬೈಗಳವನ್ನು ಮಲ್ಲಿಗೆ ಮಾಡಿ ಮುಡಿಹೋಗು. ಸಾಯುವಾಗ ಒಳ್ಳೆಯವಳು ಹೋದಳೆ ಅನ್ನಿಸಿಕೊಂಡು ಸಾಯಬೇಕು.

ಈ ಮಾತುಗಳೆಲ್ಲಾ ಮಾಣಿಕ್ಯಗಳು. ಹೃದಯದಲ್ಲಿ ತುಂಬಿದ ಭಾವಗಳನ್ನು ರೈತರು ಹಾಡಿಕೊಳ್ಳುವುದಕ್ಕಾಗಿಯೇ ಇವು ಹುಟ್ಟಿದುವು. "ನಮ್ಮ ರೈತ ಸ್ವಾಭಾವಿಕವಾಗಿ ಸುಸಂಸ್ಕೃತನಾದವನು. ಅವನ ಹೃದಯ

ವಿಶಾಲವೂ ಕೋಮಲವೂ ಆದುದು. ಅವನಿಗೆ ಸ್ವಲ್ಪ ಸಹಾನುಭೂತಿ, ಸ್ವಲ್ಪ ಸ್ನೇಹ, ಸ್ವಲ್ಪ ಸಮಾನತೆ ಇವು ಸಿಕ್ಕಿದರೆ ಸಾಕು. ಅವನು ಇತರ ದೇಶದ ರೈತರಿಗೆ ಸಮಾನವಾಗುವುದಂತೂ ಸರಿಯೆ. ಎಲ್ಲರನ್ನೂ ಮೆಟ್ಟಿ ನಿಲ್ಲುವ ಶಕ್ತಿ ಅವನಿಗೆ ಬರುವುದು. ನಾವು ಎಲ್ಲಿಯವರೆಗೆ ಅವನನ್ನು ನಮ್ಮ ಸರಿಸಮಾನವಾಗಿ ಎಣಿಸಿ ನಮ್ಮ ಜತೆಯಲ್ಲಿ ಕರೆದುಕೊಂಡು ಹೋದೆವೋ ಅಲ್ಲಿಯವರೆಗೆ ಅವನು ಜಗತ್ತಿನಲ್ಲಿ ಶ್ರೇಷ್ಠನಾಗಿಯೇ ಇದ್ದನು. ಅಶೋಕನ ರಾಜ್ಯವನ್ನು ಕಟ್ಟಿದವನು ಅವನೇ. ಪುಲಕೇಶಿಯ ಸೈನ್ಯಕ್ಕೆ ಇತಿಹಾಸದಲ್ಲಿ ಕೀರ್ತಿಯನ್ನು ತಂದವನು ಅವನೇ. ಶಿವಾಜಿಯ ಜತೆಯಲ್ಲಿ ಹಿಂದೂ ಸಾಮ್ರಾಜ್ಯವನ್ನು ಸ್ಥಾಪಿಸಿದವನೂ, ಎಂದೆಂದಿಗೂ ಮರೆಯದ ವಿಜಯ ನಗರ ಚಕ್ರಾಧಿಪತ್ಯವನ್ನು ಸೃಷ್ಟಿಸಿದವನೂ ಅವನೇ. ರಾಮಾಯಣ ಭಾರತ ಅವನಿಗೆ ತಿಳಿದಂತೆ ವಿದ್ಯಾವಂತರೆನಿಸಿಕೊಂಡ ನಮ್ಮಲ್ಲಿ ಅನೇಕರಿಗೆ ತಿಳಿದಿಲ್ಲ. ನ್ಯಾಯ ಅನ್ಯಾಯಗಳು ಅವನ 'ಅಸಂಸ್ಕೃತ ಅಜ್ಞಾನಕ್ಕೆ' ಗೋಚರವಾಗುವಷ್ಟು ಸುಲಭವಾಗಿ ನಮಗೆ ಗೋಚರವಾಗುವುದಿಲ್ಲ. ಅವನಲ್ಲಿ ಎಲ್ಲಿಯ ವರೆಗೆ ನಾವು ನಂಬಿಕೆಯನ್ನಿಟ್ಟು ಅವನ ಶಕ್ತಿಯಲ್ಲಿ ನಂಬಿಕೆಯನ್ನೂ ನೆಚ್ಚನ್ನೂ ತೋರಿಸಿದೆವೋ ಅಲ್ಲಿಯವರೆಗೆ ಅವನು ಜಗತ್ತಿನಲ್ಲಿ ತಾನೂ ತಲೆ ಎತ್ತಿಕೊಂಡು ನಡೆದು ನಾವೂ ತಲೆ ಎತ್ತಿಕೊಂಡು ನಡೆಯುವಂತೆ ನಮಗೆ ಕೆಚ್ಚನ್ನು ಕೊಟ್ಟನು. ಅನಂತರ ನಮ್ಮ ದಾರಿಯೂ ಅವನ ದಾರಿಯೂ ಬೇರೆಯಾಯಿತು. ಸ್ವಲ್ಪ ಹೆಚ್ಚು ಕಡಿಮೆ ಒಂದೇ ಸಂಸ್ಕೃತಿಯ ಮಟ್ಟದಲ್ಲಿದ್ದ ನಮ್ಮ ದೇಶದ ಜನ ಎರಡು ಭಾಗವಾಯಿತು. ದತ್ತು ಕೊಟ್ಟ ಮಕ್ಕಳಂತೆ ನಾವೆಲ್ಲಾ ಪರಭಾಷೆ ಪರಸಂಸ್ಕೃತಿಯ ವ್ಯಾಮೋಹಕ್ಕೆ ತುತ್ತಾದೆವು. ಈ ಅಸ್ವಾಭಾವಿಕವಾದ ವ್ಯತ್ಯಾಸದಿಂದ ವಿದ್ಯಾವಂತನೇ ಬೇರೆ ಅವಿದ್ಯಾವಂತನೇ ಬೇರೆ ಎಂಬಂತಾಯಿತು. ಆ ಪರ ಸಂಸ್ಕೃತಿಯ ವ್ಯಾಮೋಹದಿಂದ, ನಮಗೆ ಸ್ವಾಭಾವಿಕವಾಗಿ ಪಾಶ್ಚಾತ್ಯವಾದುದರಲ್ಲೆಲ್ಲಾ ದಾಸ್ಯ ಮನೋಭಾವವೂ ನಮ್ಮದರಲ್ಲೆಲ್ಲಾ ತಿರಸ್ಕಾರವೂ ಉಂಟಾಯಿತು. ಹಳ್ಳಿಯವನಿಗೂ ಪಟ್ಟಣಿಗರಿಗೂ ಈಗ ಇರುವಷ್ಟು ಅಂತರ ಯಾವಾಗಲೂ ಇರಲಿಲ್ಲ. ಅವನ ಜೀವನಕ್ಕೂ ನಮ್ಮ ಜೀವನಕ್ಕೂ

ಸಂಬಂಧವೇ ಇಲ್ಲ. ಅವನಿಗೆ ರಾಮಾಯಣ ಭಾರತವಾದರೆ ನಮಗೆ ಡ್ಯಾಂಟಿ ಷೇಕ್ಸ್‌ಪಿಯರ್; ಅವನಿಗೆ ಪ್ರತಾಪಸಿಂಹ ಅಶೋಕ ಶಿವಾಜಿ ಗಳಾದರೆ ನಮಗೆ ಜೂಲಿಯಸ್ ಸೀಸ್ಸರ್, ನೆಪೋಲಿಯನ್, ಎಲಿಸ್ಟಬೆತ್. ಆಗ ಅವನು ತನಗೆ ಸಮಾನವಾಗಿ ನಮ್ಮನ್ನು ಮೆರೆಸಿದನು. ನಾವು ಈಗ ಅವನಿಗೂ ನಮಗೂ ಇರುವ ಅಂತರ ಹಿಂದೆಂದೂ ಇಲ್ಲದಷ್ಟು ಮಾಡಿರು ವುದಲ್ಲದೆ, ನಮ್ಮ ದೇಶದ ಏಳಿಗೆಗೆ ಮುಖ್ಯವಾಗಿ ಸಾಧಕಗಳಾದ ಕೆಚ್ಚು, ಆತ್ಮಗೌರವ, ನಮ್ಮದರಲ್ಲಿ ನಮಗೆ ಅಭಿಮಾನ, ನಮ್ಮವರ ಶಕ್ತಿಯಲ್ಲಿ ನಮಗೆ ನಂಬಿಕೆ, ನಮ್ಮ ಶೂರರು ನಮ್ಮ ಧೀರರು—ಎಲ್ಲರನ್ನೂ ಕಳೆದುಕೊಂಡು ನಾವು ಬೇರೆ ರೈತನು ಬೇರೆ ಆಗಿದ್ದೇವೆ.

ಬಾಳನ್ನು ಬಾಳುವುದರಲ್ಲೂ ಕಷ್ಟಗಳಿಗೆ ಕೆಚ್ಚೆದೆಯನ್ನು ಒಡ್ಡಿ ಸಹಿಸಿ ಜಯಿಸುವುದರಲ್ಲಿಯೂ ಪ್ರಕೃತಿ ಸೌಂದರ್ಯವನ್ನು ಸವಿಯುವುದರಲ್ಲಿಯೂ ಕಾವ್ಯವನ್ನು ಸೃಷ್ಟಿಸುವುದರಲ್ಲಿಯೂ ಅವನು ಯಾರಿಗೂ ಕಡಿಮೆ ಅಲ್ಲ. ಆದರೆ ಅವನಿಗೆ ಅದಕ್ಕೆ ಒಂದು ಸಹಾನುಭೂತಿ, ಸ್ನೇಹವಾತಾವರಣ ಬೇಕು. ನಮ್ಮ ಜನದಲ್ಲಿ, ನಮ್ಮ ಜನದ ಶಕ್ತಿಯಲ್ಲಿ, ನಮ್ಮ ಜನದ ಯೋಗ್ಯತೆ ಯಲ್ಲಿ, ಯಾವ ಕೆಲಸವನ್ನಾದರೂ ಇವರು ಸಾಧಿಸಬಲ್ಲರೆಂಬ ತತ್ವದಲ್ಲಿ ನಮ್ಮ ಜನರಿಗೆ ನಮ್ಮ ಸರ್ಕಾರಕ್ಕೆ ನಮ್ಮ ಬಂಡವಾಳಗಾರರಿಗೆ ಪೂರ್ಣ ವಾಗಿ ನಂಬಿಕೆ ಬರಬೇಕು. ಆಡಳಿತ, ಕೈಗಾರಿಕೆ, ವ್ಯವಸಾಯ, ಧೈರ್ಯ ಸಾಹಸ ಯಾವುದರಲ್ಲೂ ನಮ್ಮವರು ಇತರರಿಗೆ ಕಡಿಮೆ ಅಲ್ಲವೆಂಬ ನಂಬಿಕೆ ನಮ್ಮ ದೇಶದ ಮುಖಂಡರಿಗೂ ನಮ್ಮ ಅರಮನೆ ಗುರುಮನೆ ಗಳಿಗೂ ಬರಬೇಕು. ಆಗ ನಮ್ಮ ರೈತನಲ್ಲಿ ಸುಪ್ತವಾಗಿರುವ ತೇಜಸ್ಸು ಪ್ರಕಾಶಿಸಲು ಪ್ರಾರಂಭವಾಗುತ್ತದೆ. ಅವನು ಜಗತ್ತಿನಲ್ಲಿ ಮತ್ತಾರಿಗೂ ಕಡಿಮೆ ಇಲ್ಲದಂತೆ ಬಾಳಿ ನಮ್ಮ ಅಸ್ವಾಭಾವಿಕ ಜೀವನಕ್ಕೆ ಹೊಸ ಶಕ್ತಿ ಯನ್ನು ಕೊಟ್ಟು ನಮ್ಮ ಬಾಳಿಗೆ ಸಾರ್ಥಕ್ಯವನ್ನುಂಟುಮಾಡುತ್ತಾನೆ.''

WESLEY PRESS AND PUBLISHING HOUSE, MYSORE CITY.

ಕಾವ್ಯಾಲಯ — ಪ್ರಕಾಶಕರು — ಮೈಸೂರು

ಕನ್ನಡ ಕಾವ್ಯಮಾಲೆ

ಬೆಳೆಯುತ್ತಿರುವ ಕನ್ನಡ ಗ್ರಂಥಮಾಲೆ; ಈ ಮಾಲೆಯಲ್ಲಿ ಕಥೆ, ಕವನ, ಕಾದಂಬರಿ, ನಾಟಕ, ಪ್ರಬಂಧ, ವಿಮರ್ಶೆ, ಭಾಷಣ, ಜೀವನ ಚರಿತೆ ಇತ್ಯಾದಿಯಾದ ಬಹುವಿಧದ ಗ್ರಂಥಗಳು ಪ್ರಕಟವಾಗುತ್ತವೆ.

ಪ್ರಕಟನೆಗಳು ಕ್ರೌನ್ ಅಷ್ಟಪತ್ರ ಆಕಾರದಲ್ಲಿ ಸುಮಾರು ೧೦೦ ರಿಂದ ೧೫೦ ಪುಟಗಳಷ್ಟಿರುತ್ತವೆ. ಬೆಲೆ, ಸಾದಾ ಪ್ರತಿಯೊಂದಕ್ಕೆ ಸಾಮಾನ್ಯವಾಗಿ ೧೨ ಆಣೆಯಿಂದ ರೂ. ೧—೪—೦; ಕ್ಯಾಲಿಕೊ ಪ್ರತಿಗೆ ರೂ. ೧—೪—೦ ರಿಂದ ರೂ. ೧—೧೨—೧.

ಇದುವರೆಗೆ ಪ್ರಕಟವಾಗಿರುವ ಗ್ರಂಥಗಳು

೧. ಕಿಂದರಿಜೋಗಿ ಮತ್ತು ಇತರ ಕಥನಕವನಗಳು—ಕೆ. ವಿ. ಪುಟ್ಟಪ್ಪ, ಎಂ.ಎ.; ಕ್ರೌನ್ ಅ. viii + ೧೦೪; ಬೆಲೆ, ಸಾದಾ ಪ್ರತಿ ರೂ. ೦—೧೨; ಕ್ಯಾಲಿಕೊ ಪ್ರತಿ ರೂ. ೧—೪.

೨. ಸಂನ್ಯಾಸಿ ಮತ್ತು ಇತರ ಕಥೆಗಳು—ಕೆ. ವಿ. ಪುಟ್ಟಪ್ಪ, ಎಂ.ಎ.; ಕ್ರೌನ್ ಅ. x + ೧೧೦ ; ಬೆಲೆ, ಸಾದಾ ಪ್ರತಿ ರೂ. ೦—೧೨ ; ಕ್ಯಾಲಿಕೊ ಪ್ರತಿ ರೂ. ೧—೪.

೩. ಚಿತ್ರಾಂಗದಾ—ಕೆ. ವಿ. ಪುಟ್ಟಪ್ಪ, ಎಂ.ಎ. ; ಕ್ರೌನ್ ಅ. vi + ೯೭ ; ಬೆಲೆ, ಸಾದಾ ಪ್ರತಿ ರೂ. ೦—೧೨ ; ಕ್ಯಾಲಿಕೊ ಪ್ರತಿ ರೂ. ೧—೪.

೪-೫. ಕಾನೂರು ಸುಬ್ಬಮ್ಮ ಹೆಗ್ಗಡಿತಿ—ಕೆ. ವಿ. ಪುಟ್ಟಪ್ಪ, ಎಂ.ಎ. ; ಭಾಗ ೧-೨. ಕ್ರೌನ್ ಅ. viii + ೧೯೬ ; ಬೆಲೆ, ಸಾದಾ ಪ್ರತಿ ರೂ. ೧—೮ ; ಕ್ಯಾಲಿಕೊ ಪ್ರತಿ ರೂ. ೨—೮.

೬-೭. ಭಾಗ ೩-೪. ಕ್ರೌನ್ ಅ. vi + ೧೯೭-೩೯೮ ; ಬೆಲೆ, ಸಾದಾ ಪ್ರತಿ ರೂ. ೧—೮ ; ಕ್ಯಾಲಿಕೊ ಪ್ರತಿ ರೂ. ೨—೮.

೮-೯. ಭಾಗ ೫-೬. ಕ್ರೌನ್ ಅ. vi + ೩೯೯-೬೦೪ ; ಬೆಲೆ, ಸಾದಾ ಪ್ರತಿ ರೂ. ೧—೮ ; ಕ್ಯಾಲಿಕೊ ಪ್ರತಿ ರೂ. ೨—೮.

೧೦-೧೧. ಭಾಗ ೭-೮. ಕ್ರೌನ್ ಅ. vi + ೬೦೫-೮೦೭ ; ಬೆಲೆ, ಸಾದಾ ಪ್ರತಿ ರೂ. ೧—೮ ; ಕ್ಯಾಲಿಕೊ ಪ್ರತಿ ರೂ. ೨—೮. ಒಟ್ಟು ೮ ಭಾಗಗಳು, ೮೦೭ ಪುಟಗಳು ; ಬೆಲೆ, ಸಾದಾ ಪ್ರತಿ ರೂ. ೬—೦ ; ಕ್ಯಾಲಿಕೊ ಪ್ರತಿ ರೂ. ೧೦—೦.

೧೨. ನನ್ನ ದೇವರು ಮತ್ತು ಇತರ ಕಥೆಗಳು—ಕೆ. ವಿ. ಪುಟ್ಟಪ್ಪ, ಎಂ.ಎ. ; ಕ್ರೌನ್ ಅ. vi + ೧೦೭ ; ಬೆಲೆ, ಸಾದಾ ಪ್ರತಿ ರೂ. ೦—೧೨ ; ಕ್ಯಾಲಿಕೊ ಪ್ರತಿ ರೂ. ೧—೪.

೧೩. ಅಹಲ್ಯೆ—ಪು. ತಿ. ನರಸಿಂಹಾಚಾರ್, ಬಿ.ಎ. ; ಕ್ರೌನ್ ಅ. xxiv + ೧೨೩ ; ಬೆಲೆ, ಸಾದಾ ಪ್ರತಿ ರೂ. ೧—೪ ; ಕ್ಯಾಲಿಕೊ ಪ್ರತಿ ರೂ. ೧—೧೨.

"ಇದರಲ್ಲಿ ಹಿನ್ನೆಲೆ ಮುನ್ನೆಲೆಯೆಂಬ ಭೇದವಿಲ್ಲದೆ, ಪ್ರಕೃತಿಯೊಂದಿಗೆ ಪಾತ್ರಗಳೂ ಪಾತ್ರಗಳೊಂದಿಗೆ ಪ್ರಕೃತಿಯೂ ಸಮತಾನವಾಗಿ ಎದೆ ಮಿಡಿಯುವುದನ್ನು ನೋಡಬಹುದು. ಈ ನಾಟಕದ ಉದ್ದಕ್ಕೂ ಬರುವ ವರ್ಣನೆಗಳಂತೂ ಉಜ್ವಲ ಪ್ರತಿಭೆಯಿಂದಲ್ಲದೆ ಹೊಮ್ಮುವುದು ಅಸಂಭವ. . . . ಇನ್ನು ಅವಿರತವಾಗಿ ಗೋಚರಿಸುವ ನಾಟಕಕಾರರ ಸೂಕ್ಷ್ಮದೃಷ್ಟಿ, ಧ್ವನಿಪೂರ್ಣವಾಗಿ ಮಾತುಗಳನ್ನೂ ಸಂಗತಿಗಳನ್ನೂ ಜೋಡಿಸುವ ಶಕ್ತಿ, ಛಂದಸ್ಸಿನಲ್ಲಿ ಬಗೆಬಗೆಯ ಪ್ರಯೋಗಗಳನ್ನು ನಡಸಿ ಹೊಸ ಸೊಗಸುಗಳನ್ನು ಹಲವೆಡೆಗಳಲ್ಲಿ ಸಾಧಿಸಿರುವ ಕೌಶಲ—ಈ ಮೊದಲಾದದ್ದನ್ನೆಲ್ಲಾ ಇಲ್ಲಿ ವಿವರಿಸಲು ಅವಕಾಶವಿಲ್ಲ ; . . ."

—ಶ್ರೀ ತೀ. ನಂ. ಶ್ರೀಕಂಠಯ್ಯನವರ 'ಪ್ರಸ್ತಾವನೆ' ಯಿಂದ.

It has more than half a dozen songs of entrancing, haunting melody which are sure to keep fresh through time. The verse dialogue, the solo songs and choruses, the beauties of nature and other description score all along in memorable utterance; the flexibility and variety of the metres employed, suiting situation or the prevailing need and mood are evidence of a high technical achievement.

—Mr. V. Sitaramiah in *The Hindu*.

೧೪. ಮೂರು ನಾಟಕಗಳು—ಕೆ. ವಿ. ಪುಟ್ಟಪ್ಪ, ಎಂ.ಎ. ; ಕ್ರೌನ್ ಅ. ೧೧೫ ; ಬೆಲೆ, ಸಾದಾ ಪ್ರತಿ ರೂ. ೧—೪ ; ಕ್ಯಾಲಿಕೊ ಪ್ರತಿ ರೂ. ೧—೧೨.

೧೫. ರಾಕ್ಷಸನ ಮುದ್ರಿಕೆ—ತೀ. ನಂ. ಶ್ರೀಕಂಠಯ್ಯ, ಎಂ.ಎ. ; ಕ್ರೌನ್ ೮. viii + ೧೦೮ ; ಬೆಲೆ, ಸಾದಾ ಪ್ರತಿ ರೂ. ೧—೦ ; ಕ್ಯಾಲಿಕೊ ಪ್ರತಿ ರೂ. ೧—೮.

'ರಾಕ್ಷಸನ ಮುದ್ರಿಕೆ' ವಿಶಾಖದತ್ತನ 'ಮುದ್ರಾರಾಕ್ಷಸ' ನಾಟಕದ ರೂಪಾಂತರ

"'ಮುದ್ರಾರಾಕ್ಷಸ'ವು ಸಂಸ್ಕೃತ ನಾಟಕ ವಾಙ್ಮಯದಲ್ಲಿ ಒಂದು ಅಪೂರ್ವವಾದ ಕೃತಿ. . . . ಕಥೆಯ ವಸ್ತು ಕೇವಲ ರಾಜಕೀಯ ತಂತ್ರ: ಇಲ್ಲಿ ಉದ್ದಕ್ಕೂ ಕಾಣಬರುವುದು ಆಯುಧಗಳ ಘರ್ಷಣವಲ್ಲ, ಬುದ್ಧಿಗಳ ಘರ್ಷಣ. . . . ಚಂದ್ರಗುಪ್ತನ ಪರಮಶತ್ರುವಾಗಿ, ಅವನನ್ನು ಕೊಲ್ಲಿಸಬೇಕೆಂದು ಹವಣಿಸುತ್ತಿದ್ದ ರಾಕ್ಷಸನು ಕಡೆಯಲ್ಲಿ ಅವನಿಗೇ ಅಮಾತ್ಯನಾಗಿ ನಿಲ್ಲಲು ಒಪ್ಪುವಂತೆ ಮಾಡುವುದೇ ಇಲ್ಲಿ ಚಾಣಕ್ಯನ ಉದ್ದೇಶ. ಇದಕ್ಕಾಗಿ ಅವನು ತಂತ್ರಗಳನ್ನು ಹೇಗೆ ಹೂಡುತ್ತಾನೆ; ತನ್ನ ಗೂಢಚಾರರನ್ನು ಎಡೆಯರಿತು ನಿಲ್ಲಿಸಿ, ಸಮಯವರಿತು ನಿಯೋಜಿಸಿ, ರಾಕ್ಷಸನ ಹೃದಯವನ್ನು ಹೇಗೆ ಆಕ್ರಮಿಸುತ್ತಾನೆ; ರಾಕ್ಷಸನ ಮಿತ್ರಸ್ನೇಹವನ್ನೇ ಮುಖ್ಯಸಾಧನವಾಗಿ ಉಪಯೋಗಿಸಿಕೊಂಡು ಅವನು ತನ್ನ ಕೈಗೆ ಬೀಳುವಂತೆ ಘಟನೆಗಳ ಜಾಲವನ್ನು ಹೇಗೆ ಹೆಣೆಯುತ್ತಾನೆ—ಇದೆಲ್ಲವನ್ನೂ ಈ ನಾಟಕದಲ್ಲಿ ಕುತೂಹಲದಿಂದ, ವಿಸ್ಮಯದಿಂದ ನೋಡುತ್ತೇವೆ. ಕಥಾಂಶಗಳೂ ಸಂವಾದಗಳೂ ಒಂದರೊಡನೊಂದು ಬಿಗಿಯಾಗಿ ಹೊಂದಿಕೊಂಡು ಅತ್ತಿತ್ತ ಅಲ್ಲಾಡದೆ ಒಂದೇ ಗುರಿಯನ್ನು ಹಿಡಿದು ಮುಂದೆ ಸಾಗುತ್ತವೆ. . . . ಈ ಕೌಟಿಲ್ಯಮಯವಾದ ರಾಜಕೀಯ ಜಗತ್ತಿನಲ್ಲಿ ಕೂಡ, ಕೆಸರಿನಲ್ಲಿ ಕಮಲ ಅರಳಿ ಸೌರಭವನ್ನು ಬೀರುವಂತೆ, ಸರ್ವನಾಶವನ್ನೂ ಲೆಕ್ಕಿಸದೆ ಸ್ನೇಹನಿಷ್ಠೆ ವಿಕಾಸಗೊಂಡು ನಾಟಕಕ್ಕೆ ಉದಾತ್ತತೆಯನ್ನುಂಟುಮಾಡಿದೆ. ಚಂದನದಾಸನ ಪಾತ್ರವನ್ನು ವಿಶಾಖದತ್ತನು ನಿರ್ಮಿಸಿ ಅಕುಟಿಲಸ್ನೇಹದ ಮುಂದೆ ಎಲ್ಲ ರಾಜಕೀಯ ಸಿದ್ಧಿಗಳೂ ಅಲ್ಪವೆಂಬುದನ್ನು ಮನಗಾಣಿಸಿದ್ದಾನೆ. ಮೈತ್ರಿಯ ವಿಜಯವೇ 'ಮುದ್ರಾರಾಕ್ಷಸ'ದ ಹೃದಯವೆನ್ನಬಹುದೋ ಏನೋ."

—ಗ್ರಂಥಕರ್ತರ 'ಅರಿಕೆ'ಯಿಂದ.

Mudrarakshasa is known to students of the Indian Drama as perhaps the best play of Political Intrigue written in ancient India. It has been put into Kannada once before, but a free version like the one under review clearing the

plot of much intricacy and cumber was very much needed. The play is here rendered into excellent Kannada, flexible, smooth and efficient—the kind of writing for which Mr. T. N. Srikantiah has a special gift. The drift of events is shown up as it progresses from point to point till it fulfills itself in achievement. . . . The play is now made extremely fit for enjoyment and presentation on the stage.

—*The Hindu.*

೧೬. ಹಳ್ಳಿಯ ಬಾಳು—ಗೊರೂರು ರಾಮಸ್ವಾಮಿ ಐಯಂಗಾರ್ ; ಕ್ರೌನ್ ಅ. vi + ೯೬ ; ಬೆಲೆ, ಸಾದಾ ಪ್ರತಿ ರೂ. ೧—೦ ; ಕ್ಯಾಲಿಕೊ ಪ್ರತಿ ರೂ. ೧—೮.

೧೭-೧೮. ಹರಿಹರಕವಿಯ ನಂಬಿಯಣ್ಣನ ರಗಳೆ—ಸಂಪಾದಕರು : ತೀ. ನಂ. ಶ್ರೀಕಂಠಯ್ಯ, ಎಂ.ಎ. (ಅಚ್ಚಿನಲ್ಲಿದೆ).

ಕಾವ್ಯಾಲಯದ ಇತರ ಪ್ರಕಟನೆಗಳು

೧. ಬೊಮ್ಮನಹಳ್ಳಿಯ ಕಿಂದರಿಜೋಗಿ—ಕೆ. ವಿ. ಪುಟ್ಟಪ್ಪ, ಎಂ.ಎ. ; ಕ್ರೌನ್ ಅ. ೧೬ ; ಬೆಲೆ, ೩ ಆಣೆ.

೨. ಯಮನಸೋಲು ಮತ್ತು ಇತರ ನಾಟಕಗಳು—ಕೆ. ವಿ. ಪುಟ್ಟಪ್ಪ, ಎಂ.ಎ. ; ಕ್ರೌನ್ ಅ. ೮೮ ; ಬೆಲೆ, ರೂ. ೦—೧೨.

೩. ಪರಮಾಣು (The Atom)—ಜಿ. ಆರ್. ರಂಗಸ್ವಾಮಿ, ಎಂ.ಎ. ; ಕ್ರೌನ್ ಅ. ೧೧ + ೨೧೨ (೧೪ ಚಿತ್ರಗಳೊಡನೆ) ; ಬೆಲೆ, ಸಾದಾ ಪ್ರತಿ ರೂ. ೨—೦ ; ಕ್ಯಾಲಿಕೊ ಪ್ರತಿ ರೂ. ೨—೪.

೪. ತೆರೆಮರೆಯ ಚಿತ್ರಗಳು (ಏಕಾಂಕ ನಾಟಕ)—ಎಂ. ವಿ. ಸೀತಾರಾಮಯ್ಯ, ಎಂ.ಎ. ; ಕ್ರೌನ್ ಅ. ii + ೪೯ ; ಬೆಲೆ, ರೂ. ೦—೮.

೫. ಸಾಹಿತ್ಯದ ಜೀವಾಳ (ಅನುವಾದ)—ಗೊರೂರು ರಾಮಸ್ವಾಮಿ ಐಯಂಗಾರ್ ; ಡೆಮಿ ಅ. iv + ೪೭ ; ಬೆಲೆ, ರೂ. ೦—೧೦.